ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 19 ಮಂಗಳವಾರ 2025

46

ಸಂಪುಟ: 46 | ಸಂಚಿಕೆ: 123 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

ಕೆಆರ್‌ಎಸ್ ಜಲಾಶಯದಿಂದ 1.20 ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ಬಿಡುಗಡೆ

ನದಿ ಪಾತ್ರದಲ್ಲಿ ಪ್ರವಾಹ ಭೀತಿ


ಮೈಸೂರು, ಆ.18(ಎಂಟಿವೈ)– ಕೊಡಗಿನಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ ಹೆಚ್ಚಾಗಿದ್ದು, ಸೋಮವಾರ ಸಂಜೆ ವೇಳೆಗೆ ಜಲಾಶಯದಿಂದ 41 ಗೇಟ್‌ಗಳಿಂದ 1.20 ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಬಿಟ್ಟ ಹಿನ್ನೆಲೆಯಲ್ಲಿ ಕಾವೇರಿ ಕಣಿವೆಯಲ್ಲಿ ಪ್ರವಾಹದ ಭೀತಿ ನಿರ್ಮಾಣವಾಗಿದೆ.

ಕಳೆದ ಕೆಲ ದಿನಗಳಿಂದ ವ್ಯಾಪಕ ಮಳೆ ಸುರಿಯುತ್ತಿದ್ದು, ಕೆಆರ್‌ಎಸ್ ಜಲಾಶಯಕ್ಕೆ 80 ಸಾವಿರಕ್ಕೂ ಹೆಚ್ಚು ಕ್ಯುಸೆಕ್ ನೀರು ಒಳಹರಿವಿದೆ. ಒಳ ಹರಿವಿನಲ್ಲಿ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆ ಇರುವುದರಿಂದ ಜಲಾಶಯದಿಂದ ಬಿಡುಗಡೆ ಮಾಡುವ ನೀರಿನ ಪ್ರಮಾಣವೂ ಇನ್ನಷ್ಟು ಹೆಚ್ಚಾಗಲಿದೆ.

ಸೋಮವಾರ ಬೆಳಗ್ಗೆ 8 ಗಂಟೆಗೆ ಜಲಾಶಯಕ್ಕೆ ಒಳಹರಿವು 33,052 ಕ್ಯುಸೆಕ್ ಇದ್ದು, ಜಲಾಶಯದ ನೀರಿನ ಮಟ್ಟ 124.54 ಅಡಿ (ಗರಿಷ್ಠ ಮಟ್ಟ:124.80 ಅಡಿ). ಅಣೆಕಟ್ಟೆ ಸುರಕ್ಷತೆ ದೃಷ್ಟಿಯಿಂದ ನದಿಗೆ 31,550 ಕ್ಯುಸೆಕ್ ನೀರು ಬಿಡಲಾಗುತ್ತಿತ್ತು. ಆದರೆ 11 ಗಂಟೆ ನಂತರ ನೀರಿನ ಪ್ರಮಾಣದಲ್ಲಿ ಗಣನೀಯ ಏರಿಕೆ ಕಂಡ ಹಿನ್ನೆಲೆಯಲ್ಲಿ ಜಲಾಶಯದಿಂದ 80 ಸಾವಿರ ಕ್ಯುಸೆಕ್ ನೀರು ನದಿಗೆ ಬಿಡಲಾಯಿತು. ಸಂಜೆ 4 ಗಂಟೆ ವೇಳೆಗೆ ಜಲಾಶಯಕ್ಕೆ 82,259 ಕ್ಯುಸೆಕ್ ಒಳಹರಿವಿತ್ತು. ಹಾಗಾಗಿ ಜಲಾಶಯದ 41 ಕ್ರೆಸ್ಟ್ ಗೇಟ್‌ಗಳಿಂದ 1.20 ಲಕ್ಷ ಕ್ಯುಸೆಕ್‌ಗೂ ಅಧಿಕ ನೀರು ಬಿಡುಗಡೆ ಮಾಡಿದ್ದು, ನದಿ ತಟದಲ್ಲಿ ಭೋರ್ಗರೆತ ಕಂಡುಬಂದಿದೆ.

ಜಲಾಶಯದ ಒಳಹರಿವಿನಲ್ಲಿ ಏರಿಕೆಯಾಗುತ್ತಲೇ ಇರುವ ಕಾರಣ ಜಲಾಶಯದಿಂದ ಇನ್ನಷ್ಟು ನೀರು ನದಿಗೆ ಬಿಡುವ ಸಾಧ್ಯತೆ ಇರುವುದರಿಂದ ಕಾವೇರಿ ಜಲಾನಯನ ಪ್ರದೇಶದ ತಗ್ಗು ಪ್ರದೇಶದ ಜನರಿಗೆ ಎಚ್ಚರಿಕೆ ನೀಡಲಾಗಿದೆ. ಸೋಮವಾರ ರಾತ್ರಿ ವೇಳೆಗೆ ಜಲಾಶಯದಿಂದ 1.50 ಲಕ್ಷ ಕ್ಯುಸೆಕ್ ನೀರು ನದಿಗೆ ಬಿಡುವ ಸಾಧ್ಯತೆ ಇದೆ ಎಂದು ಕಾವೇರಿ ನೀರಾವರಿ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮೂರನೇ ಬಾರಿ ಭರ್ತಿ: ಈ ಬಾರಿ ಮಾನ್ಸೂನ್ ಉತ್ತಮ ಆರಂಭ ಕಂಡಿದ್ದು, ವ್ಯಾಪಕ ಮಳೆಯಾದ ಹಿನ್ನೆಲೆಯಲ್ಲಿ ಹಳೆ ಮೈಸೂರು ಪ್ರಾಂತ್ಯದ ಪ್ರಮುಖ ಜಲಾಶಯಗಳಲ್ಲಿ ಒಂದಾದ ಕೆಆರ್‌ಎಸ್ ಜಲಾಶಯ 96 ವರ್ಷದ ಬಳಿಕ ಜೂನ್ ಕೊನೆ ವಾರದಲ್ಲೇ ಭರ್ತಿಯಾಗಿತ್ತು. ಜೂ.30ರಂದು ಜಲಾಶಯಕ್ಕೆ ಬಾಗಿನ ಅರ್ಪಿಸಲಾಗಿತ್ತು. ಆ ನಂತರವೂ ಒಳಹರಿವಿನ ಪ್ರಮಾಣ ಹೆಚ್ಚಾಗಿದ್ದರಿಂದ ಜಲಾಶಯದಿಂದ 50ರಿಂದ 80 ಸಾವಿರ ಕ್ಯುಸೆಕ್ ನೀರು ನದಿಗೆ ಬಿಡಲಾಗಿತ್ತು. ನಂತರ ಜುಲೈ ಎರಡನೇ ವಾರದಲ್ಲೂ ■6ನೇ ಪುಟಕ್ಕೆ



ಕೊಡಗು ಭಾಗದಲ್ಲಿ ಧಾರಾಕಾರ ಮಳೆಯಿಂದಾಗಿ ಕೆಆರ್‌ಎಸ್ ಜಲಾಶಯಕ್ಕೆ ಒಳಹರಿವಿನ ಪ್ರಮಾಣ ಹೆಚ್ಚಾಗಿದ್ದು, ಸೋಮವಾರ ಸಂಜೆ ಜಲಾಶಯದಿಂದ 1.20 ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ನದಿಗೆ ಬಿಡಲಾಯಿತು. /ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಆ.31, ಮೈಸೂರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ

ಮೈಸೂರು, ಆ.18(ಎಂಟಿವೈ)– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆ.31ರಂದು ರಾತ್ರಿ ಮೈಸೂರಿಗೆ ಆಗಮಿಸಿ ವಾಸ್ತವ್ಯ ಹೂಡಲಿದ್ದು, ಸೆ.1ರಂದು ಆಲ್ ಇಂಡಿಯಾ ಇನ್ಸ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯ 60ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೈಸೂರಿಗೆ ಎರಡನೇ ಬಾರಿಗೆ ಆಗಮಿಸುತ್ತಿದ್ದು, 2022ರ ಸೆ.26ರಂದು ನಾಡಹಬ್ಬ ■6ನೇ ಪುಟಕ್ಕೆ



ಸೇತುವೆಯಿಂದ ಹಾರಿ ಪೇದೆ ಆತ್ಮಹತ್ಯೆ ಯತ್ನ

ಕೊಳ್ಳೇಗಾಲ, ಆ.18– ಚನ್ನಪಟ್ಟಣ ಪೊಲೀಸ್ ತರಬೇತಿ ಶಾಲೆಯಲ್ಲಿ ಕರ್ತವ್ಯ ನಿರತ ಪೊಲೀಸ್ ಪೇದೆಯೊಬ್ಬರು ವೈಯಕ್ತಿಕ ಕಾರಣಕ್ಕಾಗಿ ಜೀವನದಲ್ಲಿ ಬೇಸತ್ತು ಶಿವನ ಸಮುದ್ರದ ವೆಸ್ಲಿ ಸೇತುವೆಯಿಂದ ಹಾರಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.



ಮೈಸೂರಿನವರೆನ್ನಲಾದ ಪೇದೆ ಭೃಂಗೇಶ್ ಇಂದು ಮಧ್ಯಾಹ್ನ ಸೇತುವೆ ವೀಕ್ಷಿಸುವ ನೆಪದಲ್ಲಿ ಕೆಲಹೊತ್ತು ನಿಂತಿದ್ದು, ಏಕಾಏಕಿ ನದಿಗೆ ಹಾರಿ ಮರವೊಂದರ ಆಶ್ರಯ ಪಡೆದು ಕಾಪಾಡಿ ಕಾಪಾಡಿ ಎಂದು ಕೂಗಿಕೊಳ್ಳುತ್ತಿದ್ದರೆನ್ನಲಾಗಿದೆ ಅಲ್ಲಿಯೇ ಇದ್ದ ಪ್ರವಾಸಿಗರಾದ ಮಾದೇಶ್, ರತ್ನಮ್ಮ ಮತ್ತು ಶೋಭ ಸಹಾಯಕ್ಕೆ ಕೂಗಿಕೊಂಡರೆನ್ನಲಾಗಿದೆ. ■6ನೇ ಪುಟಕ್ಕೆ

ಧರ್ಮಸ್ಥಳದಲ್ಲಿ ಅಸಹಜ ಸಾವು ಆರೋಪ ಪ್ರಕರಣ

ಉತ್ಖನನ ಸದ್ಯ ಸ್ಥಗಿತ

- ವಿಧಾನಸಭೆಯಲ್ಲಿ ಗೃಹ ಸಚಿವ ಪರಮೇಶ್ವರ್ ಸುದೀರ್ಘ ವಿವರಣೆ
- ಆರೋಪ ಸಂಬಂಧ ಇಲ್ಲಿವರೆಗೆ ತನಿಖೆಯೇ ಆರಂಭವಾಗಿಲ್ಲ
- ದೊರೆತಿರುವ ಅಸ್ಥಿಪಂಜರ, ಮೂಳೆಗಳ ಎಫ್‌ಎಸ್‌ಎಲ್ ವರದಿ ಬಳಿಕ ತನಿಖೆ

ಬೆಂಗಳೂರು, ಆ.18– ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾದ ಅಸಹಜ ಸಾವುಗಳ ಬಗ್ಗೆ ನಡೆದಿರುವ ಎಸ್‌ಐಟಿ ತನಿಖೆಯನ್ನು ನಿಲ್ಲಿಸುವುದಿಲ್ಲ ಎಂದು ಘೋಷಿಸಿರುವ ಗೃಹಮಂತ್ರಿ ಡಾ. ಜಿ. ಪರಮೇಶ್ವರ್, ಸದ್ಯ ಲಭ್ಯವಾಗಿರುವ ಅಸ್ಥಿಪಂಜರ, ಮೂಳೆ ಮತ್ತು ಮಣ್ಣಿನ ಮಾದರಿ ಪರೀಕ್ಷೆಗಳ ವರದಿ ಬರುವವರೆಗೆ ಉತ್ಖನನ ಕಾರ್ಯ ಸ್ಥಗಿತಗೊಳಿಸುವುದಾಗಿ ತಿಳಿಸಿದ್ದಾರೆ.

ವಿಧಾನಸಭೆಯಲ್ಲಿ ಧರ್ಮಸ್ಥಳದ ವಿದ್ಯಮಾನಗಳ ಕುರಿತಾಗಿ ನಡೆದ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಅವರು, ಆರೋಪಗಳ ಕುರಿತಂತೆ ಇಲ್ಲಿಯವರೆಗೆ ತನಿಖೆಯೇ ಆರಂಭವಾಗಿಲ್ಲ. ದೂರು ನೀಡಿದ ವ್ಯಕ್ತಿ ನ್ಯಾಯಾಧೀಶರ ಮುಂದೆ ನೀಡಿರುವ ಹೇಳಿಕೆ ಆಧರಿಸಿ ಉತ್ಖನನ ಕಾರ್ಯ ನಡೆಸಲಾಗಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಯಾವುದೋ ಒತ್ತಡ ಅಥವಾ ಪೂರ್ವಗ್ರಹಪೀಡಿತವಾಗಿ ಪ್ರಕರಣದ ಬಗ್ಗೆ ತನಿಖೆ ನಡೆಸಲು ಎಸ್‌ಐಟಿ ರಚನೆ ಮಾಡಿಲ್ಲ. ಸಮೂಹ ಮಾಧ್ಯಮಗಳಲ್ಲಿ ಬಂದ ವರದಿಯನ್ನು ಆಧರಿಸಿ ಮಹಿಳಾ ಆಯೋಗದ ಅಧ್ಯಕ್ಷರು ಮಾಡಿದ ಮನವಿಯನ್ನು ಪರಿಗಣಿಸಿ ಎಸ್‌ಐಟಿ ರಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.



ಧರ್ಮಸ್ಥಳ ದೇವಸ್ಥಾನಕ್ಕೆ ಕೋಟಿ ಭಕ್ತರು ಇದ್ದಾರೆ. ಸಮಾಜದಲ್ಲಿ ಅದಕ್ಕೇ ಆದ ಸ್ಥಾನ ಇದೆ. 2025ರ ಜು.3 ರಂದು ಒಬ್ಬ ವ್ಯಕ್ತಿಯಿಂದ ■6ನೇ ಪುಟಕ್ಕೆ

ಸಿಎಂ ಸಿದ್ದರಾಮಯ್ಯ ವಿರುದ್ಧ ಕೊಲೆ ಆರೋಪ; ಮಹೇಶ್ ತಿಮರೋಡಿ ಬಂಧನಕ್ಕೆ ಆದೇಶ

ಬೆಂಗಳೂರು, ಆ.18– ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಸೌಜನ್ಯ ಪರ ಹೋರಾಟದಲ್ಲಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿದ್ದ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ '28 ಕೊಲೆ ಮಾಡಿದ್ದಾರೆ' ಎಂಬ ಗಂಭೀರ ಆರೋಪ ಮಾಡಿದ್ದ ಮಹೇಶ್ ತಿಮರೋಡಿ ಬಂಧನಕ್ಕೆ ಗೃಹ ಸಚಿವಾಲಯ ಆದೇಶ ನೀಡಿದೆ.



ಮಹೇಶ್ ತಿಮರೋಡಿ

ಸಿಎಂ ಸಿದ್ದರಾಮಯ್ಯ ಕೊಲೆ ಮಾಡಿದ್ದಾರೆ ಎಂದು ತಿಮರೋಡಿ ಹೇಳಿಕೆ ನೀಡಿದ್ದ 2023ರ ಈ ಆಡಿಯೋ ಕ್ಲಿಪ್ ಇದೀಗ ವೈರಲ್ ಆಗುತ್ತಿದ್ದು, ವಿಚಾರ ವಿಧಾನಸಭೆಯಲ್ಲಿ ತೀವ್ರ ಗದ್ದಲಕ್ಕೆ ಕಾರಣವಾಯಿತು. ತಿಮರೋಡಿ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ಹಿರಿಯ ಶಾಸಕ ಸುರೇಶ್ ಕುಮಾರ್ ಆಗ್ರಹಿಸಿದರು. ಅಲ್ಲದೇ ಕಾಂಗ್ರೆಸ್ ಶಾಸಕರೂ ಅದಕ್ಕೆ ಧ್ವನಿಗೂಡಿಸಿದ್ದರು. ವಿಧಾನಸಭೆಯ ಚರ್ಚೆಯ ನಂತರ ಗೃಹ ಸಚಿವ ಜಿ. ಪರಮೇಶ್ವರ್ ಅವರು, ಮಹೇಶ್ ತಿಮರೋಡಿ ಅವರನ್ನು ಬಂಧಿಸುವಂತೆ ಮಂಗಳೂರು ಪೊಲೀಸ್ ಕಮಿಷನರ್‌ಗೆ ಸೂಚನೆ ನೀಡಿದ್ದಾರೆ.

ಬುರುಡೆ ಕೊಟ್ಟು ಎಸ್‌ಐಟಿ ಮುಂದೆ ಶರಣಾಗಲು ಆ.. ಗುಂಪು ಹೇಳಿತ್ತು !!

ಎಸ್‌ಐಟಿ ಮುಂದೆ ಸತ್ಯ ಬಿಚ್ಚಿಟ್ಟ ಅನಾಮಿಕ

ಬೆಂಗಳೂರು, ಆ.18– ಹಿಂದೂ ಧರ್ಮದ ಪವಿತ್ರ ಧಾರ್ಮಿಕ ಕ್ಷೇತ್ರ ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತಿದ್ದೇನೆ ಎಂದು ಮುಂದೆ ಬಂದಿರುವ ಅನಾಮಿಕ ತಾನಾಗಿಯೇ ಮುಂದೆ ಬಂದಿಲ್ಲ. ಆ... ಒಂದು ಗುಂಪು ನನಗೆ ಬುರುಡೆ ಕೊಟ್ಟು ಎಸ್‌ಐಟಿ ಮುಂದೆ ಶರಣಾಗಲು ಹೇಳಿತ್ತು. ಬುರುಡೆ ಕೊಟ್ಟು ಅವರು ಹೇಳಿದಂತೆ ನಾನು ಹೇಳಿದ್ದೇನೆ ಎಂದು ದೂರುದಾರ ಅನಾಮಿಕ ವಿಶೇಷ ತನಿಖಾ ತಂಡದ ಮುಂದೆ ಹೇಳಿದ್ದಾನೆ.

ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ (ವಿಶೇಷ ತನಿಖಾ ತಂಡ) ಮುಂದೆ ಹಾಜರಾದ ದೂರುದಾರ ಅನಾಮಿಕ, ತಾನು ಒತ್ತಡಕ್ಕೆ ಒಳಗಾಗಿ ಸುಳ್ಳು ಹೇಳಿಕೆ ನೀಡಿರುವುದಾಗಿ ಸ್ಫೋಟಕ ಹೇಳಿಕೆ ನೀಡಿದ್ದಾನೆ. ಈ ಹೇಳಿಕೆಯು ಪ್ರಕರಣಕ್ಕೆ ಹೊಸ ತಿರುವು ನೀಡಿದ್ದು, ತನಿಖಾಧಿಕಾರಿಗಳು ಆತನ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ.

ಅನಾಮಿಕನ ಹೇಳಿಕೆ: ನಾನು 2014ರಲ್ಲಿ ಧರ್ಮಸ್ಥಳವನ್ನು ಬಿಟ್ಟ ನಂತರ ತಮಿಳುನಾಡಿನಲ್ಲಿ ನೆಲೆಸಿದ್ದೆ. 2023ರಲ್ಲಿ ಕೆಲವು ಜನರ ಗುಂಪು ನನ್ನನ್ನು ಸಂಪರ್ಕಿಸಿ, ಶವಗಳ ಹೂತಿದ್ದ ಬಗ್ಗೆ ಕೇಳಿತು. ಕಾನೂನು ಪ್ರಕಾರವೇ ಶವಗಳನ್ನು ಹೂತಿದ್ದೆ ಎಂದು ನಾನು ಅವರಿಗೆ ಹೇಳಿದ್ದೆ ಎಂದು ಆತ ತಿಳಿಸಿದ್ದಾನೆ. ಆ ಗುಂಪು ತನ್ನನ್ನು ಪೊಲೀಸರ ಮುಂದೆ ಶರಣಾಗುವಂತೆ ಒತ್ತಡ ಹೇರಿದೆ. ■6ನೇ ಪುಟಕ್ಕೆ

ವಿಶ್ವ ದಾಖಲೆಯಾದ 'ಶಕ್ತಿ'!




ಬೆಂಗಳೂರು, ಆ.18– ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡಿದ ರಾಜ್ಯ ಸರ್ಕಾರದ ಶಕ್ತಿ ಯೋಜನೆಯು ಪ್ರತಿಷ್ಠಿತ ವಿಶ್ವ ದಾಖಲೆಗೆ ಸೇರ್ಪಡೆಯಾಗಿದೆ.

ರಾಜ್ಯ ಸರ್ಕಾರದ ಐದು ಗ್ಯಾರಂಟಿಗಳಲ್ಲಿ ಒಂದಾದ ಶಕ್ತಿ ಯೋಜನೆ 'ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್'ಗೆ ಸೇರ್ಪಡೆಯಾಗಿದೆ. 2023ರ ಜೂನ್ 11 ರಿಂದ 2025 ಜುಲೈ 25ರ ಅವಧಿಯಲ್ಲಿ ನಾಲ್ಕೂ ನಿಗಮದ ಸಾರಿಗೆ ಬಸ್‌ಗಳಲ್ಲಿ 5049476416 ಮಹಿಳೆಯರು (500 ಕೋಟಿ) ಉಚಿತ ಟಿಕೇಟ್ ಪಡೆದು ಪ್ರಯಾಣ ಮಾಡಿದ್ದಾರೆ. ಈ ಕಾರಣದಿಂದ ಶಕ್ತಿ ಯೋಜನೆ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿದೆ. ಶಕ್ತಿ ಯೋಜನೆ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆದಿರುವುದು ಅತೀವ ಸಂತಸ ಮತ್ತು ಹೆಮ್ಮೆಯ ಕ್ಷಣವಾಗಿದೆ ಎಂದು ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಹೇಳಿದ್ದಾರೆ. ಈ ಕುರಿತಂತೆ ಮಾಹಿತಿ ನೀಡಿರುವ ಅವರು, ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆ ಹಾಗೂ ಮಹಿಳಾ ಸಬಲೀಕರಣದ ದಿಟ್ಟ ಯೋಜನೆಯಾದ ■6ನೇ ಪುಟಕ್ಕೆ



ಪಬ್‌ನಲ್ಲಿ ಕುಡಿದು ರಂಪಾಟ; ಸಿಸಿಬಿ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಅಮಾನತು



ಪಬ್‌ನಲ್ಲಿ ಕುಡಿದು ಗಲಾಟೆ ಮಾಡುತ್ತಿರುವ ಮೋಹನ್‌ಕುಮಾರ್.

ಮೈಸೂರು, ಆ.18– ಕಂಠಪೂರ್ತಿ ಕುಡಿದು ಪಬ್‌ನಲ್ಲಿ ಗಲಾಟೆ ಮಾಡಿದ್ದ ಮೈಸೂರು ನಗರ ಸಿಸಿಬಿ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಅವರನ್ನು ಅಮಾನತುಗೊಳಿಸಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶಿಸಿದ್ದಾರೆ.

ಈ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಸೀಮಾ ಲಾಟ್ಕರ್, ದುರ್ನಡತೆ ಹಾಗೂ ಇಲಾಖೆಗೆ ಅಗೌರವ ತಂದಿರುವ ಕಾರಣದಿಂದ ಇಲಾಖಾ ವಿಚಾರಣೆ ಬಾಕಿ ಇರಿಸಿ, ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಅವರನ್ನು ಕರ್ತವ್ಯದಿಂದ ಅಮಾನತುಪಡಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ವಾರಾಂತ್ಯದ ಹಿನ್ನೆಲೆಯಲ್ಲಿ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ಕುಟುಂಬಸ್ಥರು ಹಾಗೂ ಸ್ನೇಹಿತರೊಂದಿಗೆ ಚಾಮುಂಡಿ ಬೆಟ್ಟ ರಸ್ತೆ, ಜೆ.ಸಿ.ನಗರದ ಬಡಾವಣೆಯ ಪಬ್‌ಗೆ ತೆರಳಿದ್ದರು. ಆ ವೇಳೆ ಕಂಠ ಪೂರ್ತಿ ■6ನೇ ಪುಟಕ್ಕೆ

ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ತಂದೆ-ತಾಯಿ ಮೈಸೂರು ಭೇಟಿ

ಕೃಷ್ಣಮೂರ್ತಿಪುರಂನ ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ರಾಯರ ದರ್ಶನ

ಮೈಸೂರು, ಆ.18 (ಬಿಎಲ್‌ಯು)– ಬ್ರಿಟನ್‌ನ ಮಾಜಿ ಪ್ರಧಾನಿ ರಿಷಿ ಸುನಕ್ ಅವರ ತಂದೆ ಯಶ್ವೀರ್ ಸುನಕ್ ಹಾಗೂ ತಾಯಿ ಉಷಾ ಸುನಕ್ ಅವರು ಖಾಸಗಿ ಕಾರ್ಯಕ್ರಮದ ನಿಮಿತ್ತ ಸಾಂಸ್ಕೃತಿಕ ನಗರಿ ಮೈಸೂರಿಗೆ ಸೋಮವಾರ ಭೇಟಿ ನೀಡಿದ್ದರು.


ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ರಾಘವೇಂದ್ರಸ್ವಾಮಿ ಮಠಕ್ಕೆ ಯಶ್ವೀರ್ ದಂಪತಿ ಇಂದು ಬೆಳಿಗ್ಗೆ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಅವರು ಸೊಸೆ ಅಕ್ಷತಾ ಮೂರ್ತಿ ಅವರ ತಂದೆ ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎನ್. ಆರ್.ನಾರಾಯಣ ಮೂರ್ತಿ ಅವರ ಜೊತೆ ಇದ್ದರು.

ರಾಘವೇಂದ್ರಸ್ವಾಮಿ ಮಠದಲ್ಲಿ ರಾಯರಿಗೆ ವಿಶೇಷ ಪೂಜೆ ಸಲ್ಲಿಸಿ, ಯಶ್ವೀರ್ ಹಾಗೂ ಉಷಾ ದಂಪತಿ ಕೆಲ ಸಮಯ ಸನ್ನಿಧಿಯಲ್ಲಿದ್ದರು. ಈ ವೇಳೆ ಮಠದಲ್ಲಿರುವ ಹಸುಗಳಿಗೆ ಬಾಳೆಹಣ್ಣು ಹಾಗೂ ಬೆಲ್ಲ ತಿನ್ನಿಸಿದರು.

ಈ ಸಂದರ್ಭದಲ್ಲಿ 'ಮೈಸೂರು ಮಿತ್ರ' ಜೊತೆ ಮಾತನಾಡಿದ ಯಶ್ವೀರ್ ಅವರು, ಈ ಹಿಂದೆ ಹಲವು ಬಾರಿ ನಾನು ಮೈಸೂರಿಗೆ ಭೇಟಿ ನೀಡಿದ್ದೆ. ಆದರೆ ರಾಘವೇಂದ್ರಸ್ವಾಮಿ ಮಠಕ್ಕೆ ಭೇಟಿ ನೀಡಿರಲಿಲ್ಲ. ಈಗ ಮಠದಲ್ಲಿ ವಿಶೇಷ ಪೂಜೆ ಸಲ್ಲಿಸಿರುವೆ ಎಂದರು.

ಮಂತ್ರಾಲಯದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ಮಠಕ್ಕೆ ಭೇಟಿ ನೀಡಿ, ರಾಯರ ಮೂಲ ಬೃಂದಾವನ ದರ್ಶನ ಪಡೆದಿದ್ದೆವು. ಈಗ ಮೈಸೂರಿನ ಮಠಕ್ಕೂ ಭೇಟಿ ನೀಡಿ ರಾಯರ ದರ್ಶನ ಪಡೆದಿದ್ದೇವೆ ಎಂದರು.





ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀ ರಾಘವೇಂದ್ರಸ್ವಾಮಿ ಮಠಕ್ಕೆ ಸೋಮವಾರ ಬ್ರಿಟನ್ ಮಾಜಿ ಪ್ರಧಾನಿ ರಿಷಿ ಸುನಕ್ ಅವರ ತಂದೆ ಯಶ್ವೀರ್ ಸುನಕ್, ತಾಯಿ ಉಷಾ ಸುನಕ್ ಹಾಗೂ ಇವರ ಬೀಗರಾದ ಇನ್ಫೋಸಿಸ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎನ್.ಆರ್.ನಾರಾಯಣ ಮೂರ್ತಿ ಅವರು ಭೇಟಿ ನೀಡಿ, ರಾಯರ ದರ್ಶನ ಪಡೆದರು.

ಮೈಸೂರು ಮಿತ್ರ ಮಂಗಳವಾರ 19 ಆಗಸ್ಟ್ 2025

ಪ್ರಬುದ್ಧ ಪ್ರಜೆಗಳಿಂದ ಬಲಿಷ್ಠ ಭಾರತ

ನಗರಪಾಲಿಕೆ ನಿಕಟಪೂರ್ವ ಸದಸ್ಯ ಕೆ.ವಿ.ಶ್ರೀಧರ್ ಅಭಿಮತ



ಮೈಸೂರಿನ ವಿಜಯನಗರ ರೈಲ್ವೇ ಲೇಔಟ್‌ನ ಕ್ರೀಡಾಂಗಣದಲ್ಲಿ ನವಭಾರತ್ ಸೇವಾ ಟ್ರಸ್ಟ್ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮೈಸೂರು ಪಾಲಿಕೆ ನಿಕಟಪೂರ್ವ ಸದಸ್ಯ ಕೆ.ವಿ.ಶ್ರೀಧರ್ ಧ್ವಜಾರೋಹಣ ನೆರವೇರಿಸಿದರು.

ಮೈಸೂರು,ಆ.18–ಶಿಸ್ತುಬದ್ಧ ಜೀವನ, ಸ್ವಾಭಿಮಾನ ಮತ್ತು ಪ್ರಬುದ್ಧ ಪ್ರಜೆಗಳಿಂದ ಮಾತ್ರ ಬಲಿಷ್ಠ ಭಾರತ ನಿರ್ಮಾಣ ಸಾಧ್ಯ ಎಂದು ಮೈಸೂರು ಮಹಾನಗರ ಪಾಲಿಕೆ ನಿಕಟಪೂರ್ವ ಸದಸ್ಯ ಕೆ.ವಿ. ಶ್ರೀಧರ್ ಅಭಿಪ್ರಾಯಪಟ್ಟರು.

ನಗರದ ವಿಜಯನಗರ ರೈಲ್ವೇ ಲೇಔಟ್‌ನ ಕ್ರೀಡಾಂಗಣದಲ್ಲಿ ನವಭಾರತ್ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಲ್ಲಿ ಧ್ವಜಾರೋಹಣ ನೆರವೇರಿಸಿ, ಅವರು ಮಾತನಾಡಿದರು.

ಬಲಿಷ್ಠ ಭಾರತ ನಿರ್ಮಾಣ ನಮ್ಮ, ನಿಮ್ಮೆಲ್ಲರ ಜವಾಬ್ದಾರಿ. ಅದಕ್ಕಾಗಿ ಯುವಕ, ಯುವತಿಯರು ದೇಶಾಭಿಮಾನ, ಶ್ರದ್ಧೆ, ಭಕ್ತಿ ಮತ್ತು ಸ್ವಾಭಿಮಾನ ಬೆಳೆಸಿಕೊಳ್ಳಬೇಕು. ಆ ಮೂಲಕ ಬಲಿಷ್ಠ ಭಾರತ ನಿರ್ಮಾಣಕ್ಕೆ ಪಣತೊಡಬೇಕು. ಆಗ ಮಾತ್ರ ಪ್ರಪಂಚದಲ್ಲೇ ಭಾರತ ಬಲಿಷ್ಠವಾಗುತ್ತದೆ ಎಂದು ಹೇಳಿದರು.

ಅಸಂಖ್ಯಾತ ಹಿರಿಯರ ತ್ಯಾಗ, ಬಲಿದಾನದಿಂದ ನಮಗೆ ಸ್ವಾತಂತ್ರ್ಯ ದೊರೆತಿದೆ. ಈ ಸುದಿನ ಅವರೆಲ್ಲ ರನ್ನು ಸ್ಮರಿಸುವ ಜತೆಗೆ ಅಂತಹ ಮಹನೀಯರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಸಾಗಬೇಕಿದೆ. ಇಂದಿನ ಮಕ್ಕಳೇ ದೇಶದ ಮುಂದಿನ ಪ್ರಜೆಗಳು. ನಾವು ಪ್ರಜೆಗಳಾದರೆ ಸಾಲದು, ಸತ್ಪ್ರಜೆಗಳಾಗಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ಮಾತಾ ಅಮೃತಾನಂದಮಯಿ ಈಶ್ವರೀಯ ವಿಶ್ವವಿದ್ಯಾಲಯದ ಸುಧಾ ಅಕ್ಕಾ, ಬಡಾವಣೆ ಮುಖಂಡರು ಉಪಸ್ಥಿತರಿದ್ದರು.



ಸ್ವಾತಂತ್ರ್ಯ ದಿನಾಚರಣೆ


ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಾಜಿ ಸೈನಿಕ ಹೆಚ್.ಎಸ್. ನಂಜುಂಡಸ್ವಾಮಿ ಧ್ವಜಾರೋಹಣ ನೆರವೇರಿಸಿದರು. ಈ ವೇಳೆ ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಕಾರ್ಯದರ್ಶಿ ಗೀತಾ ಅನಂತರಾಮಯ್ಯ ನಿರ್ದೇಶಕಿ ಮಂಜುಳಾ, ಮುಖ್ಯ ಶಿಕ್ಷಕ ಲೋಕೇಶ್, ದೈಹಿಕ ಶಿಕ್ಷಕ ಜಗದೀಶ್ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಜರಿದ್ದರು.

ಛಾಯಾಗ್ರಾಹಕರಿಗೆ ಗೌರವ ಪ್ರಶಸ್ತಿ...



ಮೈಸೂರಿನ ಪತ್ರಿಕಾ ಛಾಯಾಗ್ರಾಹಕರು, ವನ್ಯಜೀವಿ ಛಾಯಾಗ್ರಾಹಕರಿಗೆ ಫೆಡರೇಷನ್ ಆಫ್ ಇಂಡಿಯನ್ ಫೋಟೋಗ್ರಫಿ ಸಂಸ್ಥೆಯ ಪ್ರತಿಷ್ಠಿತ ಗೌರವ ಪ್ರಶಸ್ತಿಗಳ ಪಡೆದುಕೊಂಡಿದ್ದಾರೆ. ಸಿದ್ದಲಿಂಗಪ್ರಸಾದ್ ಕೆ.ಜಿ. EFIP, ಎಸ್.ಆರ್.ಮಧುಸೂಧನ AFIP, ವಿ.ಶೇಷಾದ್ರಿ AFIP, ಎಂ.ಆರ್.ಭಾಸ್ಕರ್ AFIP ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಎಸ್.ಜಾನಕಿ ಅವರಿಗೆ ಸನ್ಮಾನ...



ಗಾನ ಕೋಗಿಲೆ ಎಸ್.ಜಾನಕಿ ಅವರನ್ನು ಡಾ.ರಾಜ್‌ಕುಮಾರ್ ಅಭಿಮಾನಿಗಳಾದ ವಿ.ಸೋಮಣ್ಣ, ಮೂರ್ತಿ, ನಾಗರಾಜ್, ಮಂಜು ಸನ್ಮಾನಿಸಿದರು.

ನಿಧನ



ಸತ್ಯನಾರಾಯಣ

ಮೈಸೂರು,ಆ.18–ಬಿಎಚ್‌ಇಎಲ್ ನಿವೃತ್ತ ಸೀನಿಯರ್ ಮ್ಯಾನೇಜರ್ ಎಸ್.ಸತ್ಯನಾರಾಯಣ (82) ಭಾನುವಾರ ಹೃದಯಾಘಾತದಿಂದ ನಿಧನರಾದರು. ಅವರಿಗೆ ಮೂವರು ಸೋದರರು, ಒಬ್ಬ ಸೋದರಿ, ಪುತ್ರ ಎಸ್‌ಬಿಐನ ಚೀಫ್ ಮ್ಯಾನೇಜರ್ ಶ್ರೀರಾಮ್, ಪುತ್ರಿ ದೀಪಶ್ರೀ ರಾಯಚೂರಿನ ಕೇಂದ್ರೀಯ ವಿದ್ಯಾಲಯದಲ್ಲಿ ಮುಖ್ಯಸ್ಥರಾಗಿದ್ದಾರೆ. ನಗರದ ಚಾಮರಾಜಪುರಂನ ಲಕ್ಷ್ಮಿ ರಾಮಸ್ವಾಮಿ ಸೌಧ ಅಪಾರ್ಟ್‌ಮೆಂಟ್ ನಿವಾಸಿಯಾದ ಅವರು, ಅಪಾರ್ಟ್‌ಮೆಂಟ್ ಸಂಘದ ಅಧ್ಯಕ್ಷರೂ ಆಗಿದ್ದರು. ನಗರದಲ್ಲಿ ಡಿಪ್ಲೊಮಾ ಮುಗಿಸಿ ತಮಿಳುನಾಡಿನ ರಾಣಿಪೇಟದಲ್ಲಿ ಬಿಎಚ್‌ಇಎಲ್‌ನಲ್ಲಿ ಉದ್ಯೋಗಕ್ಕೆ ಸೇರಿ ಸೀನಿಯರ್ ಮ್ಯಾನೇಜರ್ ಆಗಿ ನಿವೃತ್ತರಾಗಿದ್ದರು. ನಂತರ ನಗರದ ನಿವಾಸಿಯಾಗಿದ್ದ ಅವರು, ಗ್ರಾಹಕ ಪರಿಷತ್ತಿನ ಸಕ್ರಿಯ ಸದಸ್ಯರಾಗಿದ್ದರು. ಅವರ ತಂದೆ ಶ್ರೀಕಂಠಯ್ಯ ಅವರು ಪೊಲೀಸ್ ಇಲಾಖೆಯಲ್ಲಿ ಹೆಡ್‌ಕಾನ್‌ಸ್ಟೇಬಲ್ ಆಗಿ ನಿವೃತ್ತರಾಗಿದ್ದರು. ಸುಮಾರು ಹದಿನೈದಕ್ಕೂ ಹೆಚ್ಚು ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗೆ ಓದುವ ಸಾಮಗ್ರಿಗಳನ್ನು ಪ್ರತಿ ವರ್ಷ ವಿತರಿಸುತ್ತಿದ್ದರು. ಅಂತ್ಯಕ್ರಿಯೆ ಸೋಮವಾರ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೈದ್ಯಕೀಯ ಕೋರ್ಸ್ ಪ್ರವೇಶ ಚಾಯ್ಸ್ ನಮೂದಿಗೆ ಇಂದು ಮಧ್ಯಾಹ್ನ 3ರವರೆಗೆ ಅವಕಾಶ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನಲ್ಲಿ ಸೀಟು ಹಂಚಿಕೆಯಾಗಿರುವವರಿಗೆ ಚಾಯ್ಸ್ ದಾಖಲಿಸಲು ಮತ್ತು ಶುಲ್ಕ ಪಾವತಿಸಲು ಆ.19ರಂದು ಮಧ್ಯಾಹ್ನ 3ರವರೆಗೆ ಅವಕಾಶ ನೀಡಲಾಗಿದೆ.

ಶುಲ್ಕ ಪಾವತಿನಂತರ ಸೀಟು ಖಾತರಿ ಚೀಟಿ ಡೌನ್‌ಲೋಡ್‌ಕೊಂಡು ಅಂದು ಸಂಜೆ 5.30ರ ಒಳಗೆ ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು. ಇದುವರೆಗೂ ಯಾವುದೇ ಛಾಯ್ಸ್‌ನಮೂದಿಸದವರು ಹಾಗೂ ಶುಲ್ಕ ಪಾವತಿಸದವರು ಅವಕಾಶ ಬಳಸಿಕೊಳ್ಳಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಛಾಯ್ಸ್‌ನಮೂದಿಸದ ಹಾಗೂ ಶುಲ್ಕ ಪಾವತಿ ಮಾಡದಿರುವವರ ಸೀಟುಗಳನ್ನು ರದ್ದುಪಡಿಸಿ, ಆ ಸೀಟುಗಳನ್ನು 2ನೇ ಸುತ್ತಿನ ಸೀಟು ಹಂಚಿಕೆಗೆ ಸೇರಿಸಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

ಮೈಸೂರು, ಆ. 18– ಅಮೃತಾಂಶು ಟ್ರಸ್ಟ್, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್. ಆಸ್ಪತ್ರೆ ಸಂಯುಕ್ತ ಆಶ್ರಯದಲ್ಲಿ ಆ.21 ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ 2767, ಪಾಂಚಜನ್ಯ, 5ನೇ ಮುಖ್ಯರಸ್ತೆ ಮೇದರಕೇರಿ, ಚಾಮುಂಡಿ ಪುರಂ ಇಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೂಕೋಮಾ, ವಾರೆಕಣ್ಣು, ನೀರು ಸೋರುವಿಕೆ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ರಾತ್ರಿ ಕುರುಡುತನ ಸಮಸ್ಯೆಗಳಿಗೆ ಪರೀಕ್ಷಿಸಲಾಗುವುದು. ಶಿಬಿರಾರ್ಥಿಗಳು ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್ ಜೆರಾಕ್ಸ್‌ಗಳನ್ನು ತರತಕ್ಕದ್ದು. ಹೆಚ್ಚಿನ ವಿವರಗಳಿಗೆ ಮೊ. 994527 0646, 9742634110 ಸಂಪರ್ಕಿಸಿ.

ಹೃದಯಾಘಾತ ಸಂಬಂಧ ಅನಗತ್ಯ ಗೊಂದಲ ಬೇಡ

ಜೀವನ ಶೈಲಿ ಬದಲಾದರೆ ಯಾವ ಸಮಸ್ಯೆಯೂ ಇಲ್ಲ

● ಪರಿಷತ್‌ನಲ್ಲಿ ದಿನೇಶ್ ಗೂಳಿಗೌಡರ ಪ್ರಶ್ನೆಗೆ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಅಭಯ ● ಜನರ ಆತಂಕಕ್ಕೆ ತಪ್ಪು ಗ್ರಹಿಕೆಯೇ ಕಾರಣ; ಹೃದಯಾಘಾತದ ಸಂಖ್ಯೆಯಲ್ಲೇನು ಹೆಚ್ಚಳವಾಗಿಲ್ಲ

ಬೆಂಗಳೂರು, ಆ.18(ಕೆಎಂಶಿ)–ರಾಜ್ಯದಲ್ಲಿ ಹೆಚ್ಚುತ್ತಿರುವ ಹೃದಯಾಘಾತ ಘಟನೆಗಳಿಂದ ಜನತೆ ಅನಗತ್ಯ ಗೊಂದಲಕ್ಕೆ ಒಳಗಾಗಬಾರದು. ವ್ಯಾಯಾಮ, ಪ್ರಾಣಾಯಾಮ, ಆಹಾರಪದ್ಧತಿ ಹಾಗೂ ಜೀವನ ಶೈಲಿ ಬದಲಾವಣೆ ಮಾಡಿಕೊಂಡರೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ವಿಧಾನ ಪರಿಷತ್‌ನಲ್ಲಿಂದು ತಿಳಿಸಿದ್ದಾರೆ.



ಶರಣಪ್ರಕಾಶ್ ಪಾಟೀಲ್

ದಿನೇಶ್ ಗೂಳಿಗೌಡ ಪ್ರಸ್ತಾವಕ್ಕೆ ಉತ್ತರಿಸಿದ ಅವರು, ಹೃದಯಾಘಾತ ಪ್ರಕರಣಗಳ ಸಂಖ್ಯೆ ಹೆಚ್ಚಳದ ಆತಂಕ ಎಲ್ಲರಲ್ಲೂ ಉಂಟಾಗಿದೆ, ಪ್ರತಿನಿತ್ಯ ಜನರು ಜಯದೇವ ಆಸ್ಪತ್ರೆಗೆ ಧಾವಿಸಿ ಹೃದಯ ತಪಾಸಣೆ ಮಾಡಿಸಿಕೊಳ್ಳುತ್ತಿದ್ದು, ಈ ಪ್ರಮಾಣ ಶೇ.25ರಷ್ಟು ಏರಿಕೆಯಾಗಿದೆ ಎಂದರು.

ಹಾಸನ ಜಿಲ್ಲೆಯಲ್ಲಿ ಹೃದಯಾಘಾತಗಳ ಸಂಖ್ಯೆ ಹೆಚ್ಚಳವಾಗಿದೆ ಎಂಬ ಆತಂಕ ಜನರಲ್ಲಿ ಮೂಡಿದೆ. ಇದು ತಪ್ಪು ಗ್ರಹಿಕೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಸರಾಸರಿ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸವಿಲ್ಲ, ಶೇ.5ರಿಂದ 6ರಷ್ಟು ಪ್ರಕರಣಗಳು ಹೃದಯಾಘಾತಕ್ಕೆ ಸಂಬಂಧಿಸಿದವು, ಈ ವರ್ಷದಲ್ಲೂ ಇಷ್ಟೇ ಪ್ರಮಾಣದಲ್ಲಿದೆ. ಬದಲಾದ ಜೀವನಶೈಲಿ, ಅಧಿಕ ಒತ್ತಡ, ಬೊಜ್ಜು, ಮದ್ಯಪಾನ, ಧೂಮಪಾನ, ಮಾದಕದ್ರವ್ಯ ಸೇವನೆ, ಕುಟುಂಬದ ಹಿನ್ನೆಲೆ ಇತ್ಯಾದಿ ಕಾರಣಗಳಿಗೆ ಹೃದಯಘಾತಗಳು ಸಂಭವಿಸಿವೆ. ಯಾವುದೋ ಒಂದು ಪ್ರಕರಣ ಆಧಾರವಾಗಿಟ್ಟುಕೊಂಡು ಜನತೆ ಆತಂಕಕ್ಕೆ ಒಳಗಾಗಬಾರದು ಎಂದರು.

ಕೋವಿಡ್ ನಂತರ ಹೃದಯಾಘಾತ ಪ್ರಕರಣಗಳು ಹೆಚ್ಚಾಗುತ್ತಿವೆ ಎಂಬ ಸಂಶಯವೂ ಇದೆ, ವಾಸ್ತವವಾಗಿ ಯಾವುದೇ ಸಂಬಂಧ ಇಲ್ಲ. ಪ್ರಕರಣಗಳ ಕುರಿತಂತೆ ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ರವೀಂದ್ರ ನೇತೃತ್ವದಲ್ಲಿ ಸಮಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯಪಡೆ ಸಹ ರಚಿಸಲಾಗಿತ್ತು.

ಈ ಸಮಿತಿಗಳು ಸರ್ಕಾರಕ್ಕೆ ನೀಡಿರುವ ವರದಿಯಲ್ಲಿ ಜನರ ಊಹೆಗೂ, ವಾಸ್ತವಿಕತೆಗೂ ಸಂಬಂಧವಿಲ್ಲ ಎಂದು ಹೇಳಲಾಗಿದೆ, ಜನರು ವದಂತಿಗಳಿಗೆ ಕಿವಿಗೊಡುವುದನ್ನು ನಿಲ್ಲಿಸಬೇಕು ಎಂದರು. ಎಲ್ಲಾ ಸರ್ಕಾರಿ ಜಿಲ್ಲಾಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ತೆರೆಯಬೇಕೆಂಬುದು ಸಿದ್ಧಾಂತವಾಗಿದೆ, ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಆಸ್ಪತ್ರೆಗಳು ಕಾರ್ಯಾರಂಭ ಮಾಡಿವೆ. ಎಲ್ಲಾ ಜಿಲ್ಲೆಗಳಲ್ಲೂ ಸೂಪರ್ ಸ್ಪೆಷಾಲಿಟಿ ಜೊತೆಗೆ ಟ್ರಾಮಾ ಕೇಂದ್ರಗಳನ್ನೂ ಪ್ರಾರಂಭಿಸಲಾಗುವುದು.



ದಿನೇಶ್ ಗೂಳಿಗೌಡ

ಬೆಂಗಳೂರು–ಮೈಸೂರು, ಕಲಬುರಗಿ, ಹುಬ್ಬಳ್ಳಿಯ ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭವಾಗಿದೆ. ಹಾಗೆಯೇ ಬಾಗಲಕೋಟೆ, ಯಾದಗಿರಿ, ರಾಯಚೂರಿನಲ್ಲೂ ಶೀಘ್ರದಲ್ಲೇ ಕಾರ್ಯಾರಂಭ ಮಾಡಲಾಗುವುದು. ಬೀದರ್, ಕೊಪ್ಪಳ, ಬೆಳಗಾವಿಯಲ್ಲಿ ಮೂರು ತಿಂಗಳೊಳಗೆ ಆಸ್ಪತ್ರೆಗಳು ಲೋಕಾರ್ಪಣೆಗೊಳ್ಳಲಿವೆ ಎಂದರು.

ಸದ್ವಿದ್ಯಾ ಶಿಕ್ಷಣ ಸಂಸ್ಥೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ...



ಮೈಸೂರಿನ ಸದ್ವಿದ್ಯಾ ಶಿಕ್ಷಣ ಸಂಸ್ಥೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಕಾವೇರಿ ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಪಪೂ ಕಾಲೇಜು ಪ್ರಾಂಶುಪಾಲರಾದ ಡಾ.ಜಿ.ಆರ್.ಕವಿತಾ, ಮುಖ್ಯೋಪಾಧ್ಯಾಯಿನಿ ಕೆ.ಮಮತಾ, ಮುಖ್ಯೋಪಾಧ್ಯಾಯ ಎ.ಶ್ರೀಕಾಂತ್, ಶಾಲೆಯ ಸಂಸ್ಕೃತ ಶಿಕ್ಷಕಿ ಹೆಚ್.ಎಸ್.ಆಶಾ ಮತ್ತಿತರರಿದ್ದರು.

ಅರ್ಜಿ ಆಹ್ವಾನ

ಮೈಸೂರು: ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ, ಮೇದಾರ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ–ಅತಿಸೂಕ್ಷ್ಮ, ಆದಿವಾಸಿ ಮತ್ತು ಮೇದ ಸಮುದಾಯಗಳ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ಅರ್ಜಿ ಆಹ್ವಾನಿಸಿದ್ದು, ಸೆ.10 ಅರ್ಜಿ ಸಲ್ಲಿಸಲು ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಆಯಾಯ ತಾಲೂಕಿನ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖಾ ಕಚೇರಿ ಸಂಪರ್ಕಿಸಿ.

ಸತ್ಯ, ಅಹಿಂಸೆ ಎಂಬ ಅಸ್ತ್ರಗಳು ಭಾರತ ಸ್ವತಂತ್ರವಾಗಲು ಪ್ರಮುಖ ಕಾರಣ



ಮೈಸೂರು ತಾಲೂಕಿನ ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಮೈಸೂರು,ಆ.18–ಸತ್ಯ ಮತ್ತು ಅಹಿಂಸೆ ಎಂಬ ಅಸ್ತ್ರಗಳು ಭಾರತ ಸ್ವತಂತ್ರವಾಗಲು ಪ್ರಮುಖ ಕಾರಣ ಎಂದು ಪತ್ರಬರಹಗಾರ ಮತ್ತು ಮಾಜಿ ಗ್ರಾ.ಪಂ.ಸದಸ್ಯ ಎಂ.ಗಣೇಶ್ ಹೇಳಿದರು.

ಮೈಸೂರು ತಾಲೂಕಿನ ಕೆ.ಹೆಮ್ಮನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಗಾಂಧೀಜಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಮುಂತಾದ ರಾಷ್ಟ್ರ ನಾಯಕರು ಸತ್ಯಾಗ್ರಹ ಚಳವಳಿ, ಉಪವಾಸ ಸತ್ಯಾಗ್ರಹ ಮುಂತಾದವನ್ನು ಅಹಿಂಸಾತ್ಮಕವಾಗಿ ಮಾಡಿ ಇಡೀ ಜಗತ್ತಿನ ಕಣ್ತೆರೆಸಿದುದರಿಂದ ಬ್ರಿಟಿಷರು ಭಾರತವನ್ನು ಸ್ವತಂತ್ರಗೊಳಿಸುವ ತೀರ್ಮಾನಕ್ಕೆ ಅನಿವಾರ್ಯವಾಗಿ ಬರಬೇಕಾಯಿತು. ಇಂದು ಅದೇ ಸತ್ಯ ಎಂಬ ಅಸ್ತ್ರವನ್ನು ಹಿಡಿದುಕೊಂಡು ಹೊಸಚಿಂತನೆಯೊಂದಿಗೆ ನವಭಾರತ ನಿರ್ಮಾಣ ಮಾಡುವಲ್ಲಿ ಪಣತೊಡೋಣ ಎಂದು ಕರೆ ನೀಡಿದರು.


ಸಾಹುಕಾರಹುಂಡಿ ಗ್ರಾ.ಪಂ ಸದಸ್ಯ ರಮೇಶ್, ಎಸ್‌ಡಿಎಂಸಿ ಅಧ್ಯಕ್ಷೆ ಲಕ್ಷ್ಮಿ ನಾಗೇಂದ್ರ, ಸದಸ್ಯರಾದ ಮಹೇಶ್, ರಾಜಮ್ಮ, ಕಿಟ್ಟಿ ಮಂದಣ್ಣ, ದೇಚು ಕುರುಂಬಯ್ಯ, ಸುಮನ, ಮುಖ್ಯ ಶಿಕ್ಷಕಿ ಸುಮಂಗಲ, ಶಿಕ್ಷಕರಾದ ವಚನ ಕುಮಾರಸ್ವಾಮಿ, ಕಲ್ಪನಾಬಾಯಿ, ತಾರಾ ಅತಿಥಿ ಶಿಕ್ಷಕ ಸಂತೋಷ್ ಅಡುಗೆ ಸಿಬ್ಬಂದಿ ಸವಿತಾ ಮಹೇಶ್ ಮತ್ತು ಗೌರಮ್ಮ ನೂರಾರು ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಎನ್‌ಟಿಟಿಸಿ, ಮಾಂಟೆಸರಿ, ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು,ಆ.18–ಆರ್‌ಸಿಎಸ್‌ಎಸ್ ಮೈಸೂರು ಶಾಖೆಯು ಭಾರತ ಸರ್ಕಾರದ ಯೋಜನೆಯಡಿಯಲ್ಲಿ ಎನ್‌ಡಿಎಲ್‌ಎಂನ ಸಹಭಾಗಿತ್ವದೊಂದಿಗೆ ಎನ್‌ಟಿಟಿಸಿ, ಮಾಂಟೆಸರಿ ಹಾಗೂ ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಗೆ ಅರ್ಜಿ ಆಹ್ವಾನಿಸಿದೆ. ಎಲ್‌ಕೆಜಿ, ಯುಕೆಜಿ, ಪ್ರಿಸ್ಕೂಲ್ ಹಾಗೂ ಮಾಂಟೆಸರಿ ಶಾಲಾ ಶಿಕ್ಷಕರ ತರಬೇತಿ ತರಗತಿಗಳು ಇದಾಗಿದ್ದು, ನುರಿತ ಅಧ್ಯಾಪಕರಿಂದ ಮಕ್ಕಳ ಮಾನಸಿಕ ಬೆಳವಣಿಗೆಗಳು, ಆಹಾರ, ಪೋಷಕಾಂಶ, ಕಂಪ್ಯೂಟರ್ ತರಬೇತಿ ಕುರಿತಂತೆ ಪ್ರಾಯೋಗಿಕ ತರಗತಿಗಳಿರುತ್ತವೆ. ಆನ್‌ಲೈನ್ ತರಬೇತಿ ಬಯಸುವವರೂ ಅರ್ಜಿ ಪಡೆಯಬಹುದು. ಸೆ.5 ನೋಂದಣಿಗೆ ಕಡೇ ದಿನ. ಮಾಹಿತಿಗೆ 9686855470, 8310306882 ಸಂಪರ್ಕಿಸಿ.

ಚಾವಣಿ ಮೇಲಿನ ಡ್ರಮ್‌ನಲ್ಲಿತ್ತು ವ್ಯಕ್ತಿ ಶವ!


ಜೈಪುರ: ರಾಜಸ್ಥಾನದ ಖೈರ್ತಾಲ್–ತಿಜಾರಾ ಜಿಲ್ಲೆಯ ಮನೆಯ ಚಾವಣಿ ಮೇಲಿನ ಡ್ರಮ್‌ನಲ್ಲಿ ವ್ಯಕ್ತಿಯೊಬ್ಬರ ಶವ ಪತ್ತೆಯಾಗಿದ್ದು, ಅವರ ಪತ್ನಿ, ಮೂವರು ಮಕ್ಕಳು ಮತ್ತು ಮನೆ ಮಾಲೀಕರ ಮಗ ನಾಪತ್ತೆಯಾಗಿದ್ದಾನೆ.



ಮೃತರನ್ನು ಉತ್ತರಪ್ರದೇಶದ ಶಹಜಹಾನ್‌ಪುರ ಜಿಲ್ಲೆಯ ಮೂಲದ ಹಂಸ್ರಾಮ್ ಅಲಿಯಾಸ್ ಸೂರಜ್ ಎಂದು ಗುರುತಿಸಲಾಗಿದ್ದು, ತಮ್ಮ ಪತ್ನಿ ಮತ್ತು ಮೂವರು ಮಕ್ಕಳೊಂದಿಗೆ ಕಿಶನ್‌ಗಢಬಾಸ್‌ನ ಆದರ್ಶ ಕಾಲೋನಿಯಲ್ಲಿ ವಾಸಿಸುತ್ತಿದ್ದರು. ಕೆಟ್ಟ ವಾಸನೆ ಬರುತ್ತಿರುವ ಕುರಿತು ಅಕ್ಕಪಕ್ಕದ ಮನೆಯವರು ದೂರು ನೀಡಿದ ನಂತರ ಶವ ಪತ್ತೆಯಾಗಿದ್ದು, ಗಂಟಲಿನ ಭಾಗದಲ್ಲಿ ಹರಿತವಾದ ಆಯುಧದಿಂದ ಹೊಡೆದಿರುವ ಗಾಯ ಕಂಡುಬಂದಿದೆ. ದೇಹದ ಕೊಳೆಯುವಿಕೆಯನ್ನು ವೇಗಗೊಳಿಸಲು ಅದರ ಮೇಲೆ ಉಪ್ಪು ಹಾಕಲಾಗಿತ್ತು.

ಹಂಸ್ರಾಮ್ ಕಳೆದ ಒಂದೂವರೆ ತಿಂಗಳಿನಿಂದ ಟೆರೇಸ್ ಮೇಲಿನ ಕೊಠಡಿಯೊಂದರಲ್ಲಿ ಬಾಡಿಗೆಗೆ ವಾಸಿಸುತ್ತಿದ್ದರು ಮತ್ತು ಇಟ್ಟಿಗೆಗೂಡುಗಳಲ್ಲಿ ಕೆಲಸ ಮಾಡುತ್ತಿದ್ದರು. ಅವರ ಪತ್ನಿ ಸುನೀತಾ, ಮೂವರು ಮಕ್ಕಳು ಮತ್ತು ಮನೆ ಮಾಲೀಕರ ಮಗ ಜಿತೇಂದ್ರ ಶನಿವಾರದಿಂದ ಕಾಣೆಯಾಗಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.08.2025 ಮಂಗಳವಾರ, ಮಳೆ ನಕ್ಷತ್ರ: ಮಖ 17.08.2025ರಿಂದ 30.08.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಆರ್ದ್ರಾ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳಿಗೆ ಚಿಕಿತ್ಸೆ, ಮೈಗ್ರೇನ್‌ಗೆ ಪರಿಹಾರ ಹಾಗೂ ಅಕ್ಯುಪಂಕ್ಚರ್ ಚಿಕಿತ್ಸೆ, ಎಲ್ಲಾ ತರಹದ ತಲೆನೋವಿಗೆ ಚಿಕಿತ್ಸೆ, ಆರ್ಥರೈಟಿಸ್‌ಗೆ, ಕುತ್ತಿಗೆ ನೋವು ಮತ್ತು ಭುಜದ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.
- **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಬೀಜ ಗ್ರಂಥಿ ದೋಷ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಅಸ್ತಮಾ, ಬೆನ್ನುನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.
- **ವ್ಯವಸ್ಥಾಪಕರು :** ಕರ್ನಾಟಕದ ಪ್ರಾಚೀನ ದೇವಾಲಯಗಳ ಛಾಯಾಚಿತ್ರ ಪ್ರದರ್ಶನ, ಉದ್ಘಾಟನೆ : ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪ. ಸಂಪತ್ ಕುಮಾರ್, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿ. ರಾಜಗೋಪಾಲಯ್ಯ, ಸ್ಥಳ: ಸುಚಿತ್ರ ಆರ್ಟ್ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30 ರಿಂದ.
- **ಶ್ರೀಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ.ಕೆ.ಅನಂತರಾಮು ಅವರಿಂದ ಪ್ರವಚನ, ವಾಚನ–ಗಮಕ ವಿದ್ವಾನ್ ಕೃ.ರಾಮಚಂದ್ರ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6 ಗಂಟೆಯಿಂದ.
- **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ ಹಾಗೂ ಶ್ರಾವಣಮಾಸದಲ್ಲಿ ನಡೆಯುವ ಪೂಜಾ ಕಾರ್ಯಕ್ರಮ, ಸ್ಥಳ: ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ, ರಾತ್ರಿ 7ಕ್ಕೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ.ಟಿ.ಉದಯಕಿರಣ್, ಸದಾಶಿವ ಪಾಟೀಲ್ ಹಾಗೂ ಪಿ.ಎಸ್.ರಂಜನಿ, ವ್ಯಾಖ್ಯಾನ – ಡಾ. ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ:ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್.ಎಸ್. ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು ಸಂಶೋಧನಾ ಕ್ಷೇತ್ರದಲ್ಲಿನ ಸಾಧನೆಗಾಗಿ ಮೈಸೂರು ಆಕಾಶವಾಣಿಯಿಂದ ಸನ್ಮಾನಿತರಾದ ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ನಿರ್ದೇಶಕರಾದ ಡಾ. ಎಸ್. ಗಾಂಧಿದಾಸ್ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ–ಎನ್. ಕೇಶವಮೂರ್ತಿ, 9.00 ಕರೆಗೊಂದು ಗೀತೆ –ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಿ.ಕೆ. ಜಯರಾಮನ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, ಆರ್. ಲೋಕೇಶ್ವರಿ ಹಾಗೂ ಬಿ. ಜಿ. ಕವಿತಾ


ಮಧ್ಯಾಹ್ನ: 12.05 ವನಿತಾ ವಿಹಾರ–ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಕರ್ನಾಟಕದ ಏಕೈಕ ಮರಳು ಕಲಾವಿದೆ ಗೌರಿ ಎಂ. ಎನ್. ಅವರೊಂದಿಗೆ ಮಾತುಕತೆ. ಪ್ರಸ್ತುತಿ– ದಿಗ್ವಿಜಯ್ .ಬಿ., 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಎಂ.ಆರ್. ಶ್ರೀಹರ್ಷ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಾಂಬೆ ಸಹೋದರಿಯರಿಂದ ದ್ವಂದ್ವ ಗಾಯನ, 4.00 ಕಥಾಕಾಲಕ್ಷೇಪ– ವಾಲಿ ಮೋಕ್ಷ, ಪ್ರಸ್ತುತಿ–ವಿದ್ವಾನ್ ಕೇಶವ ದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ – ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ–ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ, ಮೀನು ಮರಿ ಪಾಲನೆ ಈ ಕುರಿತು ಹೆಚ್.ಡಿ. ಕೋಟೆ ತಾಲೂಕು ಅಂತರ ಸಂತೆ ಹೋಬಳಿ ರಾಮೇನಹಳ್ಳಿಯ ವಿ. ಮಹೇಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ–ಅನೌಷ್ಕ ಶಂಕರ್ –ಸಿತಾರ್ ವಾದನ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ವಿ. ಬಾಲಸಾಯಿ – ಕೊಳಲುವಾದನ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಎರಡನೇ ತಂಡದಲ್ಲಿ ಮೂರು ಹೊಸವೂ ಸೇರಿ ಐದು ಆನೆ ಆ. 25ಕ್ಕೆ ಆಗಮನ

ಅಂದು ಸಂಜೆ 4 ಗಂಟೆಗೆ ಜಯಮಾರ್ತಾಂಡ ದ್ವಾರದಲ್ಲಿ ಪೂಜಾ ವಿಧಿವಿಧಾನದನ್ವಯ ಸ್ವಾಗತ



ಗೋಪಿ



ಸುಗ್ರೀವ



ಶ್ರೀಕಂಠ



ರೂಪ



ಹೇಮಾವತಿ

ಮೈಸೂರು,ಆ.18(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡನೇ ತಂಡದಲ್ಲಿ 3 ಹೊಸವೂ ಸೇರಿದಂತೆ ಐದು ಆನೆಗಳು ಆ.25ರಂದು ಸಂಜೆ 4 ಗಂಟೆಗೆ ಜಯಮಾರ್ತಾಂಡ ದ್ವಾರದ ಮೂಲಕ ಅರಮನೆ ಆವರಣ ಪ್ರವೇಶಿಸಲಿವೆ.

ಈಗಾಗಲೇ ಮೊದಲ ತಂಡದಲ್ಲಿ ಆಗಮಿಸಿರುವ 9 ಆನೆಗಳು ಜಂಬೂ ಸವಾರಿ ಮಾರ್ಗದಲ್ಲಿ ತಾಲೀಮಿನಲ್ಲಿ ಪಾಲ್ಗೊಳ್ಳುತ್ತಿದ್ದು, ಅವುಗಳಿಗೆ ಪೌಷ್ಟಿಕ ಆಹಾರ ನೀಡಿ ಆರೈಕೆ ಮಾಡಲಾಗುತ್ತಿದೆ. ದಸರಾ ಉದ್ಘಾಟನೆಗೂ 29 ದಿನ ಮುನ್ನ ಎರಡನೇ ತಂಡದ ಆನೆಗಳನ್ನು ಕರೆತರಲು ಮುಹೂರ್ತ ಫಿಕ್ಸ್ ಮಾಡಲಾಗಿದೆ. ಸೆ.22ರಿಂದ ಈ ಸಾಲಿನ ದಸರಾ ಮಹೋತ್ಸವ ಆರಂಭವಾಗಲಿದ್ದು, ಅ.2ರಂದು ಜಂಬೂಸವಾರಿ ನೆರವೇರಲಿದೆ.

ಎರಡನೇ ತಂಡ: ಎರಡನೇ ತಂಡದಲ್ಲಿ ಕರೆತರುತ್ತಿರುವ 5 ಆನೆಗಳಲ್ಲಿ ಎರಡು ಹೆಣ್ಣಾನೆ ಹಾಗೂ ಒಂದು ಹೊಸ ಗಂಡಾನೆ ಸೇರಿವೆ. ಅದರಲ್ಲಿ ದುಬಾರೆ ಕ್ಯಾಂಪ್‌ನಿಂದ ಗೋಪಿ(43), ಸುಗ್ರೀವ (43), ಹೊಸ ಆನೆಗಳಾದ ಮತ್ತಿಗೋಡು ಕ್ಯಾಂಪ್‌ನಿಂದ ಶ್ರೀಕಂಠ(56), ದುಬಾರೆಯಿಂದ ಹೇಮಾವತಿ(11) ಹಾಗೂ ಭೀಮನಕಟ್ಟೆ ಕ್ಯಾಂಪ್‌ನಿಂದ ರೂಪ(44) ಮೈಸೂರಿಗೆ ಆಗಮಿಸುತ್ತಿವೆ.

ಮೊದಲ ತಂಡದ ಆನೆಗಳು: ಮೊದಲ ತಂಡದಲ್ಲಿ ಆಗಮಿಸಿರುವ ಮತ್ತಿಗೋಡು ಕ್ಯಾಂಪ್‌ನ ಗಜಪಡೆಯ ನಾಯಕ ಅಭಿಮನ್ಯು(59), ಭೀಮ(25), ದುಬಾರೆ ಕ್ಯಾಂಪ್‌ನಿಂದ ಪ್ರಶಾಂತ(53), ಧನಂಜಯ (45), ಕಂಜನ್(26), ಬಳ್ಳೆ ಶಿಬಿರದ ಮಹೇಂದ್ರ (42), ದೊಡ್ಡಹರವೆ ಶಿಬಿರದ ಏಕಲವ್ಯ(40) ಸೇರಿದಂತೆ 7 ಗಂಡಾನೆ ಹಾಗೂ ದುಬಾರೆ ಶಿಬಿರದ ಕಾವೇರಿ (45) ಹಾಗೂ ಬಳ್ಳೆಯ(ದೊಡ್ಡಹರವೆ) ಲಕ್ಷ್ಮೀ(53) ಹೆಣ್ಣಾನೆಗಳು ಈಗಾಗಲೇ ತಾಲೀಮಿನಲ್ಲಿ ನಿರತವಾಗಿವೆ. 14 ಆನೆಗಳಲ್ಲಿ ಕ್ಯಾಪ್ಟನ್ ಅಭಿಮನ್ಯು(59) ಹಿರಿಯ ಆನೆ ಹೆಗ್ಗಳಿಕೆಗೆ ಪಾತ್ರವಾಗಿದ್ದರೆ, ದುಬಾರೆ ಕ್ಯಾಂಪ್‌ನ ಹೇಮಾವತಿ (11) ಅತ್ಯಂತ ಕಿರಿಯ ಆನೆ ಎನಿಸಿಕೊಂಡಿದೆ.

ಮೈಸೂರಲ್ಲಿ ದಸರಾ ಕುಸ್ತಿಗೆ ಪೈಲ್ವಾನರ ಅಣಿಗೊಳಿಸುವ ಕಾರ್ಯ ಆರಂಭ

ಕೆಜಿ ಕೊಪ್ಪಲು ಶ್ರೀರಾಮ ಮಂದಿರ ಹೊಸಬೀದಿ ಹತ್ತೂ ಜನಗಳ ಗರಡಿಯಲ್ಲಿ ನೆರವೇರಿದ ನಾಡಕುಸ್ತಿಯ ದೊಡ್ಡಮಟ್ಟಿ ಪೂಜೆ





ಮೈಸೂರಿನ ಕೆಜಿ ಕೊಪ್ಪಲಿನ ಹೊಸಬೀದಿ 2ನೇ ಕ್ರಾಸ್‌ನ ಶ್ರೀರಾಮ ಸೇವಾ ಟ್ರಸ್ಟ್‌ನ ಶ್ರೀರಾಮ ಮಂದಿರ ಹತ್ತೂ ಜನಗಳ ಗರಡಿಯಲ್ಲಿ ಸೋಮವಾರ ನಾಡಕುಸ್ತಿಯ ದೊಡ್ಡಮಟ್ಟಿ ಪೂಜೆ ನೆರವೇರಿಸಲಾಯಿತು. ಚಿತ್ರದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ಮುಖಂಡ ಕೊಪ್ಪಲು ರಾಜಣ್ಣ, ಗರಡಿಯ ಕಾರ್ಯದರ್ಶಿ ಎಲ್.ಚಂದ್ರು ಇತರರನ್ನು ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಶೃಂಗರಿಸಿರುವ ಮಟ್ಟಿ ಮಣ್ಣನ್ನು ಕಾಣಬಹುದು.

ಮೈಸೂರು,ಆ.18(ಪಿಎಂ)– ದಸರಾ ಮಹೋತ್ಸವಕ್ಕಾಗಿ ಮೈಸೂರು ನಗರದ ಗರಡಿ ಮನೆಗಳಲ್ಲಿ ಪೈಲ್ವಾನರನ್ನು ತಯಾರುಗೊಳಿಸುವ ಪ್ರಕ್ರಿಯೆ ಆರಂಭಗೊಂಡಿದೆ. ಅಂತೆಯೇ ಕನ್ನೇಗೌಡನಕೊಪ್ಪಲಿನ(ಕೆಜಿ ಕೊಪ್ಪಲು) 6 ಗರಡಿಗಳಲ್ಲಿ ಸಿದ್ಧತೆ ಬಿರುಸುಕೊಂಡಿದೆ.

ಅದೇ ರೀತಿಯಲ್ಲಿ ಕನ್ನೇಗೌಡನ ಕೊಪ್ಪಲಿನ ಹೊಸಬೀದಿ 2ನೇ ಕ್ರಾಸ್‌ನ ಶ್ರೀರಾಮ ಸೇವಾ ಟ್ರಸ್ಟ್‌ನ ಶ್ರೀರಾಮ ಮಂದಿರ ಹೊಸಬೀದಿ ಹತ್ತೂ ಜನಗಳ ಗರಡಿಯಲ್ಲಿ ಸೋಮವಾರ ನಾಡಕುಸ್ತಿಯ ದೊಡ್ಡಮಟ್ಟಿ ಪೂಜೆ (ಅಂಬಾತಾಯಿ ಪೂಜೆ) ನೆರವೇರಿಸಲಾಯಿತು.

ಸದರಿ ಗರಡಿ ಮನೆಯ ಕುಸ್ತಿ ಅಖಾಡದಲ್ಲಿ ಮಟ್ಟಿ ಮಣ್ಣಿಗೆ ಅರಿಶಿನ–ಕುಂಕುಮದೊಂದಿಗೆ ವಿಶೇಷವಾಗಿ ಅಲಂಕಾರ ಮಾಡಿ, ಹೂ ಮಾಲೆಗಳಿಂದ ಶೃಂಗರಿಸಿದಲ್ಲದೆ, ಗರಡಿ ಮನೆಯ ಪೈಲ್ವಾನರು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಕುಸ್ತಿಯಲ್ಲಿ ಗೆದ್ದು ತಂದಿರುವ ಕಪ್ ಸೇರಿದಂತೆ ವಿವಿಧ ಪಂದ್ಯಗಳಲ್ಲಿ ಗೆಲುವು ಸಾಧಿಸಿರುವ ಕಪ್‌ಗಳೊಂದಿಗೆ ಅಂಬಾತಾಯಿ ಪೂಜಾ ವಿಧಿವಿಧಾನ ನಡೆಸಲಾಯಿತು.

ಇದೇ ವೇಳೆ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನದ ಖಜಾಂಚಿ ಹಾಗೂ ಶ್ರೀರಾಮ ಮಂದಿರ ಹೊಸಬೀದಿ ಹತ್ತೂ ಜನಗಳ ಗರಡಿ ಕಾರ್ಯದರ್ಶಿ ಯಜಮಾನ್ ಎಲ್.ಚಂದ್ರು, ಕೆಜಿ ಕೊಪ್ಪಲಿನಲ್ಲಿ 6 ಗರಡಿಗಳು ಇದ್ದು, ಪ್ರತಿ ವರ್ಷವೂ ವರಲಕ್ಷ್ಮಿ ಹಬ್ಬದ ದಿನದಿಂದು ಶ್ರೀ ಬಂದಂತಮ್ಮ ಕಾಳಮ್ಮ ದೇವಸ್ಥಾನದ ಆವರಣದಿಂದ ಮಟ್ಟಿ ಪೂಜೆಯನ್ನು ಆರು ಗರಡಿಯವರು ಒಗ್ಗಟ್ಟಿನಿಂದ ಮಾಡುತ್ತೇವೆ. ಅಂತೆಯೇ ಈ ವರ್ಷವೂ ಈ ವಿಧಿವಿಧಾನ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಈ ವರ್ಷವೂ ಕೆಜಿ ಕೊಪ್ಪಲಿನ ಪ್ರಮುಖ ರಸ್ತೆಗಳಲ್ಲಿ ಜಾನಪದ ಕಲಾ ತಂಡಗಳೊಂದಿಗೆ ಗ್ರಾಮಸ್ಥರು, ಗ್ರಾಮದ ಪೈಲ್ವಾನರು, ಯುವಜನರು, ಸಂಘ ಸಂಸ್ಥೆಗಳು ಪದಾಧಿಕಾರಿಗಳು ಸೇರಿದಂತೆ ಎಲ್ಲರೂ ಒಗ್ಗಟ್ಟಾಗಿ ಸಹಸ್ರಾರು ಸಂಖ್ಯೆಯಲ್ಲಿ ನೆರೆದು ಮೆರವಣಿಗೆ ಮೂಲಕ ಆಯಾ ಗರಡಿಗೆ ಮಟ್ಟಿಯನ್ನು ತರಲಾಯಿತು ಎಂದರು.

ಪೈಲ್ವಾನ್ ಬಸವಯ್ಯನವರ ಹತ್ತೂ ಜನಗಳ ಗರಡಿ, ಪೈಲ್ವಾನ್ ಬಸವಯ್ಯನವರ ಚಿಕ್ಕಗರಡಿ (ಜಯನಗರ), ಉಸ್ತಾದ್ ಲಿಂಗೇಗೌಡನವರ ಹತ್ತು ಜನಗಳ ಗರಡಿ, ಪೈಲ್ವಾನ್ ಹುಚ್ಚಯ್ಯನವರ ಗರಡಿ, ಪೈಲ್ವಾನ್ ಬೋರಯ್ಯ ಬಸವಯ್ಯನವರ ಹತ್ತು ಜನಗಳ ಗರಡಿ (ಮೊಟ್ಟೆ ಗರಡಿ) ಹಾಗೂ ನಮ್ಮ ಗರಡಿ ಸೇರಿದಂತೆ 6ರಲ್ಲಿಯೂ ದಸರಾ ಕುಸ್ತಿ ತಾಲೀಮು ಆರಂಭಗೊಳ್ಳುತ್ತಿದೆ. ದಸರಾಗೆ ಒಂದು ತಿಂಗಳು ಇರುವಾಗಲೇ ಮಟ್ಟಿ ಪೂಜೆ ಮೂಲಕ ಪೈಲ್ವಾನರನ್ನು ಸಜ್ಜುಗೊಳಿಸುತ್ತೇವೆ. ಯಜಮಾನರು, ಗ್ರಾಮದ ಮುಖಂಡರು ಸೇರಿ ಯುವ ಪೈಲ್ವಾನರನ್ನು ತಯಾರು ಮಾಡುವ ಪ್ರಕ್ರಿಯೆ ನಡೆಸುತ್ತೇವೆ. ಕಳೆದ ಐದು ವರ್ಷಗಳಿಂದ 'ಯುವಕರ ನಡೆ ಕುಸ್ತಿ ಕಡೆಗೆ' ಘೋಷವಾಕ್ಯದೊಂದಿಗೆ ಗ್ರಾಮದಲ್ಲಿ ಕುಸ್ತಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ವಿವರಿಸಿದರು.

6 ಗರಡಿಗಳಿಂದ ತಲಾ 10 ಪೈಲ್ವಾನ್‌ಗೆ ತಾಲೀಮು: ನಮ್ಮ ಗರಡಿಯಿಂದ ದಸರಾ ಕುಸ್ತಿಗಾಗಿ 10 ಮಂದಿ ಯುವ ಪೈಲ್ವಾನರನ್ನು ಸಜ್ಜುಗೊಳಿಸುವ ಗುರಿ ಹೊಂದಿದ್ದೇವೆ. ಅದೇ ರೀತಿಯಲ್ಲಿ ಗ್ರಾಮದ ಎಲ್ಲಾ 6 ಗರಡಿಗಳಿಂದ ತಲಾ 10 ಮಂದಿ ಯುವ ಪೈಲ್ವಾನರಿಗೆ ತಾಲೀಮು ನೀಡಲು ನಿರ್ಧರಿಸಲಾಗಿದೆ. ಕಳೆದ ಬಾರಿ ನಮ್ಮ ಗರಡಿಯಿಂದ ನಾಲ್ವರು ಪೈಲ್ವಾನರು ಪಾಲ್ಗೊಂಡಿದ್ದರು. ನಾಲ್ಕು ಮಂದಿಯೂ ಗೆಲುವು ಸಾಧಿಸಿದ್ದರು ಎಂದು ಯಜಮಾನ್ ಎಲ್.ಚಂದ್ರು ತಿಳಿಸಿದರು.

ಈಗ ಪಾಯಿಂಟ್ ಕುಸ್ತಿಗೂ ನಮ್ಮ ಗ್ರಾಮದ ಯುವಕರು ಆಸಕ್ತಿ ಹೊಂದಿದ್ದು, ನಮ್ಮ ಗ್ರಾಮದವರೇ ಆದ ಹಿರಿಯ ಕುಸ್ತಿಪಟು ಮಂಜಪ್ಪನವರು ನಮ್ಮ ಗ್ರಾಮದ ಯುವಕರಿಗೆ ಈ ವಿಧದ ಕುಸ್ತಿಯಲ್ಲಿಯೂ ತರಬೇತಿ ನೀಡುತ್ತಿದ್ದಾರೆ ಎಂದರು.

ಮಾಜಿ ಶಾಸಕ ಎಲ್.ನಾಗೇಂದ್ರ, ಕಾವಲು ಪಡೆಯ ಅಧ್ಯಕ್ಷ ಎಂ.ಮೋಹನ್‌ಕುಮಾರ್ ಗೌಡ, ಶಂಕರ್, ಪೈಲ್ವಾನ್ ಆರ್.ಶಿವಲಿಂಗು, ಪೈಲ್ವಾನ್ ದೊಡ್ಡಲಿಂಗಣ್ಣನವರ ಪುತ್ರ ಬಾಲು, ಗರಡಿಯ ಅಧ್ಯಕ್ಷ ಈರಯ್ಯ, ಮುಖಂಡರಾದ ರಾಜಣ್ಣ, ಎಸ್.ಬಾಲು, ಕೆಂಚೇಗೌಡ, ಜಿ.ಶ್ರೀನಿವಾಸ್, ಮಹಾದೇವ, ಬೋರಪ್ಪ, ಹರ್ಷ ವಾಸು, ಬಿಸಿಲು ಮಾರಮ್ಮನವರ ಗುಡ್ಡಪ್ಪ ನಿಂಗಪ್ಪ, ಕೃಷ್ಣ, ಪಾಪಣ್ಣ, ಮರಿಗೌಡ, ಪೂಜಾ ಟೆಂಟ್ ಹೌಸ್ ಮಾಲೀಕರಾದ ನಿಂಗಪ್ಪ, ವಕೀಲರಾದ ಬಸವರಾಜು, ಮಹದೇವಪ್ಪ, ಎಸ್.ಬಸವರಾಜ್ ಸೇರಿದಂತೆ ಕೆಜಿ ಕೊಪ್ಪಲಿನ ಗ್ರಾಮಸ್ಥರು, ಯುವ ಪೈಲ್ವಾನರು ಹಾಜರಿದ್ದರು.

ಪತ್ರಕರ್ತ ಕಲ್ಲೆ ಶಿವೋತ್ತಮರಾವ್‌ಗೆ ಡಿ.ದೇವರಾಜ ಅರಸು ಪ್ರಶಸ್ತಿ



ಬೆಂಗಳೂರು: 2025–26ನೇ ಸಾಲಿನ 'ಡಿ.ದೇವರಾಜ ಅರಸು ಪ್ರಶಸ್ತಿ'ಗೆ ಪತ್ರಕರ್ತ ಕಲ್ಲೆ ಶಿವೋತ್ತಮರಾವ್ ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿದೆ.

ಸಾಮಾಜಿಕ ನ್ಯಾಯದ ಪರವಾಗಿ ಅವರು ನಡೆಸಿದ ಹೋರಾಟ, ದೇವರಾಜ ಅರಸು ಅವರ ತತ್ವ–ಸಿದ್ಧಾಂತಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅವರ ಶ್ರಮ ಮತ್ತು ಪತ್ರಕರ್ತರಾಗಿ ನೀಡಿದ ಕೊಡುಗೆಯಿಂದಾಗಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ.

ಪ್ರಶಸ್ತಿಯು 5 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ. ವಿಧಾನಸೌಧದಲ್ಲಿ ಇದೇ ಆ.20ರಂದು ಬೆಳಿಗ್ಗೆ 10.45ಕ್ಕೆ ನಡೆಯುವ ದೇವರಾಜ ಅರಸು ಅವರ 110ನೇ ಜನ್ಮದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಉಡುಪಿ ಜಿಲ್ಲೆಯ ಕಾರ್ಕಳದವರಾದ 95ರ ವಯೋಮಾನದಲ್ಲಿರುವ ಕಲ್ಲೆ ಶಿವೋತ್ತಮರಾವ್ ಅವರು ತಮ್ಮ 14ನೇ ವಯಸ್ಸಿನಲ್ಲಿಯೇ ಮಂಗಳೂರಿನ ನವಭಾರತ ದೈನಿಕದ ವರದಿಗಾರರಾಗಿ ಕೆಲಸ ಆರಂಭಿಸಿದ್ದರು. ರಾಷ್ಟ್ರಬಂಧು, ರಾಷ್ಟ್ರಮತ, ತಾಯಿನಾಡು, ಪ್ರಜಾವಾಣಿ, ಸಂಯುಕ್ತ ಕರ್ನಾಟಕ, ಕನ್ನಡ ಪ್ರಭ', ಕಂಠೀರವ ಪತ್ರಿಕೆಗಳಲ್ಲಿ ವರದಿಗಾರರಾಗಿ, ಜನಪ್ರಗತಿಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಜಯಪ್ರಕಾಶ ನಾರಾಯಣ, ರಾಮ ಮನೋಹರ ಲೋಹಿಯಾ ಮತ್ತು ಪೆರಿಯಾರ್ ಚಳವಳಿಗಳ ಪ್ರತಿಪಾದನೆಗಳ ಅನುಯಾಯಿಯಾಗಿದ್ದ ಶಿವೋತ್ತಮರಾವ್ ಅವರು, ಹಾವನೂರ ಆಯೋಗ ರಚನೆಗೂ ಮುನ್ನವೇ ಸಾಮಾಜಿಕ ನ್ಯಾಯದ ಪರವಾಗಿ ಹೋರಾಟ ನಡೆಸಿದ್ದರು ಎಂದು ಆದೇಶದಲ್ಲಿ ತಿಳಿಸಲಾಗಿದೆ. ಪತ್ರಿಕೆಗಳ ಸಂಪಾದಕರಾಗಿದ್ದ ಅವಧಿಯಲ್ಲಿ ಹಿಂದುಳಿದ ವರ್ಗಗಳ ಯುವಕರಿಗೆ ವರದಿಗಾರಿಕೆಯ ಅವಕಾಶಗಳನ್ನು ನೀಡಿದ್ದರು. ಸಂವಿಧಾನದ ಆಶಯ, ಸಾಮಾಜಿಕ ನ್ಯಾಯ, ಮೀಸಲಾತಿ, ದಲಿತ ಮತ್ತು ಹಿಂದುಳಿದವರ ಸಬಲೀಕರಣದ ಪರವಾಗಿ ದನಿಯೆತ್ತುವ ಸಂದರ್ಭಗಳು ಒದಗಿ ಬಂದಾಗಲೆಲ್ಲಾ, ಅವುಗಳ ಪರವಾಗಿ ನಿಂತರು ಎಂದು ವಿವರಿಸಲಾಗಿದೆ.

ಹಳೆ ಮೈಸೂರು ಭಾಗದಲ್ಲಿ ಬಸವ ಸಂಸ್ಕೃತಿ ಅಭಿಯಾನ ಸಂಬಂಧ ಪೂರ್ವಭಾವಿ ಸಭೆ



ಹಳೆ ಮೈಸೂರು ಭಾಗದಲ್ಲಿ 'ಬಸವ ಸಂಸ್ಕೃತಿ ಅಭಿಯಾನ' ಏರ್ಪಡಿಸುವ ಕುರಿತು ವಿವಿಧ ವೀರಶೈವ ಲಿಂಗಾಯತ ಸಂಘಟನೆಗಳ ಸಹಯೋಗದೊಂದಿಗೆ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು, ಆ.18(ಎಸ್‌ಪಿಎನ್)– ಹಳೆ ಮೈಸೂರು ಭಾಗದಲ್ಲಿ 'ಬಸವ ಸಂಸ್ಕೃತಿ ಅಭಿಯಾನ್' ಏರ್ಪಡಿಸುವ ಕುರಿತು ವಿವಿಧ ವೀರಶೈವ ಲಿಂಗಾಯತ ಸಂಘಟನೆಗಳ ಸಹಯೋಗದೊಂದಿಗೆ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಜಾಗತಿಕ ಲಿಂಗಾಯತ ಮಹಾಸಭಾ, ಜಿಲ್ಲಾ ಮಠಾಧಿಪತಿಗಳ ಗೋಷ್ಠಿ, ಶರಣ ಸಾಹಿತ್ಯ ಪರಿಷತ್, ಬಸವ ಬಳಗಳ ಒಕ್ಕೂಟ, ಕದಳಿ ಮಹಿಳಾ ವೇದಿಕೆ, ನೊಣಬ ಲಿಂಗಾಯತ ಮಹಾಸಭಾ, ವೀರಶೈವ ಸಜ್ಜನ ಸಂಘ, ಹೇಮರೆಡ್ಡಿ ಮಲ್ಲಮ್ಮ ಸಂಘ ಸೇರಿದಂತೆ ಇತರೆ ಸಂಘಟನೆಗಳ ಸಹಯೋಗದೊಂದಿಗೆ ಸಭೆ ಜರುಗಿತು.

ಸಭೆಯಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಶರಣ ಮಹದೇವಪ್ಪ, ಬಸವ ತತ್ವದ ಮೇಲೆ ನಡೆಯುತ್ತಿರುವ ಬೌದ್ಧಿಕ ದಾಳಿಗೆ, ಲಿಂಗಾಯತ ಸಮಾಜ ನೀಡುತ್ತಿರುವ ಪ್ರತ್ಯುತ್ತರ ಅಭಿಯಾನ ಪ್ರತಿ ಹಳ್ಳಿಗೂ ವಿಸ್ತರಿಸಬೇಕಿದೆ. ಮೈಸೂರು, ಚಾಮರಾಜನಗರ, ಮಂಡ್ಯ, ಕೊಡಗು ಹಾಗೂ ಹಾಸನ ಜಿಲ್ಲೆಯಲ್ಲಿ ಲಿಂಗಾಯತ ಧರ್ಮವನ್ನು ಪುನರುತ್ಥಾನಗೊಳಿಸಲು ಈ ಅಭಿಯಾನ ಒಳ್ಳೆಯ ಅವಕಾಶ ಎಂದು ಸಭೆಗೆ ತಿಳಿಸಿದರು.

ಅಭಿಯಾನದ ರೂಪುರೇಷೆಯನ್ನು ಸುತ್ತೂರು ಶ್ರೀಗಳೊಂದಿಗೆ ಚರ್ಚಿಸಲಾಗಿದೆ. ಮೈಸೂರು, ಚಾಮರಾಜನಗರ, ಮಂಡ್ಯ ಹಾಸನ, ಕೊಡಗು ಜಿಲ್ಲೆಗಳಲ್ಲಿ ಅಭಿಯಾನಕ್ಕೆ ಎಲ್ಲಾ ರೀತಿಯ ಬೆಂಬಲ ನೀಡುವುದಾಗಿ ಎಲ್ಲಾ ಮಠ–ಮಾನ್ಯಗಳ ಶ್ರೀಗಳು ಭರವಸೆ ನೀಡಿದ್ದಾರೆ. ಈ ಅಭಿಯಾನ ಕುರಿತು ಮೈಸೂರಿನ ಸುತ್ತೂರು ಮಠದ ಸಭಾಂಗಣದಲ್ಲಿಯೇ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ಎಲ್ಲಾ ಮಠಾಧೀಶರ ಬೆಂಬಲ ಅತ್ಯಗತ್ಯ ಎಂದರು.

ಮೈಸೂರಿನಲ್ಲಿ ಬಸವ ಸಂಸ್ಕೃತಿ ಅಭಿಯಾನವು ಸೆ.23ರಂದು ನಡೆಯುತ್ತದೆ. ದಸರಾ ಚಟುವಟಿಕೆಗಳು ಕೂಡ ಅದೇ ಸಮಯದಲ್ಲಿ ಶುರುವಾಗುವುದರಿಂದ ಆ ಸಮಯದಲ್ಲಿ ಯಾವ ಸಭಾಂಗಣವೂ ಸಿಗುವುದಿಲ್ಲ. ಹಾಗಾಗಿ ಸುತ್ತೂರು ಮಠದ ಆವರಣದಲ್ಲಿ ಸಭೆಗಳನ್ನು ಆಯೋಜಿಸಲಾಗುವುದು. ಮುಂದಿನ ದಿನಗಳಲ್ಲಿ ಜಿಲ್ಲೆಯ ಮಹಿಳಾ ಸಂಘಟನೆಗಳು, ಉರಿಲಿಂಗಿಪೆದ್ದಿ ಮಠ ಹಾಗೂ ಮೈಸೂರಿನ ಎಲ್ಲಾ ಬಸವ ಸಂಘಟನೆಗಳು ಒಂದಾಗಿ ಬಸವ ಸಂಸ್ಕೃತಿ ಅಭಿಯಾನ ನಡೆಸುತ್ತಿರುವುದು ಒಂದು ಐತಿಹಾಸಿಕ ಬೆಳವಣಿಗೆ ಎಂದರು.

ಗಗನಯಾತ್ರಿ ಶುಭಾಂಶು ಶುಕ್ಲಾರಿಂದ ಪ್ರಧಾನಿ ನರೇಂದ್ರ ಮೋದಿ ಭೇಟಿ



ನವದೆಹಲಿ: ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪ್ರಯಾಣಿಸಿದ ಮೊದಲ ಭಾರತೀಯ ಗಗನಯಾತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದರು.

ಜೂನ್ 25 ರಿಂದ ಜುಲೈ 15 ರವರೆಗೆ ಐಎಸ್‌ಎಸ್‌ಗೆ ಆಕ್ಸಿಯಮ್–4 ವಾಣಿಜ್ಯ ಕಾರ್ಯಾಚರಣೆಯ ಭಾಗವಾಗಿದ್ದ ಶುಕ್ಲಾ ಅವರು ಇಂದು ಲೋಕ ಕಲ್ಯಾಣ್ ಮಾರ್ಗದಲ್ಲಿರುವ ಪ್ರಧಾನಿ ನಿವಾಸದಲ್ಲಿ ಮೋದಿ ಅವರನ್ನು ಭೇಟಿಯಾದರು. ಈ ವೇಳೆ ಅವರು ತಮ್ಮೊಂದಿಗೆ ಬಾಹ್ಯಾಕಾಶಕ್ಕೆ ಕೊಂಡೊಯ್ದ ತ್ರಿವರ್ಣ ಧ್ವಜವನ್ನು ಮೋದಿಗೆ ಉಡುಗೊರೆಯಾಗಿ ನೀಡಿದರು. ಇಸ್ರೋ ಗಗನಯಾತ್ರಿಯ ಜಾಕೆಟ್ ಧರಿಸಿದ್ದ ಶುಕ್ಲಾ ಅವರನ್ನು ಪ್ರಧಾನಿ ಮೋದಿ ಬೆಚ್ಚಗಿನ ಅಪ್ಪುಗೆಯೊಂದಿಗೆ ಸ್ವಾಗತಿಸಿದರು.

ಶುಭಾಂಶು ಶುಕ್ಲಾ ಅವರು ಪ್ರಧಾನಿ ಮೋದಿಗೆ ಆಕ್ಸಿಯಮ್–4 ಕಾರ್ಯಾಚರಣೆಯ ಮಿಷನ್ ಪ್ಯಾಚ್ ಅನ್ನು ಸಹ ಉಡುಗೊರೆಯಾಗಿ ನೀಡಿದರು. ಹಾಗೇ, ಬಾಹ್ಯಾಕಾಶ ನಿಲ್ದಾಣದಿಂದ ಸೆರೆಹಿಡಿಯಲಾದ ಭೂಮಿಯ ವಿಸ್ಮಯಕಾರಿ ಫೋಟೋಗಳನ್ನು ಹಂಚಿಕೊಂಡರು.

ಆಕ್ಸಿಯಮ್–4 ಕಾರ್ಯಾಚರಣೆಯಲ್ಲಿ ಶುಭಾಂಶು ಶುಕ್ಲಾ ಅವರ ಭಾಗವಹಿಸುವಿಕೆ ಭಾರತಕ್ಕೆ ಒಂದು ಮೈಲಿಗಲ್ಲು. ಜೂನ್ 25ರಂದು ಫ್ಲೋರಿಡಾದಿಂದ ಉಡಾವಣೆಯಾದ ನಂತರ ಈ ಮಿಷನ್ ಜೂನ್ 26ರಂದು ISS ತಲುಪಿತು. ಶುಭಾಂಶು ಶುಕ್ಲಾ ಅವರು ಜುಲೈ 15ರಂದು ಭೂಮಿಗೆ ಮರಳಿದ್ದರು.

ಗೌರಿ ಗಣೇಶ, ಈದ್ ಮಿಲಾದ್ ಹಬ್ಬಗಳ ಸೌಹಾರ್ದತೆಯಿಂದ ಆಚರಿಸಿ

- ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಸಲಹೆ
- ಬಲವಂತವಾಗಿ ಚಂದಾ ವಸೂಲಿಗೆ ಅವಕಾಶವಿಲ್ಲ
- ಡಿಜೆ ಬಳಸುವಂತಿಲ್ಲ



ಎಸ್‌ಪಿ ಎನ್.ವಿಷ್ಣುವರ್ಧನ್ ಅವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವುದು.

ಮೈಸೂರು,ಆ.18(ಪಿಎಂ)– ಗೌರಿ ಗಣೇಶ ಮತ್ತು ಈದ್ ಮಿಲಾದ್ ಹಬ್ಬಗಳನ್ನು ಸೌಹಾರ್ದತೆಯಿಂದ ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಶಾಂತಿಯುತವಾಗಿ ಆಚರಿಸಬೇಕೆಂದು ಹಿಂದು ಹಾಗೂ ಮುಸ್ಲಿಂ ಮುಖಂಡರಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್ ಮನವಿ ಮಾಡಿದರು.

ಮೈಸೂರಿನ ಜಿಲ್ಲಾ ಪೊಲೀಸ್ ಕಚೇರಿಯ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜಿಲ್ಲಾ ವ್ಯಾಪ್ತಿಯ ಹಿಂದು ಹಾಗೂ ಮುಸ್ಲಿಂ ಮುಖಂಡರ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಇದೇ ಆ.27ರಂದು ಗೌರಿ ಗಣೇಶ ಹಬ್ಬ ಹಾಗೂ ಸೆ.5ರಂದು ಈದ್ ಮಿಲಾದ್ ಹಬ್ಬವಿದ್ದು, ಈ ಸಂಬಂಧ ಸರ್ಕಾರ ಹೊರಡಿಸಿರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ತಿಳಿಸಿದರು.

ಗಣೇಶ ವಿಗ್ರಹ ಪ್ರತಿಷ್ಠಾಪನೆಗೆ ಸ್ಥಳೀಯ ಪೊಲೀಸ್ ಠಾಣೆಯಿಂದ ಅನುಮತಿ ಪಡೆಯಬೇಕು ಹಾಗೂ ಇನ್ನಿತರ ವ್ಯವಸ್ಥೆಗಳ ಕುರಿತು ಸಂಬಂಧಿಸಿದ ಇಲಾಖೆಗಳ ಅನುಮತಿ ಪಡೆಯಬೇಕು. ಪರಿಸರ ಸ್ನೇಹಿ ವಿಗ್ರಹಗಳನ್ನು ಪ್ರತಿಷ್ಠಾಪಿಸಬೇಕು. ಸಾರ್ವಜನಿಕರಿಂದ ಬಲವಂತವಾಗಿ ಚಂದಾ ವಸೂಲಿ ಮಾಡಬಾರದು. ಡಿಜೆಯನ್ನು ಮೆರವಣಿಗೆಯಲ್ಲಿ ಬಳಸಬಾರದು. ಗಣಪತಿ ಪ್ರತಿಷ್ಠಾಪಿಸುವ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಬೇಕು ಎಂದು ಹೇಳಿದರು.

ಅನ್ಯ ಧರ್ಮೀಯರ ಭಾವನೆಗೆ ಧಕ್ಕೆ ಬರುವಂತಹ ಯಾವುದೇ ಪೋಸ್ಟ್‌ಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡಬಾರದು. ಫ್ಲೆಕ್ಸ್, ಬ್ಯಾನರ್‌ಗಳನ್ನು ಸಂಬಂಧಿಸಿದ ಇಲಾಖೆಯಿಂದ ಅನುಮತಿ ಪಡೆದು ಅಳವಡಿಸಿ, ಅವಧಿ ಮುಗಿದ ನಂತರ ತೆರವುಗೊಳಿಸಬೇಕು. ಎರಡೂ ಹಬ್ಬಗಳ ಸಂಬಂಧ ಪೊಲೀಸ್ ಇಲಾಖೆಯು ಆಗಾಗ್ಗೆ ನೀಡುವ ಸಲಹೆ ಮತ್ತು ಸೂಚನೆಗಳನ್ನು ಪಾಲಿಸಿ ಶಾಂತಿ ಕಾಯ್ದುಕೊಳ್ಳಬೇಕು ಎಂದರು.

ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಿ.ಮಲ್ಲಿಕ್, ಎಲ್.ನಾಗೇಶ್, ಮೈಸೂರು ಜಿಲ್ಲೆಯ ಎಲ್ಲಾ ಡಿಎಸ್‌ಪಿ, ಪೊಲೀಸ್ ನಿರೀಕ್ಷಕರು ಹಾಗೂ ಪಿಎಸ್‌ಐ ಸೇರಿದಂತೆ ಇನ್ನಿತರ ಅಧಿಕಾರಿ, ಸಿಬ್ಬಂದಿ ವರ್ಗದವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಒಳಮೀಸಲಾತಿ ವಿಚಾರ

ನ್ಯಾ.ನಾಗಮೋಹನ್‌ದಾಸ್ ವರದಿ ಯಥಾವತ್ ಜಾರಿಗೆ ಮಾಜಿ ಸಚಿವ ಎಂ.ಶಿವಣ್ಣ ಸಿಎಂಗೆ ಮನವಿ



ಮೈಸೂರು, ಆ.18– ಪರಿಶಿಷ್ಟ ಜಾತಿ ಒಳಮೀಸಲಾತಿ ಹಂಚಿಕೆ ಕುರಿತ ನ್ಯಾ.ನಾಗಮೋಹನದಾಸ್ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಮಾಜಿ ಸಚಿವ ಎಂ.ಶಿವಣ್ಣ(ಕೋಟೆ) ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಸಾರ್ವಜನಿಕ ಪ್ರಕಟಣೆಗಳ ಮೂಲಕ ಒಳಮೀಸಲಾತಿ ಸಮೀಕ್ಷೆ ಬಗ್ಗೆ ಜಾಗೃತಿ ಮೂಡಿಸಿ, ಮನೆ ಮನೆ ಸರ್ವೆ ಮೂಲಕ ಪರಿಶಿಷ್ಟ ಜಾತಿಯ 101 ಜಾತಿಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ ಒಳಗೊಂಡಂತೆ ಎಲ್ಲಾ ಅಂಶಗಳನ್ನೂ ಕೂಲಂಕುಷವಾಗಿ ಪರಿಶೀಲಿಸಿ, ನ್ಯಾ.ನಾಗಮೋಹನ್‌ದಾಸ್ ಆಯೋಗವು ಅತ್ಯಂತ ವ್ಯವಸ್ಥಿತ ಹಾಗೂ ವೈಜ್ಞಾನಿಕವಾಗಿ ವರದಿ ನೀಡಿದೆ.

ಅಷ್ಟೇ ಅಲ್ಲದೆ ಈ ಆಯೋಗವು ಹಿಂದಿನ ಎಲ್.ಜಿ.ಹಾವನೂರ್, ಚಿನ್ನಪ್ಪರೆಡ್ಡಿ, ಎ.ಜೆ.ಸದಾಶಿವ ಆಯೋಗ ವರದಿ ಮತ್ತು ಇತ್ತೀಚಿನ ಜೆ.ಸಿ.ಮಾಧುಸ್ವಾಮಿ ಸಮಿತಿ ಶಿಫಾರಸ್ಸುಗಳನ್ನೂ ಕೂಲಂಕುಷವಾಗಿ ಅಧ್ಯಯನ ಮಾಡಿ ಒಳಮೀಸಲಾತಿ ವರದಿ ತಯಾರಿಸಿದೆ. ಪರಿಶಿಷ್ಟ ಜಾತಿಯ 101 ಜಾತಿಗಳಲ್ಲಿ ಬರುವ ಅಲೆಮಾರಿಗಳು, ಪೌರಕಾರ್ಮಿಕರನ್ನು ಒಳಗೊಂಡಂತೆ ಯಾವ ಜಾತಿಯನ್ನು ಬಿಡದೆ ಸರ್ವೆ ಮಾಡಿಸಿದ್ದಾರೆ. ನ್ಯಾ.ನಾಗಮೋಹನ್‌ದಾಸ್ ಅವರು ಸರ್ಕಾರದ ಯಾವ ಸೌಲಭ್ಯವನ್ನೂ ಪಡೆಯದೆ ಸರ್ಕಾರಕ್ಕೆ ವರದಿ ಸಲ್ಲಿಸಿರುವುದು ಅವರ ಬದ್ಧತೆಯನ್ನು ತೋರುತ್ತದೆ.

ಪರಿಶಿಷ್ಟ ಜಾತಿಗೆ ಮೀಸಲಿರುವ ಒಟ್ಟು ಶೇ.17ರಲ್ಲಿ 101 ಜಾತಿಗಳಿಗೆ ಜನಸಂಖ್ಯೆಗೆ ಅನುಗುಣವಾಗಿ 5 ಗುಂಪುಗಳಾಗಿ ವಿಂಗಡಿಸಿ, ಒಳಮೀಸಲಾತಿ ಸೂಚಿಸಲಾಗಿದೆ. 'ಎ' ಗುಂಪಿನ ಸಣ್ಣ ಸಣ್ಣ ಜಾತಿಗಳಿಗೆ ಶೇ.1, 'ಬಿ' ಗುಂಪಿನ ಮಾದರ, ಮಾದಿಗ ಇನ್ನಿತರರಿಗೆ ಶೇ.6, 'ಸಿ' ಗುಂಪಿಗೆ ಚಲವಾದಿ ಹೊಲೆಯ, ಹೋಲೇರ್ ಇನ್ನಿತರರಿಗೆ ಶೇ.5, 'ಡಿ' ಗುಂಪಿಗೆ ಲಂಬಾಣಿ, ಬೋವಿ ಇತರರಿಗೆ ಶೇ.4, 'ಇ' ಗುಂಪಿನ ಆದಿ ಆಂಧ್ರ ಇತರರಿಗೆ ಶೇ.1ರಂತೆ ಮೀಸಲಾತಿ ಕಲ್ಪಿಸಲು ಶಿಫಾರಸ್ಸು ಮಾಡಿದ್ದು, ಇದು ಸಮಪಾಲು–ಸಮಬಾಳು ಎಂಬಂತಿದೆ.

ತಾವು ನಾಗಮೋಹನ್‌ದಾಸ್ ಅವರ ವರದಿಯನ್ನು ಸ್ವೀಕರಿಸಿ, ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಿದ್ದೀರಿ. ಎಲ್ಲಾ ಸಚಿವರೂ ವರದಿ ಅಧ್ಯಯನ ಮಾಡಿ, ಮುಂದಿನ ವಿಶೇಷ ಸಚಿವ ಸಂಪುಟದಲ್ಲಿ ಅಭಿಪ್ರಾಯ ತಿಳಿಸಲು ಸೂಚಿಸಿರುವುದು ಶ್ಲಾಘನೀಯ. ಈ ಮಧ್ಯೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ನೇತೃತ್ವದಲ್ಲಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಪ್ರಿಯಾಂಕ ಖರ್ಗೆ, ಕೆ.ಹೆಚ್.ಮುನಿಯಪ್ಪ, ಆರ್.ಬಿ.ತಿಮ್ಮಾಪುರ್ ಹಾಗೂ ಸಂಬಂಧಿಸಿದ ಎಲ್ಲಾ ಶಾಸಕರೊಂದಿಗೆ ಚರ್ಚಿಸಿ, ಒಮ್ಮತಕ್ಕೆ ಬಂದಿರುವುದು ನಮಗೆ ತಿಳಿದಿದೆ.

ರಾಜ್ಯದ ದಲಿತ ಚಿಂತಕರು, ಮೇಧಾವಿಗಳು ಆದ ಹಿರಿಯ ಸಾಹಿತಿ ದೇವನೂರು ಮಹದೇವು ಅವರು ಇತ್ತೀಚೆಗೆ ತಮಗೆ ಬಹಿರಂಗ ಪತ್ರ ಬರೆದು ಎಲ್ಲಾ ಗೊಂದಲಗಳ ನಿವಾರಣೆಗೆ ಒಳಮೀಸಲಾತಿಯನ್ನು ಯಥಾವತ್ತಾಗಿ ಕೂಡಲೇ ಜಾರಿಗೊಳಿಸಬೇಕೆಂದು ಕೋರಿದ್ದಾರೆ. ಒಳಮೀಸಲಾತಿಯನ್ನು ಜಾರಿಗೆ ತರಲೇಬೇಕೆಂದು ವಿಧಾನಸಭೆಯಲ್ಲಿ ಪಕ್ಷಾತೀತವಾಗಿ ಶಾಸಕರು ಸರ್ಕಾರಕ್ಕೆ ಒತ್ತಾಯಿಸಿರುವುದು ತಮ್ಮ ಗಮನದಲ್ಲಿದೆ ಎಂದು ಭಾವಿಸಿದ್ದೇನೆ.

ಸುಪ್ರೀಂಕೋರ್ಟ್ ಪರಿಶಿಷ್ಟ ಜಾತಿಯ ಒಳಮೀಸಲಾತಿ ವರ್ಗೀಕರಣಕ್ಕೆ ಆದೇಶ ನೀಡಿ ಒಂದು ವರ್ಷವಾಗಿದೆ. ತಮಗೆ ತಿಳಿದಂತೆ ತೆಲಂಗಾಣ, ಆಂಧ್ರ, ಹರಿಯಾಣ, ಪಂಜಾಬ್ ರಾಜ್ಯಗಳು ಪ್ರಕ್ರಿಯೆ ಕೈಗೊಂಡು ಒಳಮೀಸಲಾತಿ ಜಾರಿ ಮಾಡುವ ಹಂತದಲ್ಲಿವೆ ಎಂದು ತಿಳಿದಿದ್ದೇನೆ.

ಸರ್ವಜನಾಂಗದ ನಾಯಕ ಅದರಲ್ಲೂ ಶೋಷಿತ ಸಮಾಜಗಳ ಹಿತ ಚಿಂತಕರಾಗಿರುವ ನೀವು, ಒಳಮೀಸಲಾತಿ ಜಾರಿಗೆ ಆ.19ರಂದು ನಡೆಯುವ ವಿಶೇಷ ಸಚಿವ ಸಂಪುಟದ ಸಭೆಯಲ್ಲಿ ಸ್ಪಷ್ಟ ನಿರ್ಣಯ ಕೈಗೊಂಡು ರಾಜ್ಯದ ಇತಿಹಾಸದಲ್ಲಿ ತಮ್ಮ ಹೆಸರು ಶಾಶ್ವತವಾಗಿ ಉಳಿಯುವಂತೆ ಮಾಡುವಿರೆಂದು ನಾನು ನಂಬಿದ್ದೇನೆ ಎಂದು ಎಂ.ಶಿವಣ್ಣ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತಾತಯ್ಯ ಜಯಂತಿ ಆಚರಣೆ

ಮೈಸೂರು, ಆ.18– ಮೈಸೂರಿನ ಶ್ರೀ ಕೃಷ್ಣ ಲಲಿತ ಕಲಾಮಂದಿರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾತಯ್ಯ ಜಯಂತಿಯನ್ನು ಮೈಸೂರು ಕನ್ನಡ ವೇದಿಕೆ ವತಿಯಿಂದ ಮಕ್ಕಳಿಗೆ ಪುಸ್ತಕ ಮತ್ತು ಸಿಹಿಯನ್ನು ಹಂಚುವ ಮೂಲಕ ಆಚರಿಸಲಾಯಿತು. ಸಮಾಜ ಸೇವಕರಾದ ರಘುರಾಮ್ ವಾಜಪೇಯಿ, ವೇದಿಕೆ ಅಧ್ಯಕ್ಷ ಎಸ್ ಬಾಲಕೃಷ್ಣ, ಬಾಬು, ಗೋಪಿ, ಮಾದಪ್ಪ, ಬೋಗಾದಿ ಸಿದ್ದೇಗೌಡ ಮತ್ತು ಶಿಕ್ಷಕರಾದ ಪರಮೇಶ್ ಶಾಲಾ ಮಕ್ಕಳು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಹುಡುಗಿ : ನನಗೆ ಏನ್ ಕೇಳಿದರು ತಂದು ಕೊಡ್ತೀಯಾ?
ಹುಡುಗ : ಏನ್ ಬೇಕು ಚಿನ್ನ
ಹುಡುಗಿ : ಆ ಚಂದ್ರನ್ನ ತಂದುಕೊಡ್ತೀಯಾ? ಪ್ಲೀಸ್.
ಹುಡುಗ : ಮತ್ತೆ ಭೂಮಿ ಸುತ್ತ ನಿಮ್ಮಪ್ಪ ಸುತ್ತುತ್ತಾನ...?

ಮೈಸೂರು ಮಿತ್ರ
ಮಂಗಳವಾರ, 19 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಬಯಸಿದ್ದೆಲ್ಲಾ ಸಿಗುವಂತಿದ್ದರೆ ಬಯಕೆಗೆ ಬೆಲೆ ಇರುತ್ತಿರಲಿಲ್ಲ. ಅನಿಸಿದ್ದೆಲ್ಲಾ ಹೇಳುವಂತಿದ್ದರೆ ಮೌನಕ್ಕೆ ಅರ್ಥ ಇರುತ್ತಿರಲಿಲ್ಲ. ತಪ್ಪುಗಳೇ ಆಗದಿದ್ದರೆ ಹೊಸ ಪ್ರಯತ್ನ ಪಡುತ್ತಿರಲಿಲ್ಲ. ಕಣ್ಣೀರೆ ಬರದಿದ್ದರೆ ನಗುವಿನ ಆನಂದ ತಿಳಿಯುತ್ತಿರಲಿಲ್ಲ. ಕಷ್ಟಗಳು ಎದುರಾಗದಿದ್ದರೆ ಜೀವನದ ಮೌಲ್ಯ ಗೊತ್ತಾಗುತ್ತಿರಲಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಳುವವನಿಗೊಂದು ಮಾತು / ಬಾಳೆಗೊಂದು ಗೊನೆ

ನಿಮ್ಮ ಪತ್ರಗಳು

■ ಧರ್ಮಸ್ಥಳವೂ ಬೆಟ್ಟದಪುರವೂ ಪೊಲೀಸರೂ....!

ಮಾನ್ಯರೆ,

ನೂರಾರು ಮಹಿಳೆಯರ ಶವಗಳನ್ನು ನಾನೇ ಹೂತು ಹಾಕಿದ್ದೇನೆ ಎಂದು ಅನಾಮುಖ, ಅನಾಮಿಕನೊಬ್ಬ ದೂರು ನೀಡುತ್ತಿದ್ದಂತೆಯೇ ವಿಶೇಷ ತನಿಖಾ ದಳವು ಪ್ರಕರಣವನ್ನು ಕೈಗೆತ್ತಿಕೊಂಡು ಅನಾಮಿಕ, ಅನಾಮುಖ ಕೈ ತೋರಿದೆಡೆಯೆಲ್ಲಾ ಅಗೆದು ಬಗೆದು ಉತ್ಖನನಗೈಯ್ಯುತ್ತಿದೆ.

ಉತ್ಖನನಕ್ಕಾಗಿ ಅಗೆದೂ... ಅಗೆದೂ... ಎಸ್ಐಟಿ ಅಧಿಕಾರಿ ಹಾಗೂ ತಂಡದ ಕೈಕಾಲು ಬಿದ್ದುಹೋಗಿದೆ. ಈ ವಿಚಾರವಾಗಿ ವೀಕ್ಷಕ ವಿವರಣೆ ನೀಡಿ... ನೀಡಿ... ಸುದ್ದಿವಾಹಿನಿಗಳ ಗಂಟಲೂ ಒಣಗಿಹೋಗಿದೆ. ಈ ಸುದ್ದಿ ಕೇಳಿ ಕೇಳಿ ವೀಕ್ಷಕರ ಕಿವಿಗಳು ತೂತಾಗಿವೆ. ನೋಡಿದ ಕಂಗಳು ಬತ್ತಿಹೋಗಿವೆ.

ಫಲಿತಾಂಶ ಮಾತ್ರ ದೊಡ್ಡ ಸೊನ್ನೆ!

ಈ ಸಂದರ್ಭದಲ್ಲಿ ಮೈಸೂರಿನ ಪ್ರಕರಣವನ್ನು ಜ್ಞಾಪಿಸಿಕೊಳ್ಳಲೇಬೇಕು. ವರದಕ್ಷಿಣೆ ಕಿರುಕುಳ ನೀಡಿ ಪತ್ನಿಯ ಮೇಲೆ ದೌರ್ಜನ್ಯ ನಡೆಸಿ ಆಕೆಯ ಶೀಲವನ್ನು ಶಂಕಿಸಿ ಆಕೆಯನ್ನು ಕೊಲೆ ಮಾಡಿ ಶವವನ್ನು ಪೊದೆಯಲ್ಲಿ ಮುಚ್ಚಿಟ್ಟು ಸಾಕ್ಷ್ಯ ನಾಶ ಪಡಿಸಿದ್ದಾನೆಂದು ಆರೋಪಿಸಿ ಬೆಟ್ಟದಪುರ ಪೊಲೀಸರು ಕುಶಾಲನಗರದ ಬಸವನಹಳ್ಳಿ ಹೊಸ ಬಡಾವಣೆಯ ನಿವಾಸಿ ಗಾಂಧಿ ಅವರ ಮಗ ಸುರೇಶ @ ಕುರುಬರ ಸುರೇಶ ಎಂಬುವನ ವಿರುದ್ಧ ದಾಖಲಾಗಿದ್ದ ಕೊಲೆ ಪ್ರಕರಣ ನ್ಯಾಯಾಲಯದದಲ್ಲಿ ಹೀಗೆ ನಡೆಯುತ್ತಿರುವಾಗ ಇದ್ದಕ್ಕಿದ್ದಂತೆ ಕೊಲೆಯಾಗಿದ್ದ ಮಲ್ಲಿಗೆ ಏಪ್ರಿಲ್ 1 ರಂದು ಮಡಿಕೇರಿಯಲ್ಲಿ ಪ್ರತ್ಯಕ್ಷಳಾಗಿ ಮೈಸೂರಿನ ಜಿಲ್ಲಾ ನ್ಯಾಯಾಲಯದದಲ್ಲಿ ಹಾಜರಾಗಿ ಅಚ್ಚರಿ ಮೂಡಿಸಿದ್ದಳು.

ಆಕೆ ಮತ್ತು ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಮೃತ (!) ಮಲ್ಲಿಗೆ, ಆಕೆಯ ಮಕ್ಕಳು, ತಾಯಿ, ಅತ್ತೆ, ಮಾವ ಹಾಗೂ ಪೊಲೀಸ್ ತನಿಖಾಧಿಕಾರಿಗಳ ಹೇಳಿಕೆ ಪಡೆದ ನ್ಯಾಯಾಲಯವು ಈ ವಿಚಾರವಾಗಿ ಎಲ್ಲರ ಹೇಳಿಕೆ ಪಡೆದು ವರದಿ ನೀಡುವಂತೆ ಮೈಸೂರು ಜಿಲ್ಲಾ ಎಸ್‌ಪಿ ವಿಷ್ಣುವರ್ಧನ್ ಅವರಿಗೆ ನಿರ್ದೇಶಿಸಿತ್ತು. ಎಸ್‌ಪಿ ವರದಿ ಸ್ವೀಕರಿಸಿ, ಪಬ್ಲಿಕ್ ಪ್ರಾಸಿಕ್ಯೂಟರ್ ಹಾಗೂ ಆರೋಪಿ ಪರ ವಕೀಲರ ವಾದ ಆಲಿಸಿದ್ದ ಮೈಸೂರಿನ ಐದನೆಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಾದ ಗುರುರಾಜ್ ಸೋಮಕ್ಕಳವರ್ 23.04.2025 ರಂದು ಆರೋಪಿ ಸುರೇಶನನ್ನು ಗೌರವಪೂರ್ವಕವಾಗಿ ನಿರಪರಾಧಿಯೆಂದು ಘೋಷಿಸಿ ಬಿಡುಗಡೆಗೊಳಿಸಿ ಆತನ ಹೆಸರನ್ನು ಪೊಲೀಸ್ ಠಾಣೆಯ ಕಡತದ ದಾಖಲೆಯಿಂದ ತೆಗೆದುಹಾಕುವಂತೆ ಬೆಟ್ಟದಪುರ ಪೊಲೀಸ್ ಠಾಣೆಯ ಅಧಿಕಾರಿಗೆ ನಿರ್ದೇಶನ ನೀಡಿತ್ತು. ಹಾಗೆಯೇ ನಿರಪರಾಧಿ ಸುರೇಶನಿಗೆ ಒಂದು ಲಕ್ಷ ರೂಪಾಯಿ ಪರಿಹಾರ ನೀಡುವಂತೆ ಕರ್ನಾಟಕ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗೆ ಹಾಗೂ ಹೆಚ್ಚುವರಿ ಕಾರ್ಯದರ್ಶಿ ಗೃಹ ಇಲಾಖೆಗೆ ನಿರ್ದೇಶನ ನೀಡಿತ್ತು. ದೋಷಪೂರಿತ ತನಿಖೆ ಮಾಡಿದ್ದ ಪೊಲೀಸ್ ಅಧಿಕಾರಿಗಳಾದ ಜಿತೇಂದ್ರ ಕುಮಾರ್, ಪ್ರಕಾಶ್ ಎಂ ಯತ್ತಿನಮನಿ, ಮಹೇಶ್ ಕುಮಾರ್ ಬಿ ಕೆ ಹಾಗೂ ಪ್ರಕಾಶ್ ಬಿಜಿ ವಿರುದ್ಧ ಇಲಾಖಾ ತನಿಖೆ ನಡೆಸಿ ನ್ಯಾಯಾಲಯಕ್ಕೆ ವರದಿ ನೀಡುವಂತೆ ಮೈಸೂರಿನ ಐಜಿಪಿ ಅವರಿಗೆ ನ್ಯಾಯಾಲಯವು ನಿರ್ದೇಶನ ನೀಡಿತ್ತು.

ಮೈಸೂರಿನ ಜಿಲ್ಲಾ ನ್ಯಾಯಾಧೀಶರ ತೀರ್ಪು, ಆದೇಶ ಹಾಗೂ ನಿರ್ದೇಶನದ ಪ್ರತಿಯು ಸರಕಾರ, ಗೃಹ ಇಲಾಖೆ ಹಾಗೂ ಪೊಲೀಸ್ ವರಿಷ್ಠಾಧಿಕಾರಿ, ಹಾಗೂ ಐಜಿಪಿ ಅವರ ಕೈಸೇರಿ ನಾಲ್ಕು ತಿಂಗಳು ಕಳೆದರೂ ಸಹ ಆ ಅಸ್ಥಿಪಂಜರದ ಕತೆ ಏನಾಯಿತು ಎಂಬ ವಿಚಾರ ಬೆಳಕಿಗೆ ಬರಲೇ ಇಲ್ಲ.

ಈ ತೀರ್ಪಿನ ಪ್ರತಿಯನ್ನು ಡಿಜಿಪಿ ಬೆಂಗಳೂರು, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರಕಾರ, ಹೆಚ್ಚುವರಿ ಕಾರ್ಯದರ್ಶಿ ಗೃಹ ಇಲಾಖೆ, ಐಜಿಪಿ ಹಾಗೂ ಎಸ್‌ಪಿ ಮೈಸೂರು ಇವರಿಗೆ ಕಳಿಸುವಂತೆ ನಿರ್ದೇಶನವನ್ನೂ ನೀಡಿತ್ತು.

ವಿಪರ್ಯಾಸವೆಂದರೆ ದೋಷಪೂರಿತ ತನಿಖೆ ನಡೆಸಿ ಜಿಲ್ಲಾ ನ್ಯಾಯಾಲಯದ ಕೆಂಗಣ್ಣಿಗೆ ಗುರಿಯಾಗಿ ತನಿಖೆ ಎದುರಿಸಬೇಕಾಗಿದ್ದ ಪೊಲೀಸ್ ಅಧಿಕಾರಿ ಜಿತೇಂದ್ರ ಕುಮಾರ್ ಅವರು ಅನಾಮಿಕನ ನಿರ್ದೇಶನದಂತೆ ಗುಂಡಿ ಅಗೆಯುತ್ತಾ ಅಸ್ಥಿಪಂಜರ ಹುಡುಕುವ ಎಸ್ಐಟಿ ತಂಡದಲ್ಲಿ ಕಾರ್ಯೋನ್ಮುಖರಾಗಿದ್ದಾರೆ.

ಅನಾಮುಖ, ಅನಾಮಿಕ, ಅನಾಮಧೇಯನೊಬ್ಬನ ಮಾತು ಕೇಳಿ ಆತುರಾತುರವಾಗಿ ಉತ್ಖನನ ನಡೆಸಲು ಆದೇಶಿಸಿದ ಸರಕಾರಕ್ಕೆ ಮೈಸೂರಿನ ಜಿಲ್ಲಾ ನ್ಯಾಯಾಧೀಶರೊಬ್ಬರು ಅಧಿಕೃತ ತೀರ್ಪು ಮತ್ತು ಆದೇಶದ ಮೂಲಕ ಹೊರಡಿಸಿದ ನಿರ್ದೇಶನವನ್ನು ಪಾಲಿಸಬೇಕೆಂಬ ಕನಿಷ್ಠ ಸೌಜನ್ಯವಾದರೂ ಇರಬೇಡವೇ?

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

■ ಪಾಲಿಕೆ ನೀರಿನ ಬಿಲ್ ವ್ಯತ್ಯಾಸವೇಕೆ?

ಮಾನ್ಯರೆ,

ಈ ತಿಂಗಳ 13 ರಂದು ಪಾಲಿಕೆಯು ಜುಲೈ ತಿಂಗಳ ನೀರಿನ ಬಳಕೆಯ ಬಿಲ್ಲನ್ನು ಮನೆಗೆ ಬಂದು ನೀಡಿದೆ. (ಬಿಲ್ ಸಂ. 41041191). ಆದರೆ ವಾಸ್ತವವಾಗಿ ಆನ್‌ಲೈನ್ ಮೂಲಕ ನಾನು ಬಿಲ್ ಪಾವತಿ ಮಾಡುತ್ತಿದ್ದು, ಆನ್‌ಲೈನ್‌ನಲ್ಲಿ ಬಂದಿರುವ ಬಿಲ್ ನಂಬರ್ 07202532493 ಆಗಿದ್ದು, ಮೊತ್ತ ಒಂದೇ ಆಗಿರುತ್ತದೆ. ಆದರೆ, ಆನ್‌ಲೈನ್‌ನಲ್ಲಿ ಮೊತ್ತ ಪಾವತಿಸಿ, ನಂತರ ಪಾಲಿಕೆ ನೀಡಿರುವ ಬಿಲ್ ಸಂಖ್ಯೆಗೆ ಹೊಂದಾಣಿಕೆಯಾಗದಿದ್ದಲ್ಲಿ ಯಾರು ಹೊಣೆ? ಈ ರೀತಿ ಒಂದೇ ತಿಂಗಳ ಬಿಲ್ಲಿಗೆ ಎರಡೆರಡು ಸಂಖ್ಯೆ ಹೇಗೆ? ಇದರಿಂದ ಸಮಸ್ಯೆ ಇಲ್ಲವೇ? ಈ ನಿಟ್ಟಿನಲ್ಲಿ ಪಾಲಿಕೆ ಅಥವಾ ನೀರು ಸರಬರಾಜು ಮಂಡಳಿ ಉತ್ತರಿಸುವರೇ?

–ವಿಜಯ್ ಹೆಮ್ಮಿಗೆ, ಮೈಸೂರು

■ ಯಾವ ಹುತ್ತದಲ್ಲಿ.. ಯಾವ ಹಾವೋ...

ಮಾನ್ಯರೆ,

ಪತ್ರಿಕೆಗಳಲ್ಲಿ ನಿತ್ಯ ಸುದ್ದಿ:
ಮನೆ ಕಳವು....ಚಿನ್ನಾಭರಣ ಲೂಟಿ....ಕಳ್ಳರಿಗಾಗಿ
ಪೊಲೀಸರ ಶೋಧ.......
ಈಗ ನಿತ್ಯ ಸುದ್ದಿ : ಮತ ಕಳವು...
ನಕಲಿ ಮತದಾರರ ಪಟ್ಟಿ,
ನಕಲಿ ಹೆಸರು... ನಕಲಿ
ಮತದಾನ......
ಯಾವ ಹುತ್ತದಲ್ಲಿ ಯಾವ
ಹಾವೋ... ಕೈ ಹಾಕಿ......
ಹಿಡಿಯಲು ಸಾಧ್ಯವಾ....!?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ನಿಶ್ಯಬ್ದವ ಆಸ್ವಾದಿಸುವ ಅನುಭೂತಿ


ತಾಳ್ಮೆ, ತೃಪ್ತಿಗಳೆರಡು ಬದುಕಿನ ಜೀವ ದ್ರವ್ಯವಾಗಬೇಕಾದ ಅನಿವಾರ್ಯತೆಯ ಜಗತ್ತು ಉದಯಿಸಿದೆ. ಮನುಷ್ಯ ತನ್ನ ಮನಸ್ಸಿನ ವೇಗಕ್ಕೆ ಕಡಿವಾಣ ಹಾಕಿ ಪ್ರಕೃತಿಯ ನಿಶ್ಯಬ್ದವನ್ನ ಆಸ್ವಾದಿಸುವ ಅನುಭೂತಿಗೆ ಮನಸ್ಸು ಸಿದ್ಧವಾಗಬೇಕಿದೆ. ಆದರೆ ನಿಶ್ಯಬ್ದವನ್ನ ಆಸ್ವಾದಿಸಲಾಗದೆ ಆತಂಕದಲ್ಲೇ ದಿನದೂಡುವ ಮಿತಿಗೆ ಈ ಬದುಕು ಬಂದು ನಿಂತಿದೆ. ಯಾರ ಬದುಕಿಗೂ ಒಂದು ಭದ್ರವಾದ ಭದ್ರತೆ ಕಾಣುತ್ತಿಲ್ಲ. ಜಗತ್ತೇ ಅಯೋಮಯ ಚರಿತ್ರೆಗೆ ಮತ್ತೇ ಮೈಯೊಡ್ಡುತ್ತಿದೆ. ಈ ಹಿನ್ನೆಲೆಯಲ್ಲಿ ಮಾನಸಿಕ ಖಿನ್ನತೆಗಳು ಸದ್ದಿಲ್ಲದೇ ಎಡ ತಾಕುತ್ತಿವೆ. ಕೆಲವೊಮ್ಮೆ ತರ್ಕರಹಿತ ಸಂಗತಿಗಳು ನಮ್ಮನ್ನು ಆಳುತ್ತವೆ. ದೇಹ ಮನಸ್ಸು ಎರಡು ಸರಿಯಾಗಿದ್ದರೂ ಕೂಡ ಏನೋ ಬೇಸರ. ಏನೋ ಅವಸರ, ಉಹುಂ ಮನಸ್ಸು ಜಪ್ಪಯ್ಯಾ ಅಂದರು ಒಪ್ಪುವುದಿಲ್ಲ. ಇವತ್ಯಾಕೋ ಮೂಡಿಲ್ಲ, ಯಾವ ಕೆಲಸ ಮಾಡೋದಕ್ಕೂ ಇಷ್ಟ ಇಲ್ಲ, ಬೆಳಿಗ್ಗೆ ಸರಿಯಾಗಿ ಎದ್ದೇ ಇಲ್ಲ, ಎದ್ದು ಯಾರ ಮುಖ ನೋಡಿದೆನೋ ಗೊತ್ತಿಲ್ಲ, ಅಂತು ಇವತ್ತು ನನ್ನ ಕೈಲಿ ಏನೂ ಮಾಡೋಕಾಗ್ತಿಲ್ಲ! ಯಾಕೋ ಇವತ್ತು ಟೈಮೇ ಸರಿ ಇಲ್ಲ. ಬೆಳಿಗ್ಗೆಯಿಂದ ಯಾಕೆ ನನಗೆ ಹೆಂಗೆಂಗೋ ಆಗ್ತಾ ಇದ್ಯಲ್ಲ. ಛೇ ನನಗೇ ಹೀಗಾಗಬೇಕಾ?–ಹೀಗೆ ಹತ್ತಾರು ರೀತಿಯ ತಲೆಬುಡವಿಲ್ಲದ ಪ್ರಶ್ನೆಗಳು, ಭಾವಗಳು, ನಮ್ಮನ್ನ ಆವರಿಸಿಕೊಳ್ತವಲ್ಲ ಅದಕ್ಕೇನಂತೀರಿ? ಕೈ ಕಾಲು, ಕಣ್ಣು, ಕಿವಿ, ಮೂಗು, ಎಲ್ಲಾ ನೆಟ್ಟಗಿರೋ ನಮಗೇ ಒಮ್ಮೊಮ್ಮೆ ಎಲ್ಲಾ ಇದ್ದೂ ಏನೂ ಬೇಡ ಅನ್ಸುತ್ತಲ್ವ? ನಮ್ಮನ್ನ ನಾವು ಯಾವ ಡಾಕ್ಟರಿಗೂ ತೋರಿಸಿಕೊಳ್ಳೋಕೆ ಹೋಗುವುದೇ ಇಲ್ಲ ಆದರೂ ನಮ್ಮಷ್ಟಕ್ಕೇನೇ ನಾವೇ ಸರಿ ಹೋಗಿ ಒಂದೆರಡು ದಿನ ಕಳೆದ ಮೇಲೆ ಮತ್ತೆ ಮೊದಲಿ ನಂತೆ ಲವಲವಿಕೆಯಿಂದ ದೈನಂದಿನ ದಿನಚರಿಗೆ ಬಂದು ಬಿಡುತ್ತೇವೆ ಅಲ್ವಾ? ಹಾಗಾದರೆ ಆ ಎರಡು ದಿನ ನಮ್ಮನ್ನ ಥೋ ಅಂತ ಸುತ್ತಿಕೊಂಡು ಕೈಕಾಲಾಡದಂತೆ ಮನಸ್ಸನ್ನ ನಿತ್ರಾಣಗೊಳಿಸಿ ಬಿಟ್ಟಿತ್ತಲ್ಲ ಏನದು? ದೆವ್ವಾನ? ಭೂತಾನ? ಖಾಯಿಲೆನಾ? ಅಂಗವೈಕಲ್ಯತೇನಾ? ಇದ್ಯಾವುದೂ ಅಲ್ಲ! ಅದು ಇಡೀ ಮಾನವಕುಲವನ್ನೇ Total Confuse ಮಾಡಬಲ್ಲ ತಾಕತ್ತಿರುವ ಡಿಪ್ರೆಷನ್. ಅಂದರೆ ಮಾನಸಿಕ ಖಿನ್ನತೆ, ಲಗಾಮಿಲ್ಲದೆ ಓಡುವ ಮನಸ್ಸಿನ ಮೇಲೆ ವಿನಾ ಕಾರಣ ಸವಾರಿ ಮಾಡುವ ನ್ಯೂನತೆ. ಇದು ಜಗತ್ತಿನಲ್ಲಿ ಯಾರನ್ನು ಬಿಟ್ಟಿದೆ ಹೇಳಿ? ಇದಕ್ಕೆ ಬಡವ ಬಲ್ಲಿದ, ಚಿಕ್ಕವರು, ದೊಡ್ಡವರು, ಹೆಂಗಸರು, ಗಂಡಸರು ಅನ್ನೋ ಭೇದವಿಲ್ಲ! ಅವರು ಜಗತ್ತನ್ನೇ ಆಳುತ್ತಿರಲಿ, ಅವರು ಎಂಥವರೇ ಆಗಿರಲಿ, ಎಷ್ಟೇ ಎತ್ತರದಲ್ಲಿರಲಿ, ಅವರ ಹೆಗಲ ಮೇಲೆ ಕೈಯ್ಯಿಟ್ಟು ಕೆಲವು ಘಂಟೆಗಳಾದರೂ ಅವರನ್ನು ಕಾಡದೆ ಬಿಡುವುದಿಲ್ಲ ಈ ಕನ್ನಡದ ಖಿನ್ನತೆ ಇಂಗ್ಲೀಷಿನ ಡಿಪ್ರೆಷನ್ನು. ನಿಜ! ಇವತ್ತಿನ ಒತ್ತಡದ ಬದುಕು ಸಾಮಾನ್ಯರು ಅಸಾಮಾನ್ಯರು ಎನ್ನದೆ ಎಲ್ಲರನ್ನೂ ಬೇರೆ ಬೇರೆ ಕಾರಣಗಳಿಂದಾಗಿ ಖಿನ್ನತೆಯ ಪ್ರಪಾತಕ್ಕೆ ತಳ್ಳುತ್ತಿದೆ.

‘ನಾಗಮಂಡಲ’ ಖ್ಯಾತಿಯ ನಟಿ ವಿಜಯಲಕ್ಷ್ಮಿ ಆತ್ಮಹತ್ಯೆಗೆ ಯತ್ನಿಸಿ ಪ್ರಾಣಾಪಾಯದಿಂದ ಪಾರಾದ ಸುದ್ದಿ, ಸುಶಾಂತ್ ಸಿಂಗ್ ರಜಪೂತ್ ಎಂಬ ಚಿಕ್ಕ ವಯಸ್ಸಿನ ಬಾಲಿವುಡ್ ನಟ ಆತ್ಮಹತ್ಯೆ ಮಾಡಿಕೊಂಡ ದುರಂತ. ಅವನು ಸತ್ತ ನಂತರ ಹತ್ತಾರು ಕತೆಗಳು ಹುಟ್ಟಿಕೊಂಡು ಆತ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಎಂಬುದರಿಂದ ಹಿಡಿದು ಆತನ ವೃತ್ತಿ ಬದುಕಿನ ಏಳು–ಬೀಳಿನ ತನಕ ಊಹಾ–ಪೋಹಗಳು ಗರಿಬಿಚ್ಚಿದವು. ಇತ್ತೀಚೆಗೆ ಶಾಲಾ ಬಾಲಕನೊಬ್ಬ ತುಂಬಾ ದೊಡ್ಡವರ ತರ ಪತ್ರ ಬರೆದು ಚಿಕ್ಕ ವಯಸ್ಸಿಗೆ ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಬೆಂಗಳೂರಿನಲ್ಲಿ ನಡೆದಿತ್ತು. ಹಾಗೆಯೇ ಬಿಗ್‌ಬಾಸ್ ಖ್ಯಾತಿಯ ಜಯಶ್ರೀ ಎಂಬ ಹುಡುಗಿ ಆತ್ಮಹತ್ಯೆಗೆ ಯತ್ನಿಸಿ ನಟ ಸುದೀಪ್ ಬುದ್ಧಿ ಹೇಳಿ ಆಕೆಯ ಮಾನಸಿಕ ಖಿನ್ನತೆಗೆ ಬ್ರೇಕ್ ಹಾಕಿದ್ದಾರೆಂಬ ಸುದ್ದಿಯೂ ತಮಗೆ ನೆನಪಿರಬೇಕು.

ನಮ್ಮ ಕನ್ನಡದ ನಟಿ ಕಲ್ಪನಾ ಕೂಡ ತನ್ನ ವೈಯಕ್ತಿಕ ಸಮಸ್ಯೆಗಳ ಒತ್ತಡ ತಾಳಲಾರದೆ ಮಾನಸಿಕ ಖಿನ್ನತೆಯಿಂದ ಬಳಲಿಯೇ ಸತ್ತ ವರದಿಗಳು ಮತ್ತು ವಿವರಗಳನ್ನು ನೋಡಿದವರು ನಾವು. ಅದರಲ್ಲೂ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ ಹಣ, ಹೆಸರು, ಖ್ಯಾತಿ ಗಳಿಸಿದವರಷ್ಟೇ ಅಲ್ಲ ಬೇರೆ ಬೇರೆ ಸಮಸ್ಯೆಗಳಿಗೆ ಸಿಲುಕಿದ ಶ್ರೀಸಾಮಾನ್ಯರೂ ಈ ಮಾನಸಿಕ ಖಿನ್ನತೆಯಿಂದ ತಪ್ಪಿಸಿಕೊಂಡಂತೆ ಕಾಣುತ್ತಿಲ್ಲ. ಅಸಂಖ್ಯಾತ ಯುವ ಮನಸ್ಸುಗಳು ‘ನನ್ನ ಸಾವಿಗೆ ಯಾರೂ ಕಾರಣರಲ್ಲ’ ಎಂದು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗುತ್ತಿರುವ ಪ್ರಕರಣಗಳ ಸಂಖ್ಯೆ ಕಡಿಮೆ ಏನಿಲ್ಲ.

ಪಾಲಕರು ತಾವು ಕೇಳಿದ್ದನ್ನು ಕೊಡಿಸಲಿಲ್ಲ ಎಂಬ ಚಿಕ್ಕ ನೆಪವನ್ನೇ ದೊಡ್ಡದು ಮಾಡಿಕೊಂಡ ಬಾಲಕರು ಮಾನಸಿಕ ಖಿನ್ನತೆಗೆ ಒಳಗಾಗಿ ನೆಗೆಟೀವ್ ಎನರ್ಜಿಯ ಕಡೆಗೆ ಓಡುತ್ತಿರುವ ಅವಸರದ ಸದ್ದುಗಳು ಕೇಳಿಸುತ್ತಿವೆ. ಕೊರೊನಾಯುಕ್ತ ಈ ವಾತಾವರಣದಲ್ಲಿ ಏನೇನೋ ಕಾರಣಗಳು ಈ ಖಿನ್ನತೆಗೆ ದೂಡಿ ಸತಾಯಿಸುತ್ತಿದೆ.

ಜಾಲಿ ಬಾರಿನಲ್ಲಿ ನಮ್ಮ ಪೋಲಿ ಗೆಳೆಯರು ಗೋಪಿಯನ್ನು ಪಾಪ ಗೇಲಿ ಮಾಡುತ್ತಿದ್ದರು ಅಂತ ಹಾಡಿಕೊಂಡು ಕುಳಿತಿದ್ದ ಗುಂಪಿನಲ್ಲಿ ಯಾರೋ ಒಬ್ಬನಿಗೆ ಒಂದು ಸಾವಿನ ಸಮಾಚಾರ ಬಂತು ಎಂದಿಟ್ಟುಕೊಳ್ಳಿ, ಇಲ್ಲಿಯವರೆಗೂ ಇದ್ದ ಖುಷಿಯ ಜಾಗದಲ್ಲಿ ಖಿನ್ನತೆ ವಿರಾಜಮಾನವಾಗಿ ರಾರಾಜಿಸಿ ಬಿಡುತ್ತದೆ. ಅಲ್ಲಿದ್ದವರಿಗೆಲ್ಲ ಅದು ಸಂಬಂಧವಿರಲಿ ಇಲ್ಲದೇ ಇರಲಿ ಸ್ಮಶಾನ ವೈರಾಗ್ಯ ಆವರಿಸಿಬಿಡುತ್ತದೆ. ಮಾತಿನ ವರಸೆಯೇ ಬದಲಾಗಿಬಿಡುತ್ತದೆ. ‘ಇಷ್ಟೇ ಕಣಯ್ಯಾ ಜೀವನ’, ಇಷ್ಟಕ್ಕೋಸ್ಕರ ಅವನು ಎಷ್ಟೆಲ್ಲಾ ಮಾಡಿದ ಗೊತ್ತಾ? ಛೇ ನಾಳೆ ನಮ್ದು ಇಷ್ಟೆ, ಅಂತ ಮಾತಿನ ವರಸೆ, ಮುಖದ ಭಂಗಿ, ಎಲ್ಲವೂ ಬದಲಾಗಿ ಬಿಡುತ್ತದೆ. ಹೇಗಿದೆ ನೋಡಿ ಮಾನಸಿಕ ಖಿನ್ನತೆಯ ಆಗಮನ. ಅಲ್ಲಿಯವರೆಗು ಎಲ್ಲೋ ಇದ್ದ ಖಿನ್ನತೆ ವಾಯುವೇಗದಲ್ಲಿ ಬಂದು ಕುಳಿತಿರುತ್ತದೆ.



> ಇವತ್ತಿನ ಒತ್ತಡದ ಬದುಕು ಸಾಮಾನ್ಯರು, ಅಸಾಮಾನ್ಯರು ಎನ್ನದೆ ಎಲ್ಲರನ್ನೂ ಬೇರೆ ಬೇರೆ ಕಾರಣಗಳಿಂದಾಗಿ ಖಿನ್ನತೆಯ ಪ್ರಪಾತಕ್ಕೆ ತಳ್ಳುತ್ತಿದೆ.

ಮತ್ತೆ ಕೆಲವರು ಸಿನಿಮಾದಲ್ಲಿ, ರಾಜಕಾರಣದಲ್ಲಿ, ಉದ್ಯಮದಲ್ಲಿ, ವ್ಯಾಪಾರ ವಹಿವಾಟಿನಲ್ಲಿ ತುಂಬಾ ಬ್ಯುಸಿ. ಅವರಿಗೇನು? ಕೆರ ಕೊಳ್ಳೋಕು ಪುರುಸೊತ್ತಿಲ್ಲ; ಅವರಿಗೆಲ್ಲಿ ಬರುತ್ತೆ ಖಿನ್ನತೆ ಅಂದು ಕೊಂಡಿರಾ? ಅವರು ಸ್ನಾನಕ್ಕೆ ಹೋದಾಗ, ಶೌಚಾಲಯಕ್ಕೆ ಹೋದಾಗ ಅವರ ಮನಸ್ಥಿತಿಯನ್ನು ಕೇಳಿನೋಡಿ! ಗೊತ್ತಾಗುತ್ತದೆ! ಹತ್ತು ಬಂಡಲು ದುಡ್ಡು ಎಣಿಸಿದ ಕೈ ಹನ್ನೊಂದನೆಯಕ್ಕೆ ಮೆಷೀನು ಕೇಳುತ್ತದೆ. ಹತ್ತು ಸಲ ಚುಂಬಿಸಿದ ಸಿನಿಮಾ ಹೀರೊ ಹನ್ನೊಂದನೆಯದಕ್ಕೆ ಬುದ್ಧನಂತೆ ಸ್ವಭಾವ ವೈರಾಗ್ಯಕ್ಕೆ ಜಾರುತ್ತಿರುತ್ತಾನೆ. ಯಾರಿಗೆ ಇದ್ಯಾವುದು ಇರುವುದಿಲ್ಲವೋ ಅವರು ಅದರ ಬಗ್ಗೆ ವ್ಯಾಮೋಹಗೊಂಡಿರುತ್ತಾರೆಯೆ ಹೊರತು ಇದೆಲ್ಲವನ್ನೂ ಅನುಭವಿಸಿದವರ ಹೆಗಲ ಮೇಲೆ ತಮಗರಿವಿಲ್ಲದಂತೆಯೆ ಖಿನ್ನತೆ ಬಂದು ಕುಳಿತು ಎಷ್ಟೋ ಹೊತ್ತಾಗಿರುತ್ತದೆ. ತಮ್ಮ ಇಮೇಜ್ ಹಾಳಾಗಬಾರದೆಂಬ ಕಾರಣಕ್ಕೆ ಅದರ ಫಲಾನುಭವಿಗಳು ಬೇರೆಯವರಿಗೆ ಅದನ್ನೆಲ್ಲಾ ತೋರಿಸಿಕೊಳ್ಳುವುದಿಲ್ಲ ಅಷ್ಟೆ. ಹೇಗಿದೆ ನೋಡಿ ಖಿನ್ನತೆಯ ಸುಖಾಗಮನ!

ನಮಗಿರುವುದು ಎರಡೇ ವ್ಯಕ್ತಿತ್ವ ಒಂದು ಅಂತರ್ಮುಖಿ, ಇನ್ನೊಂದು ಬಹಿರ್ಮುಖಿ, ಬಹಿರ್ಮುಖಿ ವ್ಯಕ್ತಿತ್ವಕ್ಕೆ ಗೆಳೆತನ, ಬಾಂಧವ್ಯಗಳ ಸಂಖ್ಯೆ ಜಾಸ್ತಿ. ಖಿನ್ನತೆ ಆವರಿಸುತ್ತಿದ್ದಂತೆಯೇ ತಡಮಾಡದೆ ಅವರು ಆತ್ಮೀಯರ ಗುಂಪು ಸೇರಿಕೊಂಡು ಬಿಡುತ್ತಾರೆ. ಮನಸ್ಸೋ ಇಚ್ಛೆ ಹರಟುತ್ತಾರೆ. ಹಗುರಾಗುತ್ತಾರೆ. ಖಿನ್ನತೆಯ ವ್ಯಸನದಿಂದ ಪಾರಾಗುತ್ತಾರೆ. ಆದರೆ ಈ ಅಂತರ್ಮುಖಿ ವ್ಯಕ್ತಿತ್ವಗಳಿದ್ದಾವಲ್ಲ! ಅಪರೂಪದ ಭಾವನಾ ಜೀವಿಗಳು. ಯಾರನ್ನೂ ಹತ್ತಿರಕ್ಕೆ ಸೇರಿಸುವುದಿಲ್ಲ. ಎದೆಯಾಳದ ತುಮುಲಗಳನ್ನು ಯಾರೊಂದಿಗೂ ಹಂಚಿಕೊಳ್ಳುವುದಿಲ್ಲ. ಇಂಥವರಿಗೆ ಅತೀ ಸೂಕ್ಷ್ಮವಾದ ಭಾವತೀವ್ರತೆಗಳು ಜಾಸ್ತಿ. ಅವು ಕೈಕೊಟ್ಟರೆ ಮುಗೀತು ಕಥೆ. ಅವರನ್ನು ಆವರಿಸಿದ ಖಿನ್ನತೆ ಒಂದೇ ಗುಟುಕಿಗೆ ಅವರನ್ನು ಬಿಡುವುದಿಲ್ಲ. ಸಾವಿನ ಜೊತೆ ಸರಸಕ್ಕೆ ಕರೆಯುತ್ತದೆ, ನಿಮಗೆ ಗೊತ್ತಾ? ಹಲವು ವರ್ಷಗಳ ಹಿಂದೆ ನೇಪಾಳದ ರಾಜನ ಮಗ ದೀಪೇಂದ್ರ ಎನ್ನುವ ಯುವರಾಜ ದೇವಯಾನಿ ಎಂಬ ತನ್ನ ಗೆಳತಿಯನ್ನು ಮದುವೆಮಾಡಿಕೊಳ್ಳಲು ಒಪ್ಪದ ಕಾರಣಕ್ಕೆ ತನ್ನ ತಂದೆ, ಚಿಕ್ಕಪ್ಪ, ಚಿಕ್ಕಮ್ಮ, ಅಕ್ಕ, ತಂಗಿಯರ ಸಮೇತ ಒಟ್ಟು ಒಂಬತ್ತು ಜನರನ್ನು ಒಂದೇ ಏಟಿಗೆ ಗುಂಡಿಟ್ಟು ಕೊಂದು ಕಡೆಗೆ ತನ್ನನ್ನು ತಾನೇ ಕೊಂದುಕೊಂಡ. ಅಂತರ್ಮುಖಿ ವ್ಯಕ್ತಿತ್ವದ ದೀಪೇಂದ್ರ ಖಿನ್ನತೆಯಿಂದ ಬಳಲುತ್ತಿದ್ದ. ಅರಮನೆ ಅಕ್ಷರಶಃ ರಕ್ತದೋಕುಳಿಯಾಗಿತ್ತು. ಇದೇ ಕಥೆಯನ್ನಾಧರಿಸಿ ಕನ್ನಡದಲ್ಲಿ ಉಪೇಂದ್ರ ಸಿನಿಮಾ ಮಾಡಿದ, ಹೇಗಿದೆ ನೋಡಿ ಖಿನ್ನತೆಯ ಅಂತರ್ಮುಖೀ ಜಗತ್ತು. ಹಾಗಾಗಿ ಮನಸ್ಸಿನ ತುಮುಲಗಳನ್ನು ಹತ್ತಿರದವರಲ್ಲಿ ಹೇಳಿಕೊಳ್ಳುವ ಅಭ್ಯಾಸ ಬೆಳೆಸಿಕೊಳ್ಳಿ ಎನ್ನೋದು ಮನೋವಿಜ್ಞಾನಿಗಳ ಸಲಹೆ.

ಇವತ್ತಿಗೂ ಕಾರ್ಪೋರೇಟ್ ಸಂಸ್ಥೆಗಳಲ್ಲಿ ದಿಢೀರ್ ಅಂತ ಕೆಲಸದಿಂದ ತೆಗೆದುಬಿಟ್ಟರೆ! ವಿದ್ಯಾರ್ಥಿಗಳು ಫಲಿತಾಂಶಗಳಲ್ಲಿ ಫೇಲಾದರೆ! ನಿರೀಕ್ಷಿಸಿದಷ್ಟು ಅಂಕಗಳು ಬರದೇ ಹೋದರೆ! ಪ್ರೀತಿಸಿದವರು ಕೈಕೊಟ್ಟರೆ, ಆಪ್ತರು, ಪ್ರೀತಿ ಪಾತ್ರರು, ಅತೀ ಹತ್ತಿರದವರು ಸತ್ತು ಹೋದರೆ! ತಂದೆ ದುಶ್ಚಟಗಳ ದಾಸನಾಗಿ ಹೋದರೆ! ಮಗ ಅಥವಾ ಮಗಳು ದಾರಿ ತಪ್ಪಿ ಬಿಟ್ಟರೆ! ಅನುವಂಶಿಕವಾಗಿ, ಹಾರ್ಮೋನ್ ವ್ಯತ್ಯಾಸವಾಗಿ ಬಿಟ್ಟರೆ! ವಿಪರೀತ ನಾಚಿಕೆ, ಗಾಬರಿ, ಆತಂಕ ಸ್ವಭಾವಗಳಿದ್ದರೆ! ಪೋಷಕರು ಪದೇ ಪದೇ ತಮ್ಮ ಮಕ್ಕಳನ್ನು ಬೇರೆಯವರ ಮಕ್ಕಳಿಗೆ ಹೋಲಿಸಿ ಹಂಗಿಸುತ್ತಿದ್ದರೆ! ದಾಂಪತ್ಯದಲ್ಲಿ ವಿರಸವಿದ್ದರೆ! ಮುಟ್ಟಿದ್ದೆಲ್ಲಾ ಮಣ್ಣಾಗು ವಂತಿದ್ದರೆ, ಅರ್ಹತೆಯಿದ್ದೂ ಏನೂ ಆಗದಿದ್ದರೆ, ಆಗ ಹುಟ್ಟುತ್ತೆ ನೋಡಿ ಖಿನ್ನತೆಯ ಉದ್ಗಾರ ‘I am depressed’ ‘I am fedup’ Sorry ನನಗೇನು ಬೇಕಿಲ್ಲ! ಯಾರೂ ಬೇಕಿಲ್ಲ! ಹೀಗೆ ಉದ್ಭವಿಸುವ ಮಾನಸಿಕ ತುಮುಲ ಕಡೆಗೆ ದೇಹದ ಮೇಲೆ ಹಕ್ಕು ಸಾಧಿಸಿಬಿಡುತ್ತದೆ. ನಿದ್ದೆ ಬರಲ್ಲ, ಊಟ ಸೇರಲ್ಲ, ಅಳು ಬರುತ್ತೆ ನಿದ್ದೆಯಲ್ಲೇ ಎದ್ದು ಓಡಾಡು ತ್ತಾರೆ. ಮಲಗಿದ್ದಲ್ಲೇ ಯಾರೋ ಮೈಮೇಲೆ ಬಂದಂತೆ ಕಿಟಾರನೆ ಕಿರುಚು ತ್ತಾರೆ, ಏಕಾಗ್ರತೆ ಕಳೆದುಕೊಳ್ಳುತ್ತಾರೆ. ಚಿಕ್ಕ ಚಿಕ್ಕ ಕೆಲಸಗಳೂ ಬೆಟ್ಟದ ಹಾಗೆ ಕಾಣಿಸುತ್ತವೆ. ಓದು ಬರಹ ಕಷ್ಟ, ಪ್ರತಿಯೊಂದಕ್ಕೂ ವಿರೋಧ ಮಾಡುತ್ತಾರೆ. ಸಾರಿಗೆ ಉಪ್ಪು ಜಾಸ್ತಿ, ಕಾಫಿಗೆ ಸಕ್ಕರೆ ಕಮ್ಮಿ ಹೀಗೆ ಇನ್ನು ಏನೇನೇನೇನೊ ನಡೆಯುತ್ತಿರುತ್ತದೆ. ಈ ಜೀವನವೇ ಜುಗುಪ್ಸೆ ಅಂತ ಮಾತಾಡೋಕೆ ಶುರು ಮಾಡ್ತಾರೆ. ಇನ್ನೂ ಕೆಲವರು ದೈಹಿಕವಾಗಿ ಕೆಲವು ಖಾಯಿಲೆಗಳಿಂದ ಬಳಲುತ್ತಿದ್ದಾಗ ಕೂಡ ಖಿನ್ನತೆಗೆ ಒಳಗಾಗುತ್ತಾರೆ. ಮತ್ತೆ ಕೆಲವರು ಖಿನ್ನತೆಯಿಂದಾಗಿಯೇ ಖಾಯಿಲೆಗೆ ಒಳಗಾಗುತ್ತಾರೆ. ತಮಾಷೆ ಅಂದ್ರೆ ಈ ಖಿನ್ನತೆ ಎಂಬ ಕೀಟ ಅಸಲಿಗೆ ನಮ್ಮೊಳಗೆ ಪ್ರವೇಶ ಮಾಡಿರುವುದೇ ಕೆಲವೊಮ್ಮೆ ಗೊತ್ತಾಗುವುದಿಲ್ಲವಂತೆ. ಫಲಿತಾಂಶದಲ್ಲಿ ಹೆಣ್ಣುಮಕ್ಕಳು ಮೇಲುಗೈ ಸಾಧಿಸಿದಂತೆ ಇಲ್ಲಿಯೂ ಅವರದ್ದೇ ಮೇಲುಗೈ. ಅವರ ಸಂಖ್ಯೆಯೇ ಜಾಸ್ತಿ. ಸಾಮಾನ್ಯವಾಗಿ ಗಂಡಸರಿಗಿಂತ ಹೆಂಗಸರಲ್ಲಿ ಖಿನ್ನತೆ ಹೆಚ್ಚು. ಮಗು ಹುಟ್ಟಿದಾಗ, ಬಾಣಂತಿತನದಲ್ಲಿದ್ದಾಗ, ಮುಟ್ಟು ನಿಲ್ಲುವ ಆಚೀಚಿನ ದಿನ ಹತ್ತಿರವಾದಾಗ, ಥೈರಾಯ್ಡ್ ತೊಂದರೆಯಾದಾಗ, ಪಿಟ್ಯುಟರಿ ಗ್ರಂಥಿಯಲ್ಲಿ ಹಾರ್ಮೋನ್ ವ್ಯತ್ಯಾಸವಾದಾಗ, ಮಕ್ಕಳಾಗದೇ ಇದ್ದಾಗ, ಯದ್ವಾತದ್ವಾ ದಪ್ಪ ಆದಾಗ, ಎಷ್ಟು ತಿಂದರೂ ಮೈಕಟ್ಟದಿದ್ದಾಗ, ಸ್ವಲ್ಪವೂ ಸ್ವಾತಂತ್ರ್ಯವಿಲ್ಲದೆ ಮನೆಯಲ್ಲೇ ಒಂಟಿತನ ಅನುಭವಿಸಿದಾಗ, ತಾನೆಷ್ಟೇ ಸುಂದರಿಯಾಗಿದ್ದರೂ ಗಂಡ ತನ್ನ ಬಗ್ಗೆ ಆಸಕ್ತಿ ಕಳೆದು ಕೊಂಡಾಗ, ಮನೆಯಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲವೆಂಬಂತೆ ನಡೆಸಿ ಕೊಂಡಾಗ, ಶುರುವಾಗುತ್ತೆ ನೋಡಿ ಸುಸ್ತು. ಸಂಕಟ, ಜಗಳ, ಬೈಗುಳ, ಸುಮ್ಮನೆ ಮಲಗಿದ ನಾಯಿಯ ಬಾಲ ತುಳಿದ ಹಾಗೆ ಕೋಪ ತಾಪ ಪರಿತಾಪಗಳು, ನಾಗರದಂತೆ ಹೆಡೆಯೆತ್ತುತ್ತವೆ. ಇಂಥಾ ಕ್ರಾಂತಿಕಾರಕ ಖಾಯಿಲೆಗಳಿಗೆ, ಸಮಸ್ಯೆಗಳಿಗೆ, ಕಾರಣ ಈ ಖಿನ್ನತೆಯೆಂಬ ಕ್ರಿಮಿ ನಮ್ಮನ್ನು ಆಳುತ್ತಿರುತ್ತದೆ.

ಬ್ರಿಟಿಷ್ ಪ್ರಧಾನಿ ವಿನ್ಸೆಂಟ್ ಚರ್ಚಿಲ್ ಕೂಡ ಈ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದುದಾಗಿ ಗೊತ್ತಾಗಿದೆ. ನಮ್ಮ ಸೂಪರ್ ಸ್ಟಾರ್ ರಜನೀಕಾಂತ್ ಯಾರಿಗೂ ಹೇಳದ ಹಾಗೆ ಸಾಮಾನ್ಯನಂತೆ ಹಿಮಾಲಯಕ್ಕೆ ಹೋಗಿ ಯಾವುದೋ ಗುಹೆ ಕಂದರಗಳಲ್ಲಿ, ಸಾಧು ಸಂತರ ಜತೆ ಇದ್ದು ಬಂದು ಬಿಡುವ ವಿಷಯ. ದೊಡ್ಡ ಸುದ್ದಿ. 1996ರಲ್ಲಿ ಎ.ಬಿ.ಸಿ.ಎಲ್. ಕಂಪನಿ ಮಾಡಿ ನಷ್ಟ ಅನುಭವಿಸಿದ ಬಾಲಿವುಡ್‌ನ ಬಿಗ್ ಬಿ ಅಮಿತಾಬ್ ಬಚ್ಚನ್ ಕೂಡ ಸ್ವಲ್ಪ ಕಾಲ ಈ ಖಿನ್ನತೆಯ ರುಚಿಯನ್ನು ಟೇಸ್ಟ್ ಮಾಡಿದ್ದಾರಂತೆ. ‘ಮೈಚಾಯ್ಸ್’ ಹೇಳಿಕೆಯ ಮೂಲಕ ಸುದ್ದಿಯ ಕೇಂದ್ರವಾಗಿದ್ದ ದೀಪಿಕಾ ಪಡು ಕೋಣೆ 2014ರ ಆರಂಭದಲ್ಲಿ ರಾತ್ರಿ ಮಲಗಿ ಮುಂಜಾನೆ ಏಳು ವಷ್ಟರಲ್ಲಿ ಖಿನ್ನತೆಗೆ ಒಳಗಾಗಿದ್ದಳೆಂಬ ವಿಷಯವನ್ನು ಆಕೆಯೇ ಬಿಚ್ಚಿಟ್ಟಿದ್ದಾಳೆ. ಹೊಟ್ಟೆಯಲ್ಲಿ ಸಂಕಟ, ಕಣ್ಣಲ್ಲಿ ಕತ್ತಲೆ, ಅಸಾಧ್ಯ ಡಿಸ್ಟರ್ಬೆನ್ಸು ಆಕೆಯನ್ನು ಹಣಿದು ಹೈರಾಣ ಮಾಡಿದೆ. ಕೂಡಲೇ ಬೆಂಗಳೂರಿ ನಲ್ಲಿದ್ದ ತಾಯಿ ಉಜ್ವಲಾ ಪಡುಕೋಣೆ ಮುಂಬೈಗೆ ಓಡಿ ಹೋಗಿ ಬಿಕ್ಕಿ ಬಿಕ್ಕಿ ಅಳುತ್ತಿದ್ದ ಮಗಳನ್ನು ಸಂತೈಸಿದ್ದಾರೆ. ಎಲ್ಲಾ ಓಕೆ ಈ ಖಿನ್ನತೆ ಯಾಕೆ? ಎಂಬ ಪ್ರಶ್ನೆಗೆ ಆಕೆಯಲ್ಲಿ ಉತ್ತರವಿಲ್ಲ. ಆಮೇಲೆ ಅವರ ತಾಯಿಯ ಸ್ನೇಹಿತೆ ಮನಃಶಾಸ್ತ್ರಜ್ಞೆ ಅನ್ನಾಚಾಂಡಿ ಬೆಂಗಳೂರಿನ ಮನೋವೈದ್ಯ ಡಾ.ಶ್ಯಾಮ್‌ಭಟ್ ಆಕೆಯ ಖಿನ್ನತೆ ಹೋಗಲಾಡಿಸಿ ದ್ದಾರೆ. ನೀವೇನೆ ಹೇಳಿ ಭಯಂಕರ ಪಾತಕಿಯನ್ನೂ ಪಳಗಿಸಿಬಿಡುವ ಈ ಖಿನ್ನತೆ ಕೆಲವು ವರ್ಷಗಳ ಹಿಂದೊಂದೇ ಏಟಿಗೆ 150 ಜನರನ್ನು ಬಲಿ ತೆಗೆದುಕೊಂಡ ದೃಶ್ಯ ಮನಕಲಕುತ್ತದೆ. ಫ್ರೆಂಚ್ ಆಲ್ಫ್ ಪರ್ವತಕ್ಕೆ ಅಪ್ಪಳಿಸಿ ಧರೆಗುರುಳಿದ ಜರ್ಮನಿಯ ಏರ್ ಬಸ್ ಎ.320 ಜರ್ಮನ್ ವಿಂಗ್ ವಿಮಾನ ದುರಂತ ವಿಶ್ವಾದ್ಯಂತ ಚರ್ಚೆಯಾಗಿತ್ತು. ಕಾರಣ ಗೊತ್ತ? ಆ ವಿಮಾನಕ್ಕೆ ಇಬ್ಬರು ಪೈಲೆಟ್‌ಗಳು ಒಬ್ಬ ಮುಖ್ಯ ಪೈಲೆಟ್ ಪ್ಯಾಟ್ರಿಕ್, ಮತ್ತೊಬ್ಬ ಸಹ ಪೈಲೆಟ್ ಆ್ಯಂಡ್ರಿಯಾಸ್ ಲ್ಯುಬಿಟ್ಸ್ (28). ವಿಮಾನ ಅಪಘಾತಕ್ಕಿಂತ ಮೊದಲು ಪೈಲೆಟ್ ಪ್ಯಾಟ್ರಿಕ್ ಕಾಕ್‌ಪಿಟ್‌ನಿಂದ ಕೆಲಸಮಯ ಹೊರಹೋಗಿದ್ದಾನೆ. ಆಗ ಕಾಕ್‌ಪಿಟ್‌ನ ಒಳಗಿದ್ದ ಸಹಪೈಲೆಟ್ ಆಂಡ್ರಿಯಾಸ್ ಲ್ಯುಬಿಟ್ಸ್ ಕಾಕ್‌ಪಿಟ್‌ನ ಬಾಗಿಲನ್ನ ಒಳಗಿನಿಂದ ಲಾಕ್ ಮಾಡಿಕೊಂಡಿದ್ದಾನೆ. ವಿಮಾನ ಕಂಟ್ರೋಲ್ ರೂಂನ ಸಂಪರ್ಕ ಕಳೆದುಕೊಂಡಿದೆ. ಸ್ಪೇನ್‌ನ ಬಾರ್ಸಿ ಲೋನಾದಿಂದ ಜರ್ಮನಿಯ ಡಸೆಲ್‌ಡಾರ್ಫ್‌ಗೆ ಪ್ರಯಾಣಿಸುತ್ತಿದ್ದ ವಿಮಾನ ಹಠಾತ್ತಾಗಿ 38 ಸಾವಿರದ ಅಡಿ ಎತ್ತರದಿಂದ 6 ಸಾವಿರ ಅಡಿ ಎತ್ತರಕ್ಕೆ ಇಳಿದಿದೆ. ಗಂಟೆಗೆ 700 ಕಿ.ಮೀ. ವೇಗದಲ್ಲಿ ಹಾರುತ್ತಿದ್ದ ಜರ್ಮನ್ ವಿಂಗ್ ನೋಡ ನೋಡುತ್ತಿದ್ದಂತೆ ಆಲ್ಫ್ ಪರ್ವತ ಶ್ರೇಣಿಗೆ ಅಪ್ಪಳಿಸಿದೆ. ಪೈಲೆಟ್ ಎಷ್ಟು ಕಿರುಚಿದರೂ ಆಂಡ್ರಿಯಾಸ್ ಕಾಕ್‌ಪಿಟ್‌ನ ಬಾಗಿಲು ತೆರೆಯಲಿಲ್ಲ. ತನ್ನ ಆತ್ಮಾಹುತಿಯ ಜೊತೆಗೆ ಯಾವ ತಪ್ಪೂ ಮಾಡದ 150 ಅಮಾಯಕ ಪ್ರಯಾಣಿಕರನ್ನು ಕೊಂದಿದ್ದಾನೆ.

ದುರಂತದ ನಂತರ ಆಚೆ ಬಂದ ಸ್ಫೋಟಕ ಮಾಹಿತಿ ಏನು ಗೊತ್ತಾ? ಆತ ಹೀಗೆ ಮಾಡಲು ಕಾರಣ ಅವನ ಮಾನಸಿಕ ಖಿನ್ನತೆ. ಆತ ಖಿನ್ನತೆಗೆ ಒಳಗಾಗಿದ್ದ. 6 ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದ. ಕೆಲವೊಮ್ಮೆ ಹಾಗೆ ಬಂದು ಹೀಗೆ ಹೊರಟು ಹೋಗುವ ಈ ಖಿನ್ನತೆಯೆಂಬ ಕ್ರಿಮಿ ಎಂಥ ಅವಘಡಗಳನ್ನು ಸೃಷ್ಟಿಸಿಬಿಡುತ್ತದೆ ನೋಡಿ. ಪ್ರಿನ್ಸಸ್ ಡಯಾನ ರಾಜಕುಮಾರ ಚಾರ್ಲ್ಸ್‌ನನ್ನು ಮದುವೆಯಾದ ಹೊಸದರಲ್ಲಿ ಆ ರಾಯಲ್ ಫ್ಯಾಮಿಲಿಯ ಸ್ಟೇಟಸ್ಸಿಗೆ ಹೊಂದಿಕೊಳ್ಳ ಲಾಗದೆ ಖಿನ್ನತೆಗೆ ಒಳಗಾಗಿದ್ದು ಸುದ್ದಿಯಾಗಿತ್ತು. ಆದರೆ ಅದೊಂದೇ ಕಾರಣವಾಗಿರಲಿಲ್ಲ. ರಾಜಕುಮಾರ ಚಾರ್ಲ್ಸ್ ತನ್ನ ಹಳೆಯ ಗೆಳತಿ ಯರ ಗುಂಗಿನಲ್ಲೇ ಇರುತ್ತಾನೆಂಬ ಸತ್ಯ ಕೂಡ ಆಕೆಯನ್ನು ಖಿನ್ನತೆಗೆ ದೂಡಿತ್ತು. ಇದಕ್ಕೆ ಉತ್ತರವಾಗಿ ತಾನೂ ಕೂಡ ಬೇರೊಬ್ಬ ಗೆಳೆಯ ನೊಂದಿಗೆ ಆಪ್ತವಾಗಿರಲು ಬಯಸಿದ ಡಯಾನ ಪತ್ರಕರ್ತರ ಕಣ್ಣಿಗೆ ಬಿದ್ದು ಅವರ ಕ್ಯಾಮರಾ ಕಣ್ಣಿಗೆ ಸಿಗಬಾರದೆಂಬ ಕಾರಣಕ್ಕೆ ವೇಗವಾಗಿ ಕಾರು ಓಡಿಸಿ ರಸ್ತೆ ಅಪಘಾತದಲ್ಲಿ ಅಂತ್ಯ ಕಂಡ ಘಟನೆ ಜಗತ್ತಿನ ದುರಂತಗಳಲ್ಲಿ ಒಂದು. ಇದರ ರೂವಾರಿ ಕೂಡ ಈ ಮಹಾಮಾರಿ ಖಿನ್ನತೆ. ಇಂಥಾ ಖಿನ್ನತೆ ಯಾರನ್ನೂ ಬಿಟ್ಟಿಲ್ಲ.

ಒಮ್ಮೊಮ್ಮೆ ಮಾನಸಿಕ ತುಮುಲಗಳು, ಸಂಕಟಗಳು, ಬಲಹೀನತೆಗಳು ನಿಮ್ಮನ್ನು ಕಾಡಲು ಶುರು ಮಾಡಿದರೆ ಯಾಕೋ ಇವತ್ತು ಮೂಡಿಲ್ಲ, ಕೆಲ್ಸ ಮಾಡೋ ಮನಸ್ಸಿಲ್ಲ, ಛೇ ನನಗೇ ಹೀಗಾಗಬೇಕಾ? ಅಂತ ಅನ್ನಿಸಿ ಬಿಟ್ಟರೆ ಕೂಡಲೇ ಗೆಳೆಯರನ್ನು ಕೂಡಿಕೊಳ್ಳಿ, ಹೊಟ್ಟೆ ಹುಣ್ಣಾಗುವಂತೆ ನಕ್ಕು ಬಿಡಿ. ನಿಮಗಾಗುತ್ತಿರುವುದನ್ನು ಆಪ್ತರೊಡನೆ ಹಂಚಿಕೊಳ್ಳಿ, ಅಂತರ್ಮುಖಿತ್ವದಿಂದ ಹಸನ್ಮುಖಿತ್ವದ ಕಡೆಗೆ ಹೊರಳಿ, ನಿಮಗಿಷ್ಟವಾದ ಹಾಡು ಕೇಳುವ ಅಭ್ಯಾಸ ಬೆಳೆಸಿಕೊಳ್ಳಿ, Music therapyಗೆ ಖಿನ್ನತೆಯನ್ನು ಓಡಿಸುವ ಶಕ್ತಿ ಇದೆ. ನಿಮಗೆ ಹಾಡಲು ಬರದೇ ಇದ್ದರು ನಿಮಗಿಷ್ಟವಾದ ಹಾಡನ್ನು ಗುನುಗಿಕೊಳ್ಳಿ, ದಾರಿಯಲ್ಲಿ ಗಿಡದಲ್ಲೆಲ್ಲಾದರೂ ಹೂ ಅರಳುತ್ತಿದ್ದರೆ ಅದಕ್ಕೊಂದು ಮುತ್ತಿಡಿ, ಮಾತಾಡಿಸಿ, ಆಮೇಲೆ ಡಾಕ್ಟರು, ಸಿಸ್ಟರು ಎಲ್ಲ, ಏನಂತೀರಿ?

ಪಾಕಿಸ್ತಾನದಲ್ಲಿ ಭೀಕರ ಪ್ರವಾಹ, ಕೊಚ್ಚಿ ಹೋದ ಇಡೀ ಪಟ್ಟಣ

ಇಸ್ಲಾಮಾಬಾದ್: ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಮಳೆ ಆರ್ಭಟ ಮುಂದುವರೆದಿದ್ದು, ಮೇಘ ಸ್ಫೋಟದಿಂದಾಗಿ ಪಿಒಕೆಯಲ್ಲಿ ಸಂಭವಿಸಿದ ಭೀಕರ ಪ್ರವಾಹದಲ್ಲಿ ಕನಿಷ್ಠ 1000 ಮಂದಿ ಸಾವನ್ನಪ್ಪಿದ್ದಾರೆ ಎಂದು ತಿಳಿದುಬಂದಿದೆ.

ವಾಯುವ್ಯ ಪಾಕಿಸ್ತಾನದಲ್ಲಿ ಹವಾಮಾನ ಬದಲಾವಣೆಯಿಂದ ಉಂಟಾದ ಹಠಾತ್ ಪ್ರವಾಹದಿಂದಾಗಿ ಕನಿಷ್ಠ 1000 ಜನರು ಸಾವನ್ನಪ್ಪಿದ್ದಾರೆ. ಅಲ್ಲದೆ ಹಲವರು ನಾಪತ್ತೆಯಾಗಿದ್ದು, 150ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರಕಾರ, ವಾಯುವ್ಯ ಪಾಕಿಸ್ತಾನದ ಪಾಕಿಸ್ತಾನ ಆಕ್ರಮಿತ ಖೈಬರ್ ಪಖ್ತುಂಖ್ವಾ ಮತ್ತು ಪಿಒಕೆಯ



ಕಾಶ್ಮೀರ, ಗಿಲ್ಗಿಟ್–ಬಾಲ್ಟಿಸ್ತಾನದಲ್ಲಿ ಮೇಘಸ್ಫೋಟ ಸಂಭವಿಸಿ ಉಂಟಾದ ಭೀಕರ ಪ್ರವಾಹದಲ್ಲಿ ಇಡೀ ಪಟ್ಟಣವೊಂದು ಕೊಚ್ಚಿಕೊಂಡು ಹೋಗಿದೆ.

ಕಿಶ್ತ್ವಾರ್ ಜಿಲ್ಲೆಯಲ್ಲಿ, ತುರ್ತು ತಂಡಗಳು ಭಾನುವಾರ ದೂರದ ಚೋಸಿಟಿ ಗ್ರಾಮದಲ್ಲಿ ರಕ್ಷಣಾ ಪ್ರಯತ್ನಗಳನ್ನು ಮುಂದುವರೆಸಿವೆ. ಇಲ್ಲಿ ಕನಿಷ್ಠ 60 ಜನರು ಸಾವನ್ನಪ್ಪಿ ಸುಮಾರು 150 ಜನರು ಗಾಯಗೊಂಡಿದ್ದಾರೆ. ಅವರಲ್ಲಿ ಸುಮಾರು 50 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ. ಪರ್ವತಗಳಿಂದ ಧಾವಿಸಿದ ನೀರಿನ ಪ್ರವಾಹದಿಂದ ಮನೆಗಳು ನೆಲಸಮಗೊಂಡ ಪ್ರದೇಶಗಳ ಮೇಲೆ ಶೋಧ ಕಾರ್ಯಗಳು ಕೇಂದ್ರೀಕರಿಸಿವೆ. ನೀರಿನ ಜೊತೆಗೆ ಮನೆಗಳ ಮೇಲೆ ಅಪ್ಪಳಿಸಿದ ಬೃಹತ್ ಬಂಡೆಗಳು ಎಲ್ಲವನ್ನು ಹೊತ್ತೊಯ್ದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಕ್ಸಲರ ಐಇಡಿ ಸ್ಫೋಟಕ್ಕೆ ಓರ್ವ ಯೋಧ ಹುತಾತ್ಮ, ಮೂವರಿಗೆ ಗಾಯ

ಛತ್ತೀಸ್‌ಗಢ: ಛತ್ತೀಸ್‌ಗಢದ ಬಿಜಾಪುರ ಜಿಲ್ಲೆಯಲ್ಲಿ ನಕ್ಸಲರು ಅಟ್ಟಹಾಸ ಮೆರೆದಿದ್ದು, ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟಿಸಿದ ಪರಿಣಾಮ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ)ಯ ಯೋಧರೊಬ್ಬರು ಹುತಾತ್ಮರಾಗಿ, ಮೂವರು ಗಾಯಗೊಂಡಿರುವ ಘಟನೆ ಸೋಮವಾರ ನಡೆದಿದೆ. ಇಂದ್ರಾವತಿ ರಾಷ್ಟ್ರೀಯ ಉದ್ಯಾನವನದಲ್ಲಿ ಡಿಆರ್‌ಜಿ ತಂಡವು ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸುತ್ತಿತ್ತು. ಈ ವೇಳೆ ಸ್ಫೋಟ ಸಂಭವಿಸಿದೆ ಎಂದು ತಿಳಿದುಬಂದಿದೆ.



ಭಾನುವಾರದಿಂದ ಕಾರ್ಯಾಚರಣೆ ಆರಂಭವಾಗಿತ್ತು. ಇಂದು ಬೆಳಗ್ಗೆ ಕೂಡ ಕಾರ್ಯಾಚರಣೆ ನಡೆಸಲಾಗುತ್ತಿತ್ತು. ಈ ವೇಳೆ ಐಇಡಿ ಸ್ಫೋಟಗೊಂಡಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಹುತಾತ್ಮ ಯೋಧನನ್ನು ದಿನೇಶ್ ನಾಗ್ ಎಂದು ಗುರುತಿಸಲಾಗಿದೆ. ಗಾಯಗೊಂಡ ಮೂವರು ಸಿಬ್ಬಂದಿಗೆ ಸ್ಥಳದಲ್ಲಿ ತಕ್ಷಣದ ಪ್ರಥಮ ಚಿಕಿತ್ಸೆ ನೀಡಲಾಗಿದೆ.

ಸಂಪುಟದಿಂದ ರಾಜಣ್ಣ ವಜಾ ಖಂಡಿಸಿ ಕರ್ನಾಟಕ ರಾಜ್ಯ ಯುವಸೇನೆ ಭಾರಿ ಪ್ರತಿಭಟನೆ

● ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಆಕ್ರೋಶ ● ಸಹಕಾರಿ ಕ್ಷೇತ್ರದಲ್ಲಿ ಸಮಾನತೆ ತರಲು ಯತ್ನಿಸಿದ್ದು ಇವರಿಗೆ ಮುಳುವಾಯ್ತು!

ಮೈಸೂರು, ಆ.18(ಎಂಕೆ)– ವಾಲ್ಮೀಕಿ ನಾಯಕ ಸಮುದಾಯದ ಪ್ರಭಾವಿ ಮುಖಂಡರೂ ಆದ ಸಹಕಾರ ಸಚಿವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವುದನ್ನು ಖಂಡಿಸಿ ಕರ್ನಾಟಕ ರಾಜ್ಯ ಯುವಸೇನೆ ವತಿಯಿಂದ ಸೋಮವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿ ವೃತ್ತದಲ್ಲಿ ಜಮಾವಣೆಗೊಂಡ ನೂರಾರು ಮಂದಿ, ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ರಾಜಣ್ಣ ವಾಲ್ಮೀಕಿ ನಾಯಕ ಸಮುದಾಯದ ಪ್ರಭಾವಿ ಮುಖಂಡರು, ಅಹಿಂದ ಗಟ್ಟಿ ಧ್ವನಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರಮಾಪ್ತರು. ಅವರನ್ನು ಯಾವುದೇ ಕಾರಣ ವಿಲ್ಲದೆ, ಸಮಜಾಯಿಷಿ ನೋಟಿಸ್ ಕೂಡ ನೀಡದೆ ಏಕಾಏಕಿ ಸ್ವ-ಪಕ್ಷೀಯ ಪಟ್ಟಭದ್ರ ಹಿತಾಸಕ್ತಿಗಳ ಷಡ್ಯಂತ್ರದಿಂದ ಸಚಿವ ಸ್ಥಾನದಿಂದ ವಜಾಗೊಳಿಸಿರುವ ಕಾಂಗ್ರೆಸ್ ಹೈಕಮಾಂಡ್, ಸಮಸ್ತ ವಾಲ್ಮೀಕಿ ನಾಯಕ ಸಮಾಜಕ್ಕೆ ಅಪಮಾನ ಮಾಡಿದೆ ಎಂದು ಖಂಡಿಸಿದರು.

ಎಸ್‌ಸಿ-ಎಸ್‌ಟಿ ಹಾಗೂ ಶೋಷಿತ ಸಮುದಾಯಗಳ ಗಟ್ಟಿಧ್ವನಿಯಾಗಿರುವ ಕೆ.ಎನ್. ರಾಜಣ್ಣ ಅವರು, ಸಹಕಾರ ಕ್ಷೇತ್ರದಲ್ಲಿ ಸರ್ವರಿಗೂ ಆರ್ಥಿಕ ಸಮಾನತೆಗಳು ದೊರೆಯಬೇಕು. ರಾಜಕೀಯ ಅಧಿಕಾರ ಹಂಚಿಕೆಯ ದೃಷ್ಟಿಯಿಂದ ಮೀಸಲಾತಿ ಜಾರಿಗೊಳಿಸಲು ಎಲ್ಲ ಸಿದ್ಧತೆಗಳನ್ನು ನಡೆಸಿದ್ದರು. ಆದರೆ, ಅವರನ್ನು ಸಹಕಾರಿ ಮೀಸಲಾತಿ ವಿರೋಧಿಗಳು ಷಡ್ಯಂತ್ರ ಮಾಡಿ ಹೈಕಮಾಂಡ್ ಮೂಲಕ ಅಧಿಕಾರದಿಂದ ವಜಾ ಮಾಡಿಸಿದ್ದಾರೆ ಎಂದು ದೂರಿದರು.



ಮೈಸೂರಿನ ಗಾಂಧಿ ವೃತ್ತದಲ್ಲಿ ಕರ್ನಾಟಕ ರಾಜ್ಯ ಯುವಸೇನೆ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ರಾಜಕೀಯವಾಗಿ ನಾಯಕ ಜನಾಂಗವನ್ನು ಹತ್ತಿಕ್ಕುವ ಹುನ್ನಾರ ನಡೆಸಲಾಗಿದೆ. ಈ ಹಿಂದೆ ವಾಲ್ಮೀಕಿ ನಿಗಮದ ಹಗರಣದಲ್ಲಿ ಮಾಜಿ ಸಚಿವ ಬಿ.ನಾಗೇಂದ್ರ ಅವರನ್ನು ಹೊಣೆ ಮಾಡಿ, ಉದ್ದೇಶಪೂರ್ವಕವಾಗಿಯೇ ಜೈಲಿಗೆ ಕಳಿಸಿದ್ದರು. ನಾಯಕ ಸಮುದಾಯದ ರಾಜಕಾರಣಿಗಳನ್ನು ಸ್ವಪಕ್ಷದಲ್ಲೇ ತುಳಿಯಲಾಗುತ್ತಿದೆ. ಇದೆಲ್ಲವನ್ನೂ ಕಾಂಗ್ರೆಸ್ ಹೈಕಮಾಂಡ್ ಗಮನಿಸಿ, ನಾಯಕ ಸಮುದಾಯದ ಮೇಲಾಗುತ್ತಿರುವ ದಬ್ಬಾಳಿಕೆಯನ್ನು ಸರಿಪಡಿಸದಿದ್ದಲ್ಲಿ ಹಾಗೂ ವಜಾಗೊಂಡಿರುವ ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟಕ್ಕೆ ಮರು ಸೇರ್ಪಡೆ ಮಾಡದಿದ್ದರೆ ಮುಂದಿನ ಚುನಾವಣೆ ವೇಳೆಗೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕರ್ನಾಟಕ ರಾಜ್ಯ ನಾಯಕರ ಯುವಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಮಾತನಾಡಿ, ಮುಖ್ಯಮಂತ್ರಿಗಳ ಪರಮಾಪ್ತರಾಗಿದ್ದ ರಾಜಣ್ಣ ಅವರನ್ನು ವಜಾಗೊಳಿಸುವ ಮೂಲಕ ಒಂದೇ ಏಟಿನಲ್ಲಿ ಎರಡು ಹಕ್ಕಿ ಹೊಡೆದುರುಳಿಸಲಾಗಿದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನದ ಮೇಲೆ ಆಸಕ್ತಿ ಹೊಂದಿದ್ದ ರಾಜಣ್ಣ, ಮುಂದಿನ ಬಾರೀ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ಸಾಮರ್ಥ್ಯ ಹೊಂದಿದ್ದರು. ಜಾತ್ಯಾತೀತ ನಾಯಕ ರಾಜಣ್ಣರನ್ನು ಸ್ವ-ಪಕ್ಷದವರೇ ತುಳಿಯುತ್ತಿದ್ದಾರೆ. ಮತ್ತೆ ಅವರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳದಿದ್ದರೆ ರಾಜ್ಯಾದ್ಯಂತ ಪ್ರತಿ ಭಟಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ಯುವಸೇನೆ ಉಪಾಧ್ಯಕ್ಷ ಶಿವಕುಮಾರ್ ಸ್ವಾಮಿ, ಜಿಲ್ಲಾಧ್ಯಕ್ಷ ಉದ್ಬೂರು ಎಂ.ಸೋಮಣ್ಣ ಮತ್ತಿತರರು ಭಾಗವಹಿಸಿದ್ದರು.

ಕೆಂಗೇರಿ ಮೆಟ್ರೋ ನಿಲ್ದಾಣಕ್ಕೆ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ಹೆಸರು ನಾಮಕರಣಕ್ಕೆ ಆಗ್ರಹ

ಮೈಸೂರು,ಆ.18(ಎಂಕೆ)– ಬೆಂಗಳೂರಿನ ಕೆಂಗೇರಿ ಮೆಟ್ರೋ ನಿಲ್ದಾಣಕ್ಕೆ ಶಿಕ್ಷಣ ಮತ್ತು ಆಧ್ಯಾತ್ಮ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ಅವರ ಹೆಸರನ್ನು ನಾಮಕರಣ ಮಾಡುವಂತೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಒತ್ತಾಯಿಸಿದ್ದಾರೆ.



ವಿಧಾನಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿ, ಮಠದ ವತಿಯಿಂದ ವೈದ್ಯಕೀಯ ಶಿಕ್ಷಣ ಸಂಸ್ಥೆ ಪ್ರಾರಂಭಕ್ಕೆ ಸರ್ಕಾರ ಮಂಜೂರು ಮಾಡಿಕೊಡಬೇಕೆಂದು ವೈದ್ಯಕೀಯ ಶಿಕ್ಷಣ ಹಾಗೂ ಆರೋಗ್ಯ ಸಚಿವರಿಗೆ ಮನವಿ ಸಲ್ಲಿಸಿದ ಅವರು, 1983ರಲ್ಲಿ ಕೆಂಗೇರಿಯ ಬಳಿ ತಮ್ಮ ಪೂರ್ವಾಶ್ರಮದವರ ಸಹಾಯದಿಂದ 10 ಎಕರೆ ಜಮೀನು ಕೊಂಡುಕೊಂಡು ಅದರಲ್ಲಿ ಪುಟ್ಟಗುಡಿಸಲು ನಿರ್ಮಿಸಿ, 'ಶ್ರೀ ಗುರು ಜ್ಞಾನ ಕೇಂದ್ರ'ದ ಮೂಲಕ ಶಾಲೆ ತೆರೆದು, ನಂತರ ಪ್ರತ್ಯೇಕವಾಗಿ ಶಾಲೆ, ಕಾಲೇಜು ನಿರ್ಮಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದಾರೆ. ಶಿಕ್ಷಣ ಮತ್ತು ಆಧ್ಯಾತ್ಮ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿರುವ ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ಆ.16 ರಂದು ಶ್ರೀ ಕೃಷ್ಣನಲ್ಲಿ ಲೀನರಾಗಿದ್ದು, ಅವರ ಸ್ಮರಣಾರ್ಥ ಅವರ ಹೆಸರನ್ನು ಕೆಂಗೇರಿ ಮೆಟ್ರೋ ನಿಲ್ದಾಣಕ್ಕೆ ನಾಮಕರಣ ಮಾಡುವುದರ ಜೊತೆಗೆ ಮಠದ ವತಿಯಿಂದ ವೈದ್ಯಕೀಯ ಶಿಕ್ಷಣ ಸಂಸ್ಥೆ ಪ್ರಾರಂಭಿಸಲು ಮಂಜೂರಾತಿ ನೀಡುವಂತೆ ದಿನೇಶ್ ಗೂಳಿಗೌಡ ಮನವಿ ಮಾಡಿದರು.

ಸುತ್ತೂರು ಶ್ರೀ ಮಠದಲ್ಲಿ ಸಾಮೂಹಿಕ ವಿವಾಹ...



ಸುತ್ತೂರು ಶ್ರೀಮಠದಲ್ಲಿ ಜರುಗಿದ 126ನೇ ಮಾಸಿಕ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಏಳು ಜೋಡಿಗಳು ಸತಿಪತಿಗಳಾದರು. ಚಿತ್ರದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಶಿರಮಳ್ಳಿ ಮಠದ ಶ್ರೀಗಳು, ವಧು-ವರರ ಬಂಧುಗಳು ಹಾಗೂ ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಮುಖ್ಯಸ್ಥರನ್ನು ಕಾಣಬಹುದು.

ಬಿಹಾರದಲ್ಲಿ 65 ಲಕ್ಷ ನಕಲಿ ಮತದಾರರು ಪತ್ತೆ; ಪಟ್ಟಿ ಬಿಡುಗಡೆ ಮಾಡಿದ ಚುನಾವಣಾ ಆಯೋಗ

ಪಾಟ್ನಾ,ಆ.18–ಬಿಹಾರ ವಿಧಾನಸಭೆ ಚುನಾವಣೆಗೆ ದಿನಗಣನೆ ಆರಂಭವಾಗಿರುವಂತೆಯೇ ಕೇಂದ್ರ ಚುನಾವಣಾ ಆಯೋಗ ಬರೋಬ್ಬರಿ 65 ಲಕ್ಷ ನಕಲಿ ಮತದಾರರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕಿದ್ದು, ಈ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಕೇಂದ್ರ ಚುನಾವಣಾ ಆಯೋಗವು ಬಿಹಾರದಲ್ಲಿ ಆರಂಭಿಸಿದ್ದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಸಮಯದಲ್ಲಿ ಬಿಹಾರ ಮತದಾರರ ಪಟ್ಟಿಯಿಂದ ಅಳಿಸಿ ಹಾಕಲಾದ 65 ಲಕ್ಷ ಜನರ ಹೆಸರುಗಳನ್ನು ಬಹಿರಂಗಪಡಿಸಿದೆ. ಕರಡು ಮತದಾರರ ಪಟ್ಟಿಯಿಂದ ತೆಗೆದುಹಾಕಲಾದ 65 ಲಕ್ಷ ಜನರ ಹೆಸರುಗಳನ್ನು ಚುನಾವಣಾ ಆಯೋಗ ಸೋಮವಾರ ಬಿಡುಗಡೆ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆ.19ರೊಳಗೆ ಅಳಿಸಲಾದ ಹೆಸರುಗಳ ವಿವರಗಳನ್ನು ಸಾರ್ವಜನಿಕಗೊಳಿಸಬೇಕು ಮತ್ತು ಆ.22 ರೊಳಗೆ ಅನುಸರಣಾ ವರದಿಯನ್ನು ಸಲ್ಲಿಸಬೇಕು ಎಂಬ ಸುಪ್ರೀಂಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ಈ ಕ್ರಮ ಕೈಗೊಂಡಿದೆ.

ಚುನಾವಣಾ ಆಯೋಗವು ಮತಗಟ್ಟೆಗಳಾದ್ಯಂತ (ಗೈರುಹಾಜರಿ, ಸ್ಥಳಾಂತರಗೊಂಡ ಮತ್ತು ಸತ್ತ) ಮತದಾರರ ಹೆಸರುಗಳನ್ನು ಪ್ರಕಟಿಸುತ್ತಿದೆ ಮತ್ತು ಸುಪ್ರೀಂಕೋರ್ಟ್ ನಿರ್ದೇಶನದಂತೆ ಆನ್‌ಲೈನ್‌ನಲ್ಲಿ ಮಾಡುವ ಸಾಧ್ಯತೆಯಿದೆ ಎಂದು ಅಧಿಕಾರಿ ಹೇಳಿದರು.

ವಿಶ್ವ ಹಿಂದೂ ಪರಿಷತ್‌ನಿಂದ ಕೃಷ್ಣ ವೇಷ ಸ್ಪರ್ಧೆ



ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ವಿಶ್ವ ಹಿಂದೂ ಪರಿಷತ್ ಮೈಸೂರು ವತಿಯಿಂದ ಅಂತರಶಾಲಾ ಕೃಷ್ಣ ವೇಷ ಸ್ಪರ್ಧೆ ಆಯೋಜಿಸಲಾಗಿತ್ತು.

ಮೈಸೂರು, ಆ.18–ಮೈಸೂರಿನ ಕುವೆಂಪುನಗರದ ಪ್ರಸನ್ನ ಗಣಪತಿ ದೇವಸ್ಥಾನದಲ್ಲಿ ವಿಶ್ವ ಹಿಂದೂ ಪರಿಷತ್ ಮೈಸೂರು ವತಿಯಿಂದ ಅಂತರಶಾಲಾ ಕೃಷ್ಣ ವೇಷ ಸ್ಪರ್ಧೆ ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ 60 ಕ್ಕೂ ಹೆಚ್ಚು ಮಕ್ಕಳು ವಿವಿಧ ಶಾಲೆಗಳಿಂದ ಭಾಗವಹಿಸಿದ್ದರು. ಪ್ರಥಮ ಬಹುಮಾನವನ್ನು ಪೂರ್ಣ ಚೇತನ ಪಬ್ಲಿಕ್ ಶಾಲೆಯ ಡಾ. ಪೃಥು ಪಿ. ಅದ್ವೈತ್, ದ್ವಿತೀಯ ಬಹುಮಾನವನ್ನು ವಿಜಯ ವಿಠಲ ಶಾಲೆಯ ರುತೌನ್ವಿ, ತೃತೀಯ ಬಹುಮಾನವನ್ನು ಕರ್ನಾಟಕ ಪಬ್ಲಿಕ್ ಶಾಲೆಯ ಮೋಹಿತಾ ಪಡೆದರು.

ವಿಶ್ವ ಹಿಂದೂ ಪರಿಷತ್ ಮೈಸೂರು ಜಿಲ್ಲೆ ಅಧ್ಯಕ್ಷ ಮಹೇಶ್ ಕಾಮತ್ ಮಾತನಾಡಿ, ಕೃಷ್ಣನ ಜೀವನ ಸಂದೇಶವನ್ನು ನಾವು ಜೀವನದಲ್ಲಿ ಅಳವಡಿಸಿಕೊಂಡು ಬದುಕಬೇಕು. ಮಕ್ಕಳು ಪ್ರತಿದಿನ ಕನಿಷ್ಠ ಭಗವದ್ಗೀತೆಯ ಒಂದು ಶ್ಲೋಕವನ್ನಾದರು ಕಲಿಯಬೇಕು ಎಂದರು.

ಸ್ಪರ್ಧೆಯ ತೀರ್ಪುಗಾರರಾಗಿ ಡಾ.ಭಾವನ, ಡಾ.ವಿಜಯ ರಮೇಶ್, ಡಾ.ವಿಜಯ, ಸುರೇಂದ್ರ ಭಾಗವಹಿಸಿದ್ದರು. ವಿಶ್ವ ಹಿಂದೂ ಪರಿಷತ್‌ನ ವಿವಿಧ ಪದಾಧಿಕಾರಿಗಳಾದ ಮಧುಶಂಕರ್, ಪುನೀತ್ ಜಿ, ಜಯಶ್ರೀ ಶಿವರಾಂ, ಅರುಣಾಚಲಂ, ಲೋಕೇಶ್, ವಿಜೇಂದ್ರ, ಅನಂತ ಪದ್ಮನಾಭ, ಕುಮುದಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬೆಂಗಳೂರು ನಗರ ಸಂಚಾರ ದಟ್ಟಣೆ ತಪ್ಪಿಸಲು ಟನಲ್ ರಸ್ತೆಯೇ ಪರಿಹಾರ

ಬೆಂಗಳೂರು ಅಭಿವೃದ್ಧಿ ಸಚಿವರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ವಿವರಣೆ

ಬೆಂಗಳೂರು,ಆ.18(ಕೆಎಂಶಿ)–ನಗರದ ಸಂಚಾರ ದಟ್ಟಣೆ ತಪ್ಪಿಸಲು ನಮ್ಮ ಸರ್ಕಾರ ಮುಂದಡಿಯಿಟ್ಟಿದೆ. ಎಸ್ಟೀಮ್ ಮಾಲ್‌ನಿಂದ ಬ್ಯಾಪ್ಟಿಸ್ಟ್ ಆಸ್ಪತ್ರೆವರೆಗೆ 1.5 ಕಿಲೋ ಮೀಟರ್ ಉದ್ದದ ನೂತನ ಟನಲ್ ರಸ್ತೆ ನಿರ್ಮಿಸಲಾಗುವುದು. ಇದರ ಸಾಧಕ-ಬಾಧಕ ಹಾಗೂ ಹಣಕಾಸಿನ ನೆರವಿನ ಬಗ್ಗೆ ಮುಖ್ಯಮಂತ್ರಿಗಳ ಬಳಿ ಚರ್ಚೆ ನಡೆಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆ.ಆರ್.ಪುರಂ ಕಡೆಯಿಂದ ಮೇಖ್ರಿ ಸರ್ಕಲ್ ಭಾಗದ ಲೂಪ್ ಅನ್ನು 80 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ, ಇನ್ನೊಂದು ಭಾಗದ ಲೂಪ್ ಅನ್ನು ನವೆಂಬರ್ ಹೊತ್ತಿಗೆ ಪೂರ್ಣಗೊಳಿಸಲಾಗುವುದು, ಒಟ್ಟು 300 ಕೋಟಿ ರೂ. ವೆಚ್ಚದಲ್ಲಿ ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಎರಡು ಪಥಗಳು ಇರುವೆಡೆ ಆರು ಪಥಗಳು ಬರುವಂತೆ ಯೋಜನೆ ರೂಪಿಸಲಾಗಿದೆ ಎಂದರು.



17,000 ಕೋಟಿ ರೂ. ವೆಚ್ಚದಲ್ಲಿ 16.5 ಕಿಲೋಮೀಟರ್ ಉದ್ದದ ಟನಲ್ ರಸ್ತೆಗೆ ಟೆಂಡರ್ ಕರೆಯಲಾಗಿದೆ, ಹೆಬ್ಬಾಳ ಜಂಕ್ಷನ್‌ನ ಮತ್ತೊಂದು ಲೂಪ್ ನಿರ್ಮಾಣ ತ್ವರಿತಗೊಳಿಸಲು ಬಿಡಿಎ ಅಧ್ಯಕ್ಷ ಹ್ಯಾರಿಸ್ ಅವರು ಜವಾಬ್ದಾರಿ ಹೊತ್ತುಕೊಂಡಿದ್ದಾರೆ. ವಿಮಾನ ನಿಲ್ದಾಣದಿಂದ ಬರುವವರೂ ಸೇರಿದಂತೆ ಎಲ್ಲರೂ ಸಂಚಾರ ದಟ್ಟಣೆ ಅನುಭವಿಸುತ್ತಿದ್ದರು. ಇದನ್ನು ತಪ್ಪಿಸಲು ಸರ್ಕಾರ ಬದ್ಧವಾಗಿದೆ. ಹೆಬ್ಬಾಳ ಜಂಕ್ಷನ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಏನೇನು ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಕುರಿತು ಮುಖ್ಯಮಂತ್ರಿಗಳಿಗೆ ವಿವರಣೆ ನೀಡಿದ್ದೇನೆ ಎಂದರು.

ತುಂಬಾ ಪಾರದರ್ಶಕವಾಗಿದ್ದೇನೆ. ನನಗೆ ಕೆಲಸ ಮುಖ್ಯವೇ ಹೊರತು ಹಣವಲ್ಲ. ಯುವ ಸಂಸದರೊಬ್ಬರು ಹಣಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಎಂದಿದ್ದಾರೆ. ನಮಗೆ ಹಣದ ಅಗತ್ಯವಿಲ್ಲ. ಬಿಜೆಪಿ ಅಧಿಕಾರಾವಧಿಯಲ್ಲಿ ಒಂದೇ ಒಂದು ಸಣ್ಣ ಕೆಲಸವನ್ನೂ ಮಾಡಿಲ್ಲ. ಕೇಂದ್ರ ಸರ್ಕಾರದಿಂದ ಒಂದೇ ಒಂದು ರೂಪಾಯಿ ತರದಿರುವುದು ನಾಚಿಕೆಗೇಡಿನ ಸಂಗತಿ. ಬೆಂಗಳೂರು ಜಾಗತಿಕ ನಗರ, ಪ್ರಧಾನಿ ನರೇಂದ್ರ ಮೋದಿ ಸಹ ಒಪ್ಪಿಕೊಂಡಿದ್ದಾರೆ. ನೂತನ ಮೇಲ್ಸೇತುವೆಯಿಂದ ಮೇಖ್ರಿ ಸರ್ಕಲ್ ಬಳಿ ಸಂಚಾರ ದಟ್ಟಣೆ ಹೆಚ್ಚಲಿದೆ ಎನ್ನುವ ಟೀಕೆಗೆ ಉತ್ತರ ನೀಡಲು ಆಗುವುದಿಲ್ಲ ಎಂದು ಹೇಳಿದರು.

ಸನ್ಮಾನ...



ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ವತಿಯಿಂದ ಬ್ಯಾಂಕಿನ ಕಚೇರಿಯಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕ ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಅಧ್ಯಕ್ಷ ಜೆ.ಯೋಗೇಶ್, ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಜಿ.ನಿರಂಜನ್, ಸಿ.ಚಂದ್ರಶೇಖರ್, ಆರ್.ಸೋಮಣ್ಣ, ಹರೀಶ್‌ಕುಮಾರ್, ರಾಜೇಶ್ವರಿ, ಎಂ.ಪ್ರಮೀಳ, ಕೆ.ಗಿರೀಶ್, ಮುಖ್ಯ ಕಾರ್ಯ ನಿರ್ವಾಹಕ ಕೆ.ಹರ್ಷಿತ್‌ಗೌಡ ಇನ್ನಿತರರಿದ್ದರು.

ಉಪರಾಷ್ಟ್ರಪತಿ ಚುನಾವಣೆ

ಡಿಎಂಕೆ ರಾಜ್ಯಸಭಾ ಸಂಸದ ತಿರುಚಿ ಶಿವ ವಿಪಕ್ಷಗಳ ಅಭ್ಯರ್ಥಿಯಾಗುವ ಸಾಧ್ಯತೆ



ನವದೆಹಲಿ: ತೀವ್ರ ಕುತೂಹಲ ಕೆರಳಿಸಿರುವ ಉಪ ರಾಷ್ಟ್ರಪತಿ ಚುನಾವಣೆಗೆ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ತನ್ನ ಅಧಿಕೃತ ಅಭ್ಯರ್ಥಿ ಘೋಷಣೆ ಮಾಡಿದ ಬೆನ್ನಲ್ಲೇ ವಿಪಕ್ಷಗಳು ಅಭ್ಯರ್ಥಿಯ ಆಯ್ಕೆಗೆ ತಯಾರಿ ನಡೆಸುತ್ತಿವೆ. ಎನ್‌ಡಿಎ ಅಭ್ಯರ್ಥಿ ತಮಿಳುನಾಡು ಮೂಲದವರಾಗಿದ್ದು, ಇಂಡಿ ಮೈತ್ರಿಕೂಟವೂ ತಮಿಳುನಾಡಿನ ಸಂಸದ ನೋರ್ವನನ್ನು ಕಣಕ್ಕೆ ಇಳಿಸುವ ತಯಾರಿ ನಡೆಸಿದೆ. ಪ್ರಾದೇಶಿಕ ರಾಜಕೀಯದಿಂದ ಎದುರಾಗುವ ಪ್ರಮುಖ ಅಡಚಣೆಯನ್ನು ನಿವಾರಿಸುವ ಕಾರ್ಯತಂತ್ರದ ನಡೆಯಾಗಿ ವಿರೋಧ ಪಕ್ಷದ ಮೈತ್ರಿಕೂಟ ಡಿಎಂಕೆ ರಾಜ್ಯಸಭಾ ಸಂಸದ ತಿರುಚಿ ಶಿವ ಅವರನ್ನು ಉಪರಾಷ್ಟ್ರಪತಿ ಅಭ್ಯರ್ಥಿಯಾಗಿ ಆಯ್ಕೆ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ತಮಿಳುನಾಡಿನಲ್ಲಿ ಬಿಜೆಪಿಯ ಹಿರಿಯ ನಾಯಕರಲ್ಲಿ ಒಬ್ಬರಾದ ಮಹಾರಾಷ್ಟ್ರ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಸೆ. 9ರ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿ ಎಂದು ಕೇಂದ್ರ ಆಡಳಿತ ಪಕ್ಷ ನಿನ್ನೆ ಸಂಜೆ ಘೋಷಿಸಿತ್ತು.

ಕೊಳಗೇರಿ ಅಭಿವೃದ್ಧಿ ಮಂಡಳಿಯ 1,80,253 ಮನೆ ಕಾಮಗಾರಿ 2026ರ ಡಿಸೆಂಬರ್ ವೇಳೆಗೆ ಪೂರ್ಣ

ವಸತಿ ಸಚಿವ ಜಮೀರ್ ಅಹಮದ್ ಖಾನ್ ಮಾಹಿತಿ

ಬೆಂಗಳೂರು, ಆ.18(ಕೆಎಂಶಿ)–ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಪಿಎಂಎವೈ ಯೋಜನೆಯಡಿ ರಾಜ್ಯದಲ್ಲಿ ನಿರ್ಮಾಣ ಹಂತದಲ್ಲಿರುವ 1,80,253 ಮನೆಗಳ ಕಾಮಗಾರಿ 2026 ಡಿಸೆಂಬರ್ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

ಸಿದ್ದು ಪಾಟೀಲ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಬಡ ಫಲಾನುಭವಿಗಳ ವಂತಿಗೆ ಬಾಕಿಯನ್ನು ಸರ್ಕಾರವೇ ಪಾವತಿಸುವ ತೀರ್ಮಾನವನ್ನು ಮುಖ್ಯಮಂತ್ರಿ ಕೈಗೊಂಡು 500 ಕೋಟಿ ರೂ. ಬಿಡುಗಡೆ ನಂತರ ಮೊದಲ ಹಂತದಲ್ಲಿ 36,789 ಹಾಗೂ ಎರಡನೇ ಹಂತದಲ್ಲಿ 40,345 ವಸತಿಗಳ ಹಂಚಿಕೆಗೆ ಸಿದ್ಧತೆ ನಡೆದಿದೆ ಎಂದರು. ಅರವಿಂದ್ ಬೆಲ್ಲದ್ ಉಪಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜೀವ್ ಗಾಂಧಿ ವಸತಿ ನಿಗಮದಿಂದ ಬಡ ಕುಟುಂಬಗಳಿಗೆ 47,870 ಮನೆ ನಿರ್ಮಾಣ ಯೋಜನೆ ವಂತಿಗೆಯನ್ನೂ ಸರ್ಕಾರವೇ ಭರಿಸಲು ತಾತ್ವಿಕ ಒಪ್ಪಿಗೆ ದೊರೆತಿದ್ದು ಸಂಪುಟದ ಗಮನಕ್ಕೆ ತಂದು ಅನುಮತಿ ಪಡೆದು ಆದಷ್ಟು ಶೀಘ್ರ ಮನೆಗಳ ನಿರ್ಮಾಣ ಪೂರ್ಣಗೊಳಿಸಿ ಹಂಚಿಕೆ ಮಾಡಲಾಗುವುದು ಎಂದರು.



ಮೈವಿವಿಗೆ ಅತಿಥಿ ಉಪನ್ಯಾಸಕರ ಆಹ್ವಾನ

ಮೈಸೂರು,ಆ.18–ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಷಯಗಳ (ಖಾಯಂ ಅಧ್ಯಾಪಕರ ಬೋಧನಾ ಕಾರ್ಯಭಾರ ಹೊರತುಪಡಿಸಿ) ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸಲು ಅತಿಥಿ ಉಪನ್ಯಾಸಕರನ್ನು ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಆ.21, 22 ಮತ್ತು 25ರಂದು ನಡೆಯಲಿರುವ ಸಂದರ್ಶನದಲ್ಲಿ ಹಾಜರಾಗಬಹುದು. ಈ ಸಂಬಂಧ ಸಂಪೂರ್ಣ ವಿವರ ಹಾಗೂ ನಿಗದಿತ ಅರ್ಜಿ ನಮೂನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ www.uni-mysore.ac.in ನಲ್ಲಿ ಪಡೆಯಬಹುದು. ನಿಗದಿಪಡಿಸಲಾದ ದಿನಾಂಕಗಳಲ್ಲಿ ವ್ಯತ್ಯಾಸವಾದಲ್ಲಿ ಆ ಬಗ್ಗೆ ಮಾಹಿತಿಯನ್ನು ವಿವಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ

ವಿ.ಎ. ಲೇಔಟ್ ನಾಗೇಶ್ ಮೂರ್ತಿ



ನಂಜನಗೂಡು, ಆ.18– ನಗರದ ವಿ.ಎ. ಲೇಔಟ್ ನಿವಾಸಿ ನಾಗೇಶ್.ಮೂರ್ತಿ(99) ವಯೋ ಸಹಜ ಕಾಯಿಲೆಯಿಂದ ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಿಗ್ಗೆ 11ಕ್ಕೆ ಕಪಿಲಾ ತೀರದ ಹದಿನಾರು ಕಾಲು ಮಂಟಪದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಕೆ.ರಾಮಲಿಂಗು ನಿಧನ

ಮೈಸೂರು: ಮೈಸೂರಿನ ಪಡುವಾರಹಳ್ಳಿ ನಿವಾಸಿ, ಕಾವೇರಿ ನೀರಾವರಿ ನಿಗಮದ ನಿವೃತ್ತ ನೌಕರ ಬಿ.ಕೆ.ರಾಮಲಿಂಗು(65) ಅವರು ಸೋಮವಾರ ನಿಧನರಾದರು. ಇವರು ಮಾಜಿ ಕಾರ್ಪೊರೇಟರ್ ಶ್ರೀರಾಂ ಅವರ ಸಹೋದರಿ ಪುತ್ರ.

ಇವರು ಪತ್ನಿ, ಮೂವರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 12ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಸಂಸ್ಕಾರ ನೆರವೇರಿಸುವುದಾಗಿ ಕುಟುಂಬದ ಮೂಲಗಳು ತಿಳಿಸಿವೆ.



ಸಹಕಾರ ಸಂಘಗಳ ಆಡಳಿತ ಮಂಡಳಿ ಪದಾಧಿಕಾರಿಗಳ ಆಸ್ತಿ ಘೋಷಣೆ ಕಾಯ್ದೆ ಜಾರಿಗೆ ಸರ್ಕಾರ ನಿರ್ಧಾರ

ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾಹಿತಿ

ಮೈಸೂರು, ಆ.18(ಬಿಎಲ್‌ಯು)–ಸಹಕಾರ ಸಂಘಗಳ ಆಡಳಿತ ಮಂಡಳಿ ಪದಾಧಿಕಾರಿಗಳು ತಮ್ಮ ಆಸ್ತಿ ಘೋಷಣೆ ಮಾಡಿಕೊಳ್ಳುವಂತೆ ಕಾನೂನು ಜಾರಿಗೊಳಿಸುವ ಕಾಯ್ದೆಗೆ ರಾಜ್ಯ ಸರ್ಕಾರ ತಿದ್ದುಪಡಿ ತರುತ್ತಿದೆ ಎಂದು ಮಾಜಿ ಮುಡಾ ಅಧ್ಯಕ್ಷರೂ ಆದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಮಾಜಿ ಉಪಾಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು.

ನಗರದ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಸೋಮವಾರ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದಿಂದ ಆಯೋಜಿಸಿದ್ದ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಕಾಯ್ದೆ ಸೇರಿದಂತೆ ಸಹಕಾರ ಸಂಘದಲ್ಲಿರುವ ಹಲವು ಕಾಯ್ದೆಗಳ ಬಗ್ಗೆ ಸಹಕಾರಿಗಳು ಅರಿವು ಹೊಂದಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಕಿಂಗ್ಸ್ ಕೋರ್ಟ್ ಹೋಟೆಲ್‌ನಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಆಯೋಜಿಸಿದ್ದ ಸಂಪರ್ಕ ಸಭೆ ಮತ್ತು ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಸಂಸ್ಥೆಯ ಅಧ್ಯಕ್ಷ ಜಿ.ನಂಜನಗೌಡ ಉದ್ಘಾಟಿಸಿದರು.

ಸಹಕಾರ ಸಂಘಗಳ ಕಾಯ್ದೆ ಬಗ್ಗೆ ಎಷ್ಟೇ ತಿಳುವಳಿಕೆ ಹೊಂದಿದ್ದರು ಅದು ಕಡಿಮೆಯೆ. ಸಹಕಾರ ಸಂಘಗಳ ಕಾಯ್ದೆ ಹಾಗೂ ಕಾರ್ಯವ್ಯಾಪ್ತಿಯನ್ನು ಅರಿತರೆ ಸಹಕಾರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದು ರಾಜೀವ್ ಅಭಿಪ್ರಾಯಪಟ್ಟರು.

ಸಹಕಾರ ಸಂಘಗಳನ್ನು ಉತ್ತೇಜಿಸಬೇಕು. ಸಹಕಾರ ಸಂಘಗಳ ಸಂಖ್ಯೆ ಹೆಚ್ಚಾಗಬೇಕು. ಹೊಸ ಹೆಜ್ಜೆಗಳನ್ನು ಇಟ್ಟು ಸಹಕಾರ ಕ್ಷೇತ್ರದ ಆರ್ಥಿಕತೆಯನ್ನು ಮತ್ತಷ್ಟು ಶಕ್ತಿಗೊಳಿಸಬೇಕು ಎಂದು ಸಲಹೆ ನೀಡಿದರು.

ಸಹಕಾರ ಸಂಘಗಳು ಮೈಕೊಡವಿ ಎದ್ದು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಈ ಮೂಲಕ ತಮ್ಮ ಅಸ್ತಿತ್ವ ಕಾಪಾಡಿಕೊಳ್ಳಬೇಕು ಎಂದು ಹೇಳಿದರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ನಿಯಮಿತಕ್ಕೆ ಶಾಶ್ವತ ಕಟ್ಟಡದ ಅವಶ್ಯಕತೆ ಇದ್ದು, ಇದರ ಬಗ್ಗೆ ಗಮನ ಹರಿಸಬೇಕು ಎಂದು ರಾಜೀವ್ ಸಲಹೆ ನೀಡಿದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರ ನಿಯಮಿತದ ಅಧ್ಯಕ್ಷ ಜಿ.ನಂಜನಗೌಡ, ಉಪಾಧ್ಯಕ್ಷ ಎ.ಆರ್. ಪ್ರಸನ್ನಕುಮಾರ್, ವ್ಯವಸ್ಥಾಪಕ ನಿರ್ದೇಶಕ ಶರಣಗೌಡ ಜಿ.ಪಾಟೀಲ್, ಪ್ರಾಂತೀಯ ಅಧಿಕಾರಿ ಗುರುಪ್ರಸಾದ್ ಬಂಗೇರ, ನಿರ್ದೇಶಕರಾದ ಬಿ.ಹೆಚ್.ಕೃಷ್ಣಾರೆಡ್ಡಿ, ಭಾರತಿ ಜಿ.ಭಟ್, ಮೈಸೂರು, ಕೊಡಗು ಮತ್ತು ಮಂಡ್ಯ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಎಸ್.ಆರ್.ನಾರಾಯಣ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಾಗಮಂಗಲ ಕೋಮು ಗಲಭೆ ಪುನರಾವರ್ತಿಸದಂತೆ ಎಚ್ಚರ ವಹಿಸಿ

ಗೌರಿ ಗಣೇಶ, ಈದ್ ಮಿಲಾದ್ ಹಬ್ಬ ಹಿನ್ನೆಲೆಯಲ್ಲಿ ಸಮನ್ವಯತೆ ಸಭೆಯಲ್ಲಿ ಡಿಸಿ ಮನವಿ

ಮಂಡ್ಯ, ಆ.18– ಕಳೆದ ವರ್ಷ ಗಣೇಶ ವಿಸರ್ಜನೆ ಸಂದರ್ಭ ಜಿಲ್ಲೆಯ ನಾಗಮಂಗಲ ದಲ್ಲಿ ಸಂಭವಿಸಿದ ಕೋಮು ಘರ್ಷಣೆ ಮತ್ತು ಅಹಿತಕರ ಘಟನೆ ಮತ್ತೆ ಪುನರಾವರ್ತನೆ ಯಾಗದಂತೆ ಕ್ರಮ ವಹಿಸಿ ಎಂದು ಹಿಂದೂ ಮತ್ತು ಮುಸ್ಲಿಂ ಸಮುದಾಯದ ಮುಖಂಡರಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಮನವಿ ಮಾಡಿದರು.

ಸೋಮವಾರ ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಮಟ್ಟದ ಸಮನ್ವಯತೆ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾಗಮಂಗಲ ಘರ್ಷಣೆ ಸಾಮರಸ್ಯಕ್ಕೆ ಹೆಸರಾದ ಮಂಡ್ಯ ಜಿಲ್ಲೆಗೆ ಕಪ್ಪು ಚುಕ್ಕೆಯಂತಾಗಿದೆ. ಸೌಹಾರ್ದತೆ, ಶಾಂತಿ, ಸಾಮರಸ್ಯದಿಂದ ಎಲ್ಲಾ ಧರ್ಮದ ಹಬ್ಬಗಳನ್ನು ಆಚರಿಸೋಣ. ಪ್ರತಿ ಹಬ್ಬಕ್ಕೆ ಸಂಸ್ಕೃತಿ, ಪಾವಿತ್ರತೆ, ಪಾರಂಪರಿಕತೆ ಇದೆ. ಅದನ್ನು ನಾವು ಮರೆಯಬಾರದು. ನಮ್ಮ ಧರ್ಮಕ್ಕೆ ಯಾವುದೇ ರೀತಿ ಧಕ್ಕೆ ಬಾರದಂತೆ ನಾವು ಹಬ್ಬ ಹರಿದಿನಗಳನ್ನು ಆಚರಿಸೋಣ ಎಂದು ಕರೆ ನೀಡಿದರು.

ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುವಂತೆ ನೀವು ಹಬ್ಬ ಆಚರಿಸಿದರೆ ಜಿಲ್ಲಾಡಳಿತ ದಿಂದ ನಿಮಗೆ ಸಿಗಬೇಕಾದ ಎಲ್ಲಾ ಸಹಕಾರ ನೀಡಲು ನಾನು ಮತ್ತು ಅಧಿಕಾರಿಗಳು ಬದ್ಧವಾಗಿದ್ದೇವೆ. ಎಲ್ಲರೂ ಅಚ್ಚುಕಟ್ಟಾಗಿ ಗಣೇಶ ಚತುರ್ಥಿ ಮಾಡಲು ಮುಂದಾಗುತ್ತೇವೆ. ಜೊತೆಗೆ ನೇತೃತ್ವ ವಹಿಸುತ್ತೇವೆ. ನಮ್ಮೊಂದಿಗೆ ಇರುವ ಕೆಲ ಕಿಡಿಗೇಡಿಗಳು ಮಾಡುವ ದುಷ್ಕೃತ್ಯಕ್ಕೆ ಇಡೀ ನಮ್ಮ ತಂಡವೇ ಅಪವಾದ ಹೊರಬೇಕಾಗುತ್ತದೆ.



ಸಭೆಯಲ್ಲಿ ಡಿಸಿ ಡಾ.ಕುಮಾರ್ ಮಾತನಾಡಿದರು.

ಆದ್ದರಿಂದ ಅಂತಹ ದುಷ್ಟರ ಬಗ್ಗೆ ಎಚ್ಚರದಿಂದಿರಿ ಎಂದು ಸಲಹೆ ನೀಡಿದರು.

ಸಾರ್ವಜನಿಕ ಸ್ಥಳಗಳಲ್ಲಿ ಗಣಪತಿ ಪ್ರತಿಷ್ಠಾಪಿಸುವವರು ತಾಲೂಕು ಕಚೇರಿಗಳಲ್ಲಿ ತೆರೆಯಲಾಗುವ ಏಕಗವಾಕ್ಷಿ ಕೇಂದ್ರದಲ್ಲಿ ಮನವಿ ಸಲ್ಲಿಸಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಅನುಮತಿ ಪಡೆಯುವ ಸಂದರ್ಭ ಗಣಪತಿ ಪ್ರತಿಷ್ಠಾಪಿಸುವ ದಿನಾಂಕ, ಅವಧಿ, ವಿಸರ್ಜನೆ ಮಾಡುವ ದಿನಾಂಕ ಮತ್ತು ಸ್ಥಳ, ಮೆರವಣಿಗೆಯ ರೂಟ್ ಮ್ಯಾಪ್‌ಗಳನ್ನು ನಮೂದಿಸಬೇಕು. ಇದರಿಂದ ಪೊಲೀಸ್ ಬಂದೋಬಸ್ತ್, ಸಿಸಿ ಟಿವಿ ಅಳವಡಿಕೆ, ಬ್ಯಾರಿಕ್ಯಾಡಿಂಗ್, ಚೆಸ್ಕಾಂ ಹಾಗೂ ಅಗ್ನಿ ಶಾಮಕ ಇಲಾಖೆಯಿಂದ ಅಗತ್ಯ ಸಿದ್ಧತೆ ವ್ಯವಸ್ಥಿತವಾಗಿ ಮಾಡಿಕೊಳ್ಳಬಹುದು ಎಂದರು.

ಸ್ಥಳೀಯ ಮುಖಂಡರು ಒಂದೇ ಸ್ಥಳ ನಿಗದಿಪಡಿಸಿಕೊಂಡು ಗಣಪತಿ ವಿಸರ್ಜನೆ ಮಾಡಿದರೆ ಜಿಲ್ಲಾಡಳಿತದಿಂದ ಬೇಕಿರುವ ಸಿದ್ಧತೆ ಹಾಗೂ ಅಗತ್ಯ ವ್ಯವಸ್ಥೆ ಮಾಡಿಕೊಳ್ಳುವುದು ಸುಲಭವಾಗುತ್ತದೆ. ಜಿಲ್ಲೆಯಲ್ಲಿ ಪಿಒಪಿ ಗಣಪತಿ ತಯಾರಿಸುವುದಿಲ್ಲ. ಆದರೆ ಹೊರಗಿನಿಂದ ತಂದು ಮಾರಾಟ ಮಾಡುತ್ತಾರೆ. ಸಾರ್ವಜನಿಕರು ಪಿಒಪಿ ಗಣಪತಿ ಖರೀದಿ ಮಾಡಬಾರದು. ಆಯೋಜಕರು ಸಹ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಅನ್ನ ಸಂತರ್ಪಣೆ ಸಂದರ್ಭ ಶುಚಿತ್ವಕ್ಕೆ ಆದ್ಯತೆ ನೀಡಬೇಕು ಎಂದರು.

ಸಭೆಯಲ್ಲಿದ್ದ ಮುಖಂಡರು ಶಾಂತಿ ಸಭೆ ಬದಲಾಗಿ ಸಾಮರಸ್ಯ ಸಭೆ ಎಂದು ಕರೆಯೋಣ. ಈದ್ ಮಿಲಾದ್‌ನಲ್ಲಿ ನಡೆಯುವ ಮೆರವಣಿಗೆಯಲ್ಲಿ ವಿಧಿಸಲಾಗುವ ಷರತ್ತುಗಳನ್ನು ಸರಳೀಕರಣ ಮಾಡಿಕೊಡಿ. ಗಣಪತಿ ಪ್ರತಿಷ್ಠಾಪಿಸುವ ಸ್ಥಳಗಳಲ್ಲಿ ಜಾನಪದ ಶೈಲಿಯ ಡೊಳ್ಳು ಕುಣಿತ, ತಮಟೆ, ವೀರಗಾಸೆ ಮುಂತಾದ ಪ್ರದರ್ಶನಗಳಿಗೆ ಅವಕಾಶ ನೀಡಬೇಕು. ಸಭೆಯಲ್ಲಿ ಹಾಜರಾಗಿರುವ ಮುಖಂಡರು ಯಾವುದೇ ಹಬ್ಬಗಳಲ್ಲಿ ಯಾವುದೇ ತೊಂದರೆ ಮಾಡುವುದಿಲ್ಲ. ಕಿಡಿಗೇಡಿಗಳು ಗಲಭೆಗಳು ಸೃಷ್ಟಿಸುತ್ತಾರೆ ಅವರ ಮೇಲೆ ನಿಗಾವಿಡಿ. ಗಣಪತಿ ವಿಸರ್ಜನೆಗೆ ಪೊಲೀಸ್ ಇಲಾಖೆ ದಿನಾಂಕ ನಿಗದಿಪಡಿಸಬೇಕು. ಸಿಸಿ ಕ್ಯಾಮರಾ ಹೆಚ್ಚು ಅಳವಡಿಸಿ, ಪಿಡಿಓಗಳು ತಮ್ಮ ವ್ಯಾಪ್ತಿಯಲ್ಲಿ ಕೆರೆಗಳ ಹತ್ತಿರ ಎಚ್ಚರಿಕೆ ವಹಿಸಿ. ಗಣಪತಿ ಹಬ್ಬದಲ್ಲಿ ಆಯೋಜಿಸುವ ಕಾರ್ಯಕ್ರಮಗಳು ಸಾಮರಸ್ಯದಿಂದ ಕೂಡಿರಲಿ. ಸ್ಪರ್ಧಾತ್ಮಕವಾಗಿ ಬೇಡ ಎಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿದರು. ಸಭೆಯಲ್ಲಿ ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ತಿಮ್ಮಯ್ಯ, ಗಂಗಾಧರಸ್ವಾಮಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಈದ್ ಮಿಲಾದ್ ದಿನ ಗಣಪತಿ ವಿಸರ್ಜನೆ ಬೇಡ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಸೆ.5ರಂದು ಈದ್ ಮಿಲಾದ್ ಇರುವುದರಿಂದ ಅಂದು ಗಣಪತಿ ವಿಸರ್ಜನೆ ಮಾಡುವುದು ಬೇಡ. 9 ಹಾಗೂ 11 ದಿನಕ್ಕೆ ವಿಸರ್ಜನೆ ಮಾಡುವುದು ಉತ್ತಮ. ಗಣಪತಿ ಹಬ್ಬದ ದಿನದಂದೇ ಗಣಪತಿ ಪ್ರತಿಷ್ಠಾಪಿಸಿ ಅದರ ಬದಲಾಗಿ ಬೇರೆ ದಿನ ಪ್ರತಿಷ್ಠಾಪಿಸುವುದು ಬೇಡ ಎಂದರು.

ಗಣಪತಿ ವಿಸರ್ಜನೆಗೆ ಸಂಬಂಧಿಸಿದಂತೆ ಪೊಲೀಸ್ ಇಲಾಖೆಗೆ ನಿಗದಿಪಡಿಸುವ ರೂಟ್ ಮ್ಯಾಪ್ ಅನುಸಾರ ಮೆರವಣಿಗೆ ಚಲಿಸಬೇಕು. ತಾಲೂಕು ಮಟ್ಟದಲ್ಲಿ ಸಭೆಗಳನ್ನು ನಡೆಸಿ ಸೂಕ್ತ ನಿರ್ದೇಶನ ನೀಡಲಾಗುವುದು. ಕೋಮು ಗಲಭೆ ಉಂಟು ಮಾಡುವ ಕಿಡಿಗೇಡಿಗಳ ಬಗ್ಗೆ ನಿಗಾ ವಹಿಸಲಾಗುತ್ತಿದೆ. ಸ್ಥಳೀಯರು ಕಿಡಿಗೇಡಿಗಳು ಹಾಗೂ ಸಂದೇಹಾತ್ಮಕ ಘಟನೆ ಕಂಡು ಬಂದಲ್ಲಿ ಸ್ಥಳೀಯ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿ. ಕೋಮು ಗಲಭೆ ಉಂಟು ಮಾಡುವ ಹಾಗೂ ಶಾಂತಿ ಕದಡುವ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡುವುದು ಹಾಗೂ ಸುಳ್ಳು ಸುದ್ದಿ ಹರಡುವವರ ಮೇಲೆ ಪೊಲೀಸ್ ತಂಡ ನಿಗಾ ವಹಿಸುತ್ತಿದೆ. ಇಂತಹ ಪ್ರಕರಣಗಳು ಅಥವಾ ಎಲ್ಲೋ ನಡೆದ ದೃಶ್ಯವನ್ನು ಮಂಡ್ಯ ಜಿಲ್ಲೆಯಲ್ಲಿ ನಡೆದಿದೆ ಎಂದು ಪ್ರಚೋದಿಸುವುದು ಕಂಡು ಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ನಾಗಮಂಗಲ ಗಲಭೆ ಪ್ರಕರಣ ಮತ್ತೆ ಮರುಕಳಿಸಬಾರದು. ನೀವು ಕೊಟ್ಟ ರೂಟ್ ಮ್ಯಾಪ್‌ನಲ್ಲೇ ಹೋಗಿ ಗಣಪತಿ ವಿಸರ್ಜಿಸಿ, ಅದನ್ನು ಬಿಟ್ಟು ಬೇರೆ ರಸ್ತೆಯಲ್ಲಿ ಹೋಗುವುದು ಅಲ್ಲಿ ಹೆಚ್ಚು ಹೊತ್ತು ಸಮಯ ವ್ಯಯ ಮಾಡಿ, ಪ್ರಚೋದನೆಗೆ ಮುಂದಾಗುವುದು ಬೇಡ ಅಂಕಿ ಅಂಶಗಳ ಪ್ರಕಾರ ಕಳೆದ 20 ವರ್ಷದಲ್ಲಿ ಇಂತಹ ಘಟನೆ ನಡೆದಿಲ್ಲ. ಆದರೆ ನಾಗಮಂಗಲ ಗಲಭೆ ಒಂದು ಕಪ್ಪು ಚುಕ್ಕೆಯಾಯಿತು. ಈ ಬಾರಿಯೂ ನಮಗೆ ಚಾಲೆಂಜ್ ಇದ್ದು ಪೊಲೀಸರು ಎಲ್ಲದಕ್ಕೂ ಸಿದ್ಧರಿದ್ದಾರೆ. ನಾಗಮಂಗಲದಲ್ಲಿ ಅಂದು ನಮ್ಮ ಗೈಡ್‌ಲೈನ್ ಪ್ರಕಾರ ನಡೆದಿದ್ದರೆ ಘಟನೆಯೇ ಆಗುತ್ತಿರಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು. ನಮ್ಮ ಪೊಲೀಸ್ ಸಿಬ್ಬಂದಿ ಅಂದು ಹೆಚ್ಚಿನ ಜನ ಗಣಪತಿ ವಿಸರ್ಜನೆ ವೇಳೆ ಇರಲಿಲ್ಲ ಕೇವಲ 4 ಮಂದಿ ಮಾತ್ರ ಇದ್ದರು. ಅವರದ್ದು ತಪ್ಪಿದೆ. ಜೊತೆಗೆ ಹಿಂದೂ ಮತ್ತು ಮುಸ್ಲಿಂ ಮುಖಂಡರು ತಮ್ಮ ಧರ್ಮದವರನ್ನು ಶಾಂತಿ ಕಾಪಾಡಿ ಎಂದು ಮನವಿ ಮಾಡಲಿಲ್ಲ. ಈ ಎಲ್ಲಾ ಅಂಶಗಳಿಂದ ಘರ್ಷಣೆ ಹೆಚ್ಚಾಗಲು ಕಾರಣವಾಯಿತು. ಹಲವು ಪೊಲೀಸರು ಅಮಾನತ್ತಾದರು. 50ಕ್ಕೂ ಹೆಚ್ಚು ಮಂದಿ ಬಂಧನವಾಯಿತು. 150ಕ್ಕೂ ಹೆಚ್ಚು ಮಂದಿ ವಿರುದ್ಧ ಚಾರ್ಜ್‌ಶೀಟ್ ಆಯಿತು. ಇಂತಹ ಯಾವ ಘಟನೆಗಳೂ ಈ ಬಾರಿ ಆಗದಂತೆ ಪ್ರತಿಯೊಬ್ಬರೂ ಎಚ್ಚರ ವಹಿಸುವಂತೆ ಸೂಚಿಸಿದರು.

ಗುಣಮಟ್ಟದ ಆಹಾರ ಕೊಡಿ: ಕಳೆದ ಕೆಲ ತಿಂಗಳ ಹಿಂದೆ ವಿಷಪೂರಿತ ಆಹಾರ ಸೇವಿಸಿ ಮೇಘಾಲಯ ಮೂಲದ ಇಬ್ಬರು ಮಕ್ಕಳು ಸಾವನ್ನಪ್ಪಿದ್ದ ಹಿನ್ನಲೆಯಲ್ಲಿ ಗಣೇಶ ಪ್ರತಿಷ್ಠಾಪನೆ ಸಂದರ್ಭ ಅನ್ನಸಂತರ್ಪಣೆ ಮಾಡುವ ಕುರಿತು ಹದ್ದಿನ ಕಣ್ಣಿಟ್ಟಿದ್ದು, ಎಲ್ಲೂ ಸಹ ಕಳಪೆ ಗುಣಮಟ್ಟದ ಹಾಗೂ ರಾಸಾಯನಿಕ ಮಿಶ್ರಣದ ಆಹಾರ ನೀಡದಂತೆ ಎಚ್ಚರಿಕೆ ವಹಿಸಿ ಎಂದ ಎಸ್ಪಿ, ಆಹಾರ ಇಲಾಖೆಯ ಅಧಿಕಾರಿಗಳು ಅನ್ನಸಂತರ್ಪಣೆ ವೇಳೆ ಸ್ಥಳಕ್ಕೆ ಆಗಮಿಸಿ, ಆಹಾರ ಗುಣಮಟ್ಟದ ಬಗ್ಗೆ ಪರಿಶೀಲನೆ ನಡೆಸುವರು ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ: ನಾಳೆ ಪ್ರತಿಭಟನೆ

ಕೆ.ಆರ್.ಪೇಟೆ, ಆ.18– ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಕಿಡಿಗೇಡಿಗಳನ್ನು ಬಂಧಿಸಿ ಶಿಕ್ಷೆಗೆ ಒಳಪಡಿಸುವಂತೆ ಆಗ್ರಹಿಸಿ ಆ.20ರಂದು ಬೆಳಗ್ಗೆ 11 ಗಂಟೆಗೆ ಶ್ರೀಧರ್ಮಸ್ಥಳ ಅಭಿಮಾನಿಗಳ ವೇದಿಕೆಯಿಂದ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ನಿವೃತ್ತ ಪ್ರಾಂಶುಪಾಲ ಕೆ.ಕಾಳೇಗೌಡ ತಿಳಿಸಿದರು.



ಧರ್ಮಸ್ಥಳ ಅಭಿಮಾನಿಗಳ ವೇದಿಕೆಯ ಪೂರ್ವಭಾವಿ ಸಭೆಯಲ್ಲಿ ನಿವೃತ್ತ ಪ್ರಿನ್ಸಿಪಾಲ್ ಕೆ.ಕಾಳೇಗೌಡ ಮಾತನಾಡಿದರು.

ಪಟ್ಟಣದ ಶ್ರೀಮಲ್ಲಿಕಾರ್ಜುನ್ ಚಾರಿಟಬಲ್ ಟ್ರಸ್ಟ್ ಕಚೇರಿಯಲ್ಲಿ ಶ್ರೀಧರ್ಮಸ್ಥಳ ಅಭಿಮಾನಿಗಳ ವೇದಿಕೆ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ ಇಲ್ಲಿನ ಪ್ರವಾಸಿ ಮಂದಿರದಿಂದ ತಾಲೂಕು ಧರ್ಮಸ್ಥಳ ಅಭಿಮಾನಿಗಳ ವೇದಿಕೆ ಹಾಗೂ ಸದ್ಭಕ್ತರು ಸೇರಿ ತೆಂಡೇಕೆರೆ ಬಾಳೆಹೊನ್ನೂರು ಶಾಖಾ ಮಠದ ಶ್ರೀಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಕಾಪನಹಳ್ಳಿ ಗವಿಮಠ ಸ್ವತಂತ್ರ ಚೆನ್ನವೀರ ಸ್ವಾಮೀಜಿ, ಬೇಬಿ ಮಠದ ಶ್ರೀ ಶಿವಬಸವ ಸ್ವಾಮೀಜಿ ನೇತೃತ್ವದಲ್ಲಿ 10 ಸಾವಿರ ಮಂದಿ ತಾಲೂಕು ಕಚೇರಿಯ ವರೆಗೂ ಬೃಹತ್ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸ ಲಾಗುತ್ತದೆ ಎಂದರು.

ಶ್ರೀಕ್ಷೇತ್ರ ಧರ್ಮಸ್ಥಳ, ಶ್ರೀಮಂಜುನಾಥಸ್ವಾಮಿ ದೇವಾಲಯ ಹಾಗೂ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರ ಕುಟುಂಬಕ್ಕೆ ಕಳಂಕ ತರಲು ಷಡ್ಯಂತ್ರ ನಡೆಸುತ್ತಿರುವವರ ವಿರುದ್ಧ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಜನಾಗ್ರಹ ಕಾರ್ಯಕ್ರಮ ನಡೆಸಲಾಗುತ್ತಿದೆ. 800 ವರ್ಷಗಳ ಇತಿಹಾಸ ಹೊಂದಿರುವ ದಕ್ಷಿಣ ಕಾಶಿ ಧರ್ಮಸ್ಥಳ ಶ್ರೀಕ್ಷೇತ್ರದಲ್ಲಿ ಕಳೆದ ಕೆಲವು ವರ್ಷಗಳಿಂದ ಗಿರೀಶ್ ಮಟ್ಟಣ್ಣವರ್, ಮಹೇಶ್ ಶೆಟ್ಟಿ ತಿಮ್ಮರೋಡಿ, ಸಮೀರ್, ಸಂತೋಷ್ ಶೆಟ್ಟಿ, ಜಯಂತ್, ಅಜಯ್, ಅಂಚನ್ ಸೇರಿದಂತೆ ಇತರರು ಧರ್ಮಸ್ಥಳ ಹಾಗೂ ಡಿ.ವೀರೇಂದ್ರ ಹೆಗ್ಗಡೆ ಕುಟುಂಬದ ವಿರುದ್ಧ ಕೀಳು ಮಟ್ಟದ ಭಾಷೆ ಉಪಯೋಗಿಸಿ ವೀಡಿಯೋಗಳನ್ನು ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಯಬಿಡುತ್ತಿರುವುದು ಕೋಟ್ಯಾಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ. ಇದು ಇದೇ ರೀತಿ ಮುಂದುವರೆದರೆ ಭಕ್ತರು ಸುಮ್ಮನೆ ಕುಳಿತುಕೊಳ್ಳಲು ಆಗುವುದಿಲ್ಲ. ಬೀದಿಗಿಳಿದು ಹೋರಾಟ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ.

ಅನಾಮಿಕನ ಮಾತು ಕೇಳಿ ಕಂಡಕಂಡಲ್ಲಿ ಅಗೆದು ಧರ್ಮಸ್ಥಳವನ್ನು ಮಲೀನ ಮಾಡಲು ಪ್ರಯತ್ನಿಸಲಾಗುತ್ತಿದೆ. ಮಂಜುನಾಥ ಸ್ವಾಮಿ ಕೃಪೆಯಿಂದ ಇದೆಲ್ಲ ಸುಳ್ಳು ಎಂಬುದು ಸಾಬೀತಾಗಿದೆ. ಧರ್ಮಸ್ಥಳ ಕ್ಷೇತ್ರದ ವಿರುದ್ಧ ಸುಳ್ಳು ಸುದ್ದಿ ಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳು ಹಾಗೂ ಯೂಟ್ಯೂಬರ್‌ಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಈ ವೇಳೆ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಆರ್‌ಟಿಓ ಸಮಾಜ ಸೇವಕ ಮಲ್ಲಿಕಾರ್ಜುನ್, ನಿರ್ದೇಶಕ ರಘು, ಕೆ.ಎಸ್.ರಾಜೇಶ್, ತೋಟಪ್ಪ ಶೆಟ್ಟಿ, ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ಸುಜೇಂದ್ರಕುಮಾರ್, ಕೆ.ಎನ್.ಕುಮಾರಸ್ವಾಮಿ, ಚನ್ನಬಸಪ್ಪ, ನಿರಂಜನ್, ಕೆ.ಆರ್.ನೀಲಕಂಠ, ಹರೀಶ್, ಶ್ರೀಮತಿ ನಳಿನಿ ಮತ್ತಿತರರಿದ್ದರು.

ವಿಜೃಂಭಣೆಯ ಶ್ರೀಆಂಜನೇಯಸ್ವಾಮಿ ಉತ್ಸವ



ಶ್ರಾವಣ ಮಾಸದ ಅಂಗವಾಗಿ ಚಿನಕುರಳಿಯಲ್ಲಿ ಕಟ್ಟೇರಮ್ಮನವರ ಸ್ವಾಮಿಗೌಡರ ಕುಟುಂಬದಿಂದ ಗ್ರಾಮದ ಎಲ್ಲಾ ದೇವಸ್ಥಾನಗಳಲ್ಲೂ ಅಭಿಷೇಕ ಹಾಗೂ ವಿಶೇಷ ಅಲಂಕಾರ ಮಾಡಲಾಗಿತ್ತು. ಬಳಿಕ ಗ್ರಾಮದ ಪ್ರಸಿದ್ಧ ಶ್ರೀಆಂಜನೇಯಸ್ವಾಮಿ ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಭಕ್ತರು ಉತ್ಸವ ಮೂರ್ತಿಗೆ ಪೂಜೆ ಸಲ್ಲಿಸಿದರು.

ಒಂದನೇ ಪುಟದಿಂದ

ನದಿಪಾತ್ರದಲ್ಲಿ ಪ್ರವಾಹ ಭೀತಿ



ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೆ ಕಾವೇರಿ ನೀರು ನುಗ್ಗಿರುವುದು. ಇದರಿಂದ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ಜಲಾಶಯದಲ್ಲಿ ಗರಿಷ್ಠ ನೀರು ಭರ್ತಿ ಯಾಗಿದ್ದ ಹಿನ್ನೆಲೆಯಲ್ಲಿ ಮತ್ತೆ ನದಿಗೆ ಭಾರೀ ಪ್ರಮಾಣದ ನೀರು ಬಿಡಲಾಗಿತ್ತು. ಇದೀಗ ಮತ್ತೊಮ್ಮೆ ಜಲಾಶಯ ಭರ್ತಿಯಾಗಿ, ಒಂದು ಲಕ್ಷ ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗುತ್ತಿದೆ.

ಮುಗಿ ಬಿದ್ದ ಪ್ರವಾಸಿಗರು: ಕೆಆರ್‌ಎಸ್ ಜಲಾಶಯದ ಮುಂದೆ ನೀರು ಹಾಲಿನ ಹೊಳೆಯಂತೆ ಭೋರ್ಗರೆಯುತ್ತಿದೆ. ನೀರು ಹೆಚ್ಚಿನ ಪ್ರಮಾಣದಲ್ಲಿ ನದಿಗೆ ನೀರು ಬಿಡುತ್ತಿರುವ ಮಾಹಿತಿ ಅರಿತ ಜನ ಸೇತುವೆ ಬಳಿ ಜಮಾಯಿಸಿದ್ದು, ಭೋರ್ಗರೆಯುತ್ತಿರುವ ನದಿಯನ್ನು ಕಣ್ತುಂಬಿಕೊಳ್ಳಲು ಮುಗಿ ಬಿದ್ದಿದ್ದಾರೆ. ಅಲ್ಲದೆ, ಕೆಆರ್‌ಎಸ್ ಜಲಾಶಯದ ದ್ವಾರದ ಸಮೀಪವಿರುವ ಗೇಟ್‌ನಿಂದ ಹೊರ ಬರುವ ನೀರಿನ ರುದ್ರರಮಣೀಯ ದೃಶ್ಯ ಸವಿಯಲು ಭಾರೀ ಸಂಖ್ಯೆಯಲ್ಲಿ ಸೇರಿದ್ದಾರೆ.

ಕೆಆರ್‌ಎಸ್ ಉದ್ಯಾನವನಕ್ಕೂ ನುಗ್ಗಿದ ನೀರು: ಜಲಾಶಯದಿಂದ ಅಪಾರ ಪ್ರಮಾಣದ ನೀರು ಬಿಟ್ಟ ಹಿನ್ನೆಲೆಯಲ್ಲಿ ಕೆಆರ್‌ಎಸ್ ಉದ್ಯಾನವನಕ್ಕೂ ನೀರು ನುಗ್ಗಿದೆ. ಇದರಿಂದ ದೋಣಿ ವಿಹಾರ ಸ್ಥಳ, ನೀರಿನ ಕಾರಂಜಿಗೆ ಹೋಗುವ ಸ್ಥಳದಲ್ಲಿ ನೀರು ತುಂಬಿದೆ. ಇದರಿಂದ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ರಂಗನತಿಟ್ಟಿಗೂ ಜಲದಿಗ್ಬಂಧನ: ಶ್ರೀರಂಗಪಟ್ಟಣ ತಾಲೂಕಿನ ರಂಗನತಿಟ್ಟು ಪಕ್ಷಿಧಾಮಕ್ಕೂ ಉಕ್ಕಿ ಹರಿದ ಕಾವೇರಿ ನೀರು ನುಗ್ಗಿ ಜಲದಿಗ್ಬಂಧನ ಹಾಕಿದೆ. ಪಕ್ಷಿಧಾಮದ ಟಿಕೆಟ್ ಕೌಂಟರ್‌ವರೆಗೂ ನೀರು ತುಂಬಿರುವುದರಿಂದ ಸುರಕ್ಷತೆಯ ದೃಷ್ಟಿಯಿಂದ ಪಕ್ಷಿಧಾಮಕ್ಕೆ ಪ್ರವಾಸಿಗರ ಪ್ರವೇಶ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಕಳೆದ ಒಂದು ತಿಂಗಳ ಹಿಂದೆಯೇ ಪಕ್ಷಿಧಾಮದಲ್ಲಿ ದೋಣಿ ವಿಹಾರ ಸ್ಥಗಿತಗೊಳಿಸಲಾಗಿತ್ತು. ಇದೀಗ ಪ್ರವಾಸಿಗರ ಪ್ರವೇಶಕ್ಕೆ ತಡೆಯೊಡ್ಡಲಾಗಿದೆ.

ವೆಲ್ಲೆಸ್ಲಿ ಸೇತುವೆ ಬಳಿ: ಶ್ರೀರಂಗಪಟ್ಟಣದ ಪಾರಂಪರಿಕ ವೆಲ್ಲೆಸ್ಲಿ ಸೇತುವೆ ಬಳಿ ಕಾವೇರಿ ಉಕ್ಕಿ ಹರಿಯುತ್ತಿದ್ದು, ಸೇತುವೆ ಮೇಲ್ಭಾಗದ ಅಂಚು ತಲುಪುವಂತೆ ಕಂಡು ಬರುತ್ತಿದೆ. ಜಲಾಶಯದಿಂದ 1.50 ಲಕ್ಷ ಕ್ಯುಸೆಕ್ ನೀರು ನದಿಗೆ ಬಿಟ್ಟರೆ ವೆಲ್ಲೆಸ್ಲಿ ಸೇತುವೆ ಮುಳುಗಡೆಯಾಗುವ ಸಾಧ್ಯತೆ ಇದೆ. ವೆಲ್ಲೆಸ್ಲಿ ಸೇತುವೆ ಮೇಲೆ ಜನ, ವಾಹನ ಸಂಚಾರ ನಿಷೇಧಿಸಲಾಗಿದೆ.

ನಿಮಿಷಾಂಬ, ಘೋಸಾಯಿ ಘಾಟ್‌ನಲ್ಲಿ ಕಟ್ಟೆಚ್ಚರ: ಶ್ರೀರಂಗಪಟ್ಟಣದ ನಿಮಿಷಾಂಬ ದೇವಾಲಯದ ಬಳಿ ಕಟ್ಟೆಚ್ಚರ ವಹಿಸಲಾಗಿದೆ. ಸ್ನಾನಘಟ್ಟ ಮುಳುಗಡೆಯಾಗುವ ಹಂತ ತಲುಪಿದ್ದು, ನದಿಗೆ ಇಳಿಯದಂತೆ ಸೂಚನೆ ನೀಡಲಾಗಿದೆ. ಹಾಗೆಯೇ ಘೋಸಾಯಿ ಘಾಟ್‌ನಲ್ಲೂ ಎಚ್ಚರ ವಹಿಸಿ, ನದಿ ಪಾತ್ರದತ್ತ ಸುಳಿಯದಂತೆ ಜನರಿಗೆ ಎಚ್ಚರಿಕೆ ನೀಡಲಾಗುತ್ತಿದೆ.

ವಿಶ್ವ ದಾಖಲೆಯಾದ 'ಶಕ್ತಿ'!

ಶಕ್ತಿ ಯೋಜನೆಯು Golden Book of World Record ನಲ್ಲಿ ಸ್ಥಾನ ಪಡೆದಿದೆ ಎಂದು ಹೇಳಿದ್ದಾರೆ. Beyond Free Rides ಎಂಬ ಹೆಸರಿನಲ್ಲಿ Sustainable Mobility Network ದೇಶದ 10 ನಗರಗಳಲ್ಲಿ ಮಹಿಳೆಯರಿಗೆ ನೀಡಲಾಗುತ್ತಿರುವ ಉಚಿತ ಬಸ್ ಪ್ರಯಾಣದ ಬಗ್ಗೆ ಅಧ್ಯಯನ ನಡೆಸಿತು. ಬೆಂಗಳೂರಿನಲ್ಲಿ ಶೇ.23 ರಷ್ಟು ಮತ್ತು ಹುಬ್ಬಳ್ಳಿ–ಧಾರವಾಡದಲ್ಲಿ ಶೇ.21 ರಷ್ಟು ಹೆಚ್ಚು ಮಹಿಳಾ ಉದ್ಯೋಗಿಗಳು ಸರ್ಕಾರಿ ಬಸ್‌ಗಳಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ ಎಂದು ಅಧ್ಯಯನ ವರದಿ ತಿಳಿಸಿದೆ ಎಂದು ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ.

ಸೇತುವೆಯಿಂದ ಹಾರಿ ಪೇದೆ ಆತ್ಮಹತ್ಯೆ ಯತ್ನ

ತೆಪ್ಪ ನಡೆಸುತ್ತಿದ್ದವರು ಕೂಡಲೇ ಇವರನ್ನು ರಕ್ಷಿಸಿ, ಗ್ರಾಮಾಂತರ ಪೊಲೀಸರಿಗೊಪ್ಪಿಸಿದ್ದಾರೆ. ಪೇದೆ ಭೃಂಗೇಶ್ ಸಾಕಷ್ಟು ಸಾಲಮಾಡಿದ್ದು ಕುಟುಂಬ ಸಮಸ್ಯೆಯಿಂದ ನರಳುತ್ತಿದ್ದರೆನ್ನಲಾಗಿದೆ. ಬೆಳಗ್ಗಿನಿಂದಲೂ ಬಾಟಲ್‌ವೊಂದನ್ನು ಹಿಡಿದುಕೊಂಡು ಅಲ್ಲಿಯೇ ಸುತ್ತುತ್ತಿದ್ದು, ಮಧ್ಯಾಹ್ನ ಇದ್ದಕ್ಕಿದ್ದಂತೆ ನದಿಗೆ ಹಾರಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಪೇದೆಯ ವಿಚಾರಣೆ ನಡೆಸಿದ ಗ್ರಾಮಾಂತರ ಪೊಲೀಸರು ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ

ಉತ್ಖನನ ಸದ್ಯ ಸ್ಥಗಿತ

ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಯಿತು. ಅದರಲ್ಲಿ ನನಗೆ ನಿರಂತರ ಪ್ರಾಣ ಬೆದರಿಕೆ ಹಾಕಿ ಧರ್ಮಸ್ಥಳ ಹಾಗೂ ಸುತ್ತಮುತ್ತ ಕೊಲೆಯಾದ ಅನೇಕ ಹೆಣ್ಣುಮಕ್ಕಳ ಶವಗಳನ್ನು ನನ್ನಿಂದ ಹೂಳಿಸಲಾಗಿದೆ ಎಂದು ಆ ವ್ಯಕ್ತಿ ದೂರು ಕೊಟ್ಟಿದ್ದಾರೆ. ಪಶ್ಚಾತ್ತಾಪದಿಂದ ದೂರು ಕೊಡುತ್ತಿರುವುದಾಗಿಯೂ ಆತ ಹೇಳಿದರು.

ಕೊಲೆಯಾದ ಅನೇಕ ಪುರುಷರು, ಅತ್ಯಾಚಾರಕ್ಕೊಳಗಾದ ಅನೇಕ ಹೆಣ್ಣು ಮಕ್ಕಳ ಬಗ್ಗೆ ತನಿಖೆ ಮಾಡಿ ಅಂತ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ನಂತರ ದೂರು ಆಧರಿಸಿ ಎಫ್‌ಐಆರ್ ದಾಖಲಾಯಿತು ಎಂದು ಮಾಹಿತಿ ನೀಡಿದರು. ಆ ಬಳಿಕ ಕೋರ್ಟಿನಲ್ಲೂ ಆ ವ್ಯಕ್ತಿಯಿಂದ ಹೇಳಿಕೆ ನೀಡಲಾಯಿತು. ಮ್ಯಾಜಿಸ್ಟ್ರೇಟ್ ಅವರು ತನಿಖೆಗೆ ಆದೇಶ ಮಾಡಿದರು. ಇದರ ಬಳಿಕ ಪೊಲೀಸರಿಂದ ತನಿಖೆ ಆರಂಭಿಸಲಾಯಿತು.

ಈ ಮಧ್ಯೆ ಮಹಿಳಾ ಆಯೋಗದಿಂದ ಸಿಎಂಗೆ ಪತ್ರ ಬಂದಿತು.ಇದಾದ ನಂತರ ಸಿಎಂ ಚರ್ಚಿಸಿ ನಂತರ ಎಸ್‌ಐಟಿಗೆ ಆದೇಶ ಮಾಡಿದೆವು. ಜು.19 ರಂದು ಎಸ್‌ಐಟಿ ರಚಿಸಲಾಗಿದೆ. ಧರ್ಮಸ್ಥಳ ಪೊಲೀಸರ ವ್ಯಾಪ್ತಿಯಲ್ಲಿ ಇದ್ದ ಕೇಸ್ ಎಸ್‌ಐಟಿಗೆ ವರ್ಗಾವಣೆಯಾಗಿದೆ. ಎಸ್‌ಐಟಿಯವರು ಮತ್ತೆ ಆ ವ್ಯಕ್ತಿ ಕರೆದು ಹೇಳಿಕೆ ಪಡೆಯುತ್ತಾರೆ. ಅದರಲ್ಲಿ ಎಲ್ಲೆಲ್ಲಿ ಶವ ಹೂತು ಹಾಕಿದ್ದ ಅಂತ ಹೇಳುತ್ತಾರೆ. ಆತ ಹೇಳಿದ ಪಾಯಿಂಟ್‌ಗಳ ಮ್ಯಾಪ್ ಹಾಕಿಕೊಳ್ಳುತ್ತಾರೆ. ಅಸ್ಥಿಪಂಜರಗಳನ್ನು ತೆಗೆಯಲು ಮ್ಯಾಜಿಸ್ಟ್ರೇಟ್ ಸಮ್ಮುಖದಲ್ಲಿ ಪ್ರಕ್ರಿಯೆ ನಡೆಯುತ್ತದೆ. ಎರಡು ಜಾಗಗಳಲ್ಲಿ ಅಸ್ಥಿಪಂಜರ ಸಿಗುತ್ತದೆ. ಒಂದರಲ್ಲಿ ಅಸ್ಥಿಪಂಜರ ಸಿಗುತ್ತೆ, ಅದನ್ನು ಎಫ್‌ಎಸ್‌ಎಲ್‌ಗೆ ಕಳಿಸಿಕೊಟ್ಟಿದ್ದಾರೆ. ಎರಡನೇ ಜಾಗದಲ್ಲೂ ಒಂದಷ್ಟು ಮೂಳೆಗಳು ಸಿಗುತ್ತವೆ, ಅದನ್ನೂ ಎಫ್‌ಎಸ್‌ಎಲ್‌ಗೆ ಕಳಿಸಲಾಗಿದೆ ಎಂದು ಪರಮೇಶ್ವರ್ ವಿವರ ನೀಡಿದರು.

ಇನ್ನೊಂದಷ್ಟು ಕಡೆಯೂ ಮಣ್ಣು ಸಂಗ್ರಹಿಸಿ ಲ್ಯಾಬ್‌ಗೆ ಕಳಿಸಲಾಗಿದೆ. ಅಸ್ಥಿಪಂಜರದ ಪರಿಶೀಲನೆ ಆಗಬೇಕು, ಸ್ಯಾಂಪಲ್‌ಗಳ ಅನಾಲಿಸಿಸ್ ಆಗಬೇಕು. ಆಗ ಮಾತ್ರ ತನಿಖೆ ಪ್ರಾರಂಭ ಆಗಿದೆ ಎಂದು ಹೇಳಬಹುದು. ಇನ್ನೂ ಎಫ್‌ಎಸ್‌ಎಲ್ ವರದಿ ಬಂದಿಲ್ಲ. ವರದಿ ಬಂದ ನಂತರ ಮುಂದಿನ ತನಿಖೆ. ಇಲ್ಲಿಯವರೆಗೆ ಆಗಿರೋದು ಉತ್ಖನನ ಅಷ್ಟೇ, ತನಿಖೆ ಅಲ್ಲ ಎಂದು ಸ್ಪಷ್ಟಪಡಿಸಿದರು.

ಇದರ ಜೊತೆಗೆ ಇತರ ಕಡೆ ನಡೆದಿರುವ ಉತ್ಖನನದ ಮಣ್ಣಿನ ಮಾದರಿಯ ಪರಿಶೀಲನೆಗೆ ಕಳುಹಿಸಲಾಗಿದೆ ಅದರ ವಿಶ್ಲೇಷಣೆ ಬರುವವರೆಗೆ ಉತ್ಖನನ ಮಾಡುವುದಿಲ್ಲ. ವರದಿ ಬಂದ ನಂತರ ತನಿಖೆ ನಡೆಯಲಿದೆ ಎಂದು ತಿಳಿಸಿದರು.

ತನಿಖೆಯ ನಂತರ ಸತ್ಯಾಂಶ ಹೊರಬೀಳಲಿದೆ. ಯಾವುದೇ ಕೊಲೆ, ಅತ್ಯಾಚಾರ ನಡೆದಿಲ್ಲ ಎಂಬ ವರದಿ ಬಂದರೆ ಧರ್ಮಸ್ಥಳದ ಬಗ್ಗೆ ಇರುವ ಎಲ್ಲಾ ಅಪನಂಬಿಕೆಗಳು ದೂರಾಗಲಿವೆ ಒಂದು ವೇಳೆ ನಡೆದಿದೆ ಎಂದಾದರೆ ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಸಿಗಲಿದೆ. ಸರ್ಕಾರ ಈ ವಿಷಯದಲ್ಲಿ ಪೂರ್ವಗ್ರಹ ಪೀಡಿತವಾಗಿಲ್ಲ ಯಾವುದೇ ಒತ್ತಡಗಳಿಗೆ ಮಣಿದಿಲ್ಲ ತನಿಖಾ ತಂಡಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ ಎಂದು ಹೇಳಿದರು.

> ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿದ ಆರೋಪಗಳ ತನಿಖೆಗಾಗಿ ಎಸ್‌ಐಟಿ ರಚಿಸುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ ಮರುದಿನವೇ ಅವರು ತಮ್ಮ ನಿಲುವು ಬದಲಾಯಿಸಿ ಎಸ್‌ಐಟಿ ರಚಿಸಿದರು. ಎಸ್‌ಐಟಿ ರಚಿಸಲು ಸಿದ್ದರಾಮಯ್ಯ ಅವರ ಮೇಲೆ ಯಾರು ಒತ್ತಡ ಹೇರಿದರು? ಇದು ಕರ್ನಾಟಕದ ಜನರಿಗೆ ಮುಖ್ಯಮಂತ್ರಿಯೇ ಉತ್ತರಿಸಬೇಕು. ಧರ್ಮಸ್ಥಳ ವಿಷಯದ ಬಗ್ಗೆ ಮಾತನಾಡಲು ಒತ್ತಡ ಹೇರಲಾಗಿದೆ ಎಂದು ಮುಸುಕುಧಾರಿ ದೂರುದಾರ ಹೇಳಿದ್ದಾನೆ. ಇದು ಪ್ರಕರಣದ ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟುಹಾಕಿದೆ ಎಂದಿದ್ದಾರೆ. ಎಸ್‌ಐಟಿ ತನಿಖೆ ನಡೆಸಿದ ರೀತಿ, ಸುಳ್ಳು ಪ್ರಚಾರವನ್ನು ಹರಡಿದ ರೀತಿ ಮತ್ತು ಅದು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಾಧ್ಯಮಗಳ ಗಮನ ಸೆಳೆದ ರೀತಿಯಿಂದ ಧರ್ಮಸ್ಥಳದ ಕೋಟ್ಯಂತರ ಭಕ್ತರಿಗೆ ನೋವುಂಟಾಗಿದೆ.
>
> – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ.

> ಅನಾಮಿಕ ತೋರಿಸಿದ 16 ಜಾಗಗಳಲ್ಲಿ ಅಗೆದರೂ ಏನೂ ಸಿಕ್ಕಿಲ್ಲ. ಅವನ ಜೊತೆ ಸೇರಿಕೊಂಡು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಕೆಲವು ಯುಟ್ಯೂಬ್, ಸೋಶಿಯಲ್ ಮೀಡಿಯಾದವರೂ ಸೇರಿಕೊಂಡಿದ್ದಾರೆ. ಉಪ ಮುಖ್ಯಮಂತ್ರಿಗಳೇ ಷಡ್ಯಂತ್ರ ಆಗಿದೆ ಅಂದಿದ್ದಾರೆ. ನಮಗೂ ಅದೇ ಅನುಮಾನ ಅನಾಮಿಕನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು. ಸೋಷಿಯಲ್ ಮೀಡಿಯಾ ಯೂಟ್ಯೂಬ್‌ನಲ್ಲಿ ಮಾತನಾಡಿದವರ ವಿರುದ್ಧವೂ ಕ್ರಮ ತಗೆದುಕೊಳ್ಳಬೇಕು. ಧಾರ್ಮಿಕ ಶ್ರದ್ಧಾ ಕೇಂದ್ರವಾದ ಧರ್ಮಸ್ಥಳದ ವಿಚಾರದಲ್ಲಿ ಅಪಪ್ರಚಾರ ಮಾಡಿದವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು.
>
> – ಸಿ.ಟಿ.ರವಿ, ಬಿಜೆಪಿ ವಿಧಾನ ಪರಿಷತ್ ಸದಸ್ಯ

> ಧರ್ಮಸ್ಥಳ ವಿಚಾರದಲ್ಲಿ ಸಿಎಂ ಮೇಲೆ ಒತ್ತಡ ಹೇರಿದ್ದು ಯಾರೂ ಎಂಬುದು ಬಹಿರಂಗವಾಗಬೇಕು. ಸಿಎಂ ಮನೆಗೆ ಪ್ರಗತಿಪರರು, ನಗರ ನಕ್ಸಲ್‌ಗಳು ಭೇಟಿ ನೀಡಿರುವ ಬಗ್ಗೆ ಫೋಟೋ ಸಮೇತ ಪತ್ರಿಕೆಗಳಲ್ಲಿ ಸುದ್ದಿ ಬಂದಿದೆ. ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದೆ ಎಂದು ಉಪ ಮುಖ್ಯಮಂತ್ರಿಗಳೇ ಮಾಧ್ಯಮಗಳಿಗೆ ಹೇಳಿದ್ದಾರೆ. ಯಾರು ಷಡ್ಯಂತ್ರ ಮಾಡಿದರು ಎಂಬುದನ್ನು ಡಿ.ಕೆ.ಶಿವಕುಮಾರ್ ಸದನಕ್ಕೆ ತಿಳಿಸಬೇಕು.
>
> -ಆರ್.ಅಶೋಕ್, ವಿಪಕ್ಷ ನಾಯಕ

> ಸರ್ಕಾರದಿಂದಲೇ ಧರ್ಮಸ್ಥಳ ಶ್ರೀಕ್ಷೇತ್ರದ ಮೇಲೇ ಅಪಪ್ರಚಾರವಾಗುತ್ತಿದೆ. ಒಬ್ಬ ಅಲ್ಲ ಹತ್ತಾರು ಮುಸುಕುಧಾರಿಗಳು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಯೂಟ್ಯೂಬ್ ಬಳಸಿಕೊಂಡು ವ್ಯವಸ್ಥಿತವಾಗಿ ಅಪಪ್ರಚಾರ ಮಾಡಲಾಗುತ್ತಿದೆ. ಸರ್ಕಾರ ಎಸ್‌ಐಟಿ ರಚಿಸಿದ್ದು ಸತ್ಯ ಹೊರಬರಬೇಕು ಎಂಬ ದೃಷ್ಟಿಯಿಂದ ಅಲ್ಲ, ಧರ್ಮಸ್ಥಳ ಶ್ರೀಕ್ಷೇತ್ರದ ಮೇಲೆ ಕೆಸರೆರಚಲು ಎಸ್‌ಐಟಿ ರಚಿಸಲಾಗಿದೆ.
>
> – ಸುನೀಲ್‌ಕುಮಾರ್, ಬಿಜೆಪಿ ಶಾಸಕ

ಮೋಹನ್ ಕುಮಾರ್ ಅವಾಂತರ

ಕುಡಿದಿದ್ದ ಮೋಹನ್‌ಕುಮಾರ್ ಅಲ್ಲಿದ್ದವರೊಂದಿಗೆ ಕ್ಷುಲ್ಲಕ ಕಾರಣಕ್ಕೆ ಜಗಳ ವಾಡಿ, ತಳ್ಳಾಡಿದ್ದಾರೆ. ಈ ವೇಳೆ ಅಲ್ಲಿನ ಸಿಬ್ಬಂದಿ ತಡೆಯಲು ಬಂದಾಗ 'ನಾನು ಸಿಸಿಬಿ ಪೊಲೀಸ್ ಅಧಿಕಾರಿ, ನೀವು ನನ್ನನ್ನು ಏನೂ ಮಾಡೋಕಾಗಲ್ಲ. ಯಾವ್ ಕೇಸ್ ಹಾಕ್ತೀಯಾ? ಎಂದು ಬೆದರಿಸಿದ್ದಾರೆ. ಈ ಘಟನೆಯನ್ನು ಕೆಲವರು ಮೊಬೈಲ್‌ನಲ್ಲಿ ಸೆರೆಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ನಾನು ಅಪ್ಪು ಅಭಿಮಾನಿ, ಪುನೀತ್ ರಾಜ್‌ಕುಮಾರ್ ಸಾಂಗ್ ಹಾಕಬೇಕೆಂದು ಪಬ್ ಸಿಬ್ಬಂದಿಗೆ ತಿಳಿಸಿದಾಗ ಇಬ್ಬರ ನಡುವೆ ವಾಗ್ವಾದ ಉಂಟಾಗಿದೆ. ಈ ವೇಳೆ ಮೋಹನ್‌ಕುಮಾರ್ ತಳ್ಳಾಟ– ನೂಕಾಟ ನಡೆಸಿ, ನಾನು ಪೊಲೀಸ್ ಅಧಿಕಾರಿ ಎಂದು ಬೆದರಿಸಿ ದರು ಎಂದು ಮತ್ತೊಂದು ಮೂಲಗಳಿಂದ ತಿಳಿದುಬಂದಿದೆ.

ದ್ರೌಪದಿ ಮುರ್ಮು ಭೇಟಿ

ದಸರಾ ಮಹೋತ್ಸವವನ್ನು ಉದ್ಘಾಟಿಸಿದ್ದರು. ಇದೀಗ ಮತ್ತೊಮ್ಮೆ ಮೈಸೂರಿಗೆ ಆಗಮಿಸುತ್ತಿದ್ದು, ಭದ್ರತೆ ಸೇರಿದಂತೆ ರಾಷ್ಟ್ರಪತಿಗಳು ಪಾಲ್ಗೊಳ್ಳುವ ಕಾರ್ಯಕ್ರಮಕ್ಕೆ ಸರ್ವ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ಆ.31ರಂದು ಸಂಜೆ ವಿಶೇಷ ವಿಮಾನದಲ್ಲಿ ದೆಹಲಿಯಿಂದ ಬೆಂಗಳೂರು, ಬಳಿಕ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಅಂದು ರಾತ್ರಿ ಮೈಸೂರಲ್ಲಿ ವಾಸ್ತವ್ಯ ಹೂಡುವ ಅವರು, ಮರು ದಿನ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಸ್ಪಷ್ಟಪಡಿಸಿದ್ದಾರೆ.

ಪ್ರಾಕೃತಿಕ ವಿಕೋಪ ತಡೆಗೆ ಕೊಡಗು ಜಿಲ್ಲೆಗೆ 50 ಕೋಟಿ ಅನುದಾನ

ಮಡಿಕೇರಿ, ಆ.18– ಪ್ರಾಕೃತಿಕ ವಿಕೋಪ ತಡೆಗೆ ಜಿಯೋಲಾಜಿಕಲ್ ಸರ್ವೇ ಆಫ್ ಇಂಡಿಯಾ ಮತ್ತು ಜಿಲ್ಲಾಡಳಿತ ನೀಡಿದ ವರದಿಯನ್ನು ಆಧರಿಸಿ ಕೊಡಗು ಜಿಲ್ಲೆಗೆ 50 ಕೋಟಿ ಅನುದಾನ ಒದಗಿಸಲಾಗಿದೆ. ಜಿಎಸ್‌ಐ ಹೊರತುಪಡಿಸಿ ಇತರ ತಾಂತ್ರಿಕ ಸಮಿತಿ ಹೆಚ್ಚಿನ ಅನುದಾನಕ್ಕೆ ಶಿಫಾರಸು ಮಾಡಿದರೂ ಅದನ್ನು ಬಿಡುಗಡೆ ಮಾಡಲು ಎಲ್ಲಾ ಪ್ರಯತ್ನ ನಡೆಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಸದನಕ್ಕೆ ಮಾಹಿತಿ ನೀಡಿದ್ದಾರೆ.



ಕೃಷ್ಣ ಭೈರೇಗೌಡ

ಪ್ರಾಕೃತಿಕ ವಿಕೋಪ ನಿರ್ವಹಣೆಗೆ ಸರಕಾರ ಕೈಗೊಂಡ ಕ್ರಮಗಳು, ಭೂ ಕುಸಿತ ತಡೆ ಕಾಮಗಾರಿಗೆ ಮೀಸಲಿಟ್ಟ ಅನುದಾನ ಹಾಗೂ ಕಾಮಗಾರಿ ಪ್ರಗತಿ ಕುರಿತು ಮಡಿಕೇರಿ ಕ್ಷೇತ್ರ ಶಾಸಕ ಡಾ.ಮಂತರ್ ಗೌಡ ಸರಕಾರದ ಗಮನ ಸೆಳೆದರು. 2018–19ರಲ್ಲಿ ಸಂಭವಿಸಿದ ಪ್ರಾಕೃತಿಕ ವಿಕೋಪದಲ್ಲಿ ಮಡಿಕೇರಿ ಕ್ಷೇತ್ರದಲ್ಲಿ ತೀವ್ರ ಹಾನಿಯಾಗಿದ್ದು, ಹಲವು ಮಂದಿ ಪ್ರಾಣ ಕಳೆದುಕೊಂಡಿದ್ದರು. ಪರಿಸ್ಥಿತಿ ನಿರ್ವಹಣೆಗೆ ಕಂದಾಯ ಇಲಾಖೆ ಮೂಲಕ 1.89 ಕೋಟಿ ಮಾತ್ರವೇ ಹಣ ನೀಡಲಾಗಿದೆ. ಜಿಎಸ್‌ಐ ಪ್ರಾಕೃತಿಕ ವಿಕೋಪದ ಸರ್ವೇ ನಡೆಸಿ ಒಟ್ಟು 124 ನಿರ್ಮಾಣ ಕಾಮಗಾರಿ ನಡೆಸಲು ಸ್ಥಳ ಗುರುತಿಸಿದೆ. ಈ ಪೈಕಿ ಮಡಿಕೇರಿ ಕ್ಷೇತ್ರದಲ್ಲಿ 89 ಕಾಮಗಾರಿ ಗುರುತಿಸಿದ್ದು, 15 ಕಾಮಗಾರಿಗಳು ಪ್ರಗತಿಯಲ್ಲಿವೆ. ಇನ್ನುಳಿದ 69 ಕಾಮಗಾರಿಗಳಿಗೆ ಇನ್ನಷ್ಟೇ ಅಂದಾಜು ಪಟ್ಟಿ ಸಲ್ಲಿಸಬೇಕಿದೆ. ಈ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಸೂಕ್ತ ಅನುದಾನ ಒದಗಿಸಿ ಕಾಮಗಾರಿ ಪ್ರಾರಂಭಿಸಬೇಕು ಎಂದು ಶಾಸಕ ಡಾ.ಮಂತರ್ ಗೌಡ ಸರಕಾರವನ್ನು ಆಗ್ರಹಿಸಿದರು.

500 ಕೋಟಿ ರೂ. ವೆಚ್ಚ : ಭೂ ಕುಸಿತ ತಡೆಗಟ್ಟಲು ಕೆಲವು ಕಾಮಗಾರಿ ತುರ್ತು ಅಗತ್ಯದ ಬಗ್ಗೆ ಜಿಎಸ್ ಐ ಶಿಫಾರಸು ಮಾಡಿದೆ. ಅದರಂತೆ ಆಯಾ ಜಿಲ್ಲಾಡಳಿತಗಳಿಗೂ ನೀಡಿ ಜನರ ಸುರಕ್ಷತೆಯ ದೃಷಿಯಿಂದ್ಲ ಕಾಮಗಾರಿ ನಡೆಸುವ ಸ್ಥಳಗಳನ್ನು ಗುರುತಿಸಲು ಸೂಚಿಸಿ ವರದಿ ಪಡೆಯಲಾಗಿತ್ತು. ಇದರ ಆಧಾರದಲ್ಲಿ ರಾಜ್ಯದ 6 ಜಿಲ್ಲೆಗಳಿಗೆ ದೀರ್ಘ ಕಾಲದ ಯೋಜನೆ ರೂಪಿಸಲು 500 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಕೊಡಗು ಜಿಲ್ಲೆಗೂ ವಿವಿಧ ಕಾಮಗಾರಿ ನಡೆಸಲು ಒಟ್ಟು 50 ಕೋಟಿ ಅನುದಾನ ಮೀಸಲಿಡಲಾಗಿದೆ ಎಂದು ಕೃಷ್ಣ ಭೈರೇಗೌಡ ಮಾಹಿತಿ ನೀಡಿದರು.

ಶರಣಾಗಲು ಆ.. ಗುಂಪು ಹೇಳಿತ್ತು !!

2023ರ ಡಿಸೆಂಬರ್‌ನಲ್ಲಿ ತಮಿಳುನಾಡಿನಿಂದ ಗುಂಪು ನನನ್ನು ಕರೆತಂದಿತು. ಮೊದಲು ಕೋರ್ಟ್ ಮುಂದೆ ಹೇಳಿಕೆ ನೀಡಲು ಭಯ ಆಗುತಿತ್ತು ಮಹಿಳೆ (ಸುಜಾತ ಭಟ್) ದೂರಿನ ನಂತರ ಪೊಲೀಸರು ಹಾಗೂ ನ್ಯಾಯಾಲಯದ ಮುಂದೆ ಹೇಳಿಕೆ ನೀಡಲು ಧೈರ್ಯ ಬಂತು. ಆ ಮಹಿಳೆಯೇ ನನ್ನಲ್ಲಿ ಧೈರ್ಯ ತುಂಬಿದರು. ಹೀಗಾಗಿ ನಾನು ಬಂದು ಹೇಳಿಕೆ ಕೊಟ್ಟೆ, ಬುರುಡೆ ತಂದು ಕೊಟ್ಟು ಅವರು ಹೇಳಿದಂತೆ ನಾನು ನಡೆದುಕೊಂಡೆ. ಪೊಲೀಸರ ಮುಂದೆ ಏನು ಹೇಳಬೇಕೆಂದು ಮೂವರು ನನಗೆ ಹೇಳಿಕೊಟ್ಟಿದ್ದರು. ಅವರ ಒತ್ತಡಕ್ಕೆ ಸುಜಾತಾ ಭಟ್ ಅವರು ದೂರು ಕೊಡುವ ತನಕ ನನಗೆ ಭಯವಾಗುತ್ತಿತ್ತು. ಆದರೆ, ಸುಜಾತಾ ಅವರು ದೂರು ಕೊಟ್ಟ ನಂತರ ನನಗೆ ಧೈರ್ಯ ಬಂತು ಎಂದು ಅನಾ ಮಿಕ ಹೇಳಿದ್ದಾರೆ. ಈ ಹೇಳಿಕೆಯ ನಂತರ, ಎಸ್‌ಐಟಿ ಅಧಿಕಾರಿಗಳು ದೂರುದಾರನ ಸಂಪೂರ್ಣ ವಿಡಿಯೋ ಹೇಳಿಕೆಯನ್ನು ರೆಕಾರ್ಡ್ ಮಾಡಿಕೊಂಡಿದ್ದಾರೆ ಈ ವಿಡಿಯೋ ಪ್ರಕರಣದ ಮುಂದಿನ ತನಿಖೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಸಾಧ್ಯತೆಯಿದೆ. ದೂರುದಾರ ಅನಾಮಿಕನ ಈ ಸ್ಫೋಟಕ ಹೇಳಿಕೆಯು ಪ್ರಕರಣದ ಆಳವಾದ ತನಿಖೆಗೆ ಒತ್ತಾಯಿಸುತ್ತಿದೆ. ಈ ಮೂಲಕ, ಪ್ರಕರಣದಲ್ಲಿ ಭಾಗಿಯಾಗಿರುವ ಇತರ ವ್ಯಕ್ತಿಗಳ ಬಗ್ಗೆ ಬೆಳಕು ಚೆಲ್ಲುವ ಸಾಧ್ಯತೆ ಇದೆ ಎಂದು ನಿರೀಕ್ಷಿಸಲಾಗಿದೆ.

ನೂರಾರು ಶವ ಹೂತಿದ್ದೇನೆ ಎಂದಿದ್ದ ಅನಾಮಿಕ: ಅನಾಮಿಕ ವ್ಯಕ್ತಿ ಪೊಲೀಸರಿಗೆ ಕೊಟ್ಟ ಬುರುಡೆ ಹಾಗೂ ಅದನ್ನು ಹೊರಗೆ ತೆಗೆದ ವಿಡಿಯೋವನ್ನು ಪೊಲೀಸರ ಮುಂದೆ ಇಟ್ಟಿದ್ದಾನೆ. ಈ ಬುರುಡೆ ಎಲ್ಲಿ ಸಿಕ್ಕಿದೆ ಎಂದು ಕೇಳಿದಾಗ, ಇದೊಂದೇ ಅಲ್ಲ ಇಂತಹ ನೂರಾರು ಹೆಣ್ಣು ಮಕ್ಕಳ ಶವಗಳನ್ನು ನಾನು ಧರ್ಮ ಸ್ಥಳದ ಸುತ್ತಮುತ್ತಲೂ ಹೂತಿದ್ದೇನೆ. ನಿಮಗೆ ಶವಗಳನ್ನು ಹೂತಿರುವ ಸ್ಥಳಗಳನ್ನು ತೋರಿಸುತ್ತೇನೆ ಎಂದು ತಿಳಿಸಿದ್ದಾನೆ. ಇದನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿತ್ತು. ಆದರೆ, ಅನಾಮಿಕ ತೋರಿಸಿದ 16ಕ್ಕೂ ಹೆಚ್ಚು ಸ್ಥಳಗಳಲ್ಲಿ ಎರಡರಲ್ಲಿ ಮಾತ್ರ ಮೂಳೆಗಳು ಸಿಕ್ಕಿದ್ದವು. ಆತ ತೋರಿಸಿದ ಯಾವುದೇ ಜಾಗದಲ್ಲಿ ಮಹಿಳೆಯರ ಅಸ್ಥಿಪಂಜರ ಸಿಕ್ಕಿಲ್ಲ. ಇದೀಗ ಅನಾಮಿಕ ವ್ಯಕ್ತಿಯನ್ನು ತೀವ್ರ ವಿಚಾರಣೆ ಮಾಡಿದಾಗ ಒಂದು ತಂಡ ನನಗೆ ಬುರುಡೆ ಕೊಟ್ಟು, ಎಸ್‌ಐಟಿ ಮುಂದೆ ಹೀಗೆ ಹೇಳುವಂತೆ ತಿಳಿಸಿತ್ತು. ಇದಾದ ನಂತರ ನಾನು ಎಸ್‌ಐಟಿ ಮುಂದೆ ಬುರುಡೆ ಕೊಟ್ಟು ಶರಣಾಗಿದ್ದೆ ಎಂದು ತಿಳಿಸಿದ್ದಾನೆ.

ಇನ್ನು ಅನಾಮಿಕ ವ್ಯಕ್ತಿ ಪೊಲೀಸರಿಗೆ ತಂದುಕೊಟ್ಟ ತಲೆ ಬುರುಡೆ ಎಲ್ಲಿಂದ ತಂದಿದ್ದೀಯಾ ಎಂದು ಕೇಳಿದ್ದಾರೆ. ಇದಕ್ಕೆ ಸ್ಪಷ್ಟವಾಗಿ ಉತ್ತರ ಕೊಡದ ಅನಾಮಿಕ ವ್ಯಕ್ತಿ ಬಂಗ್ಲೆಗುಡ್ಡ, ಬೋಳಿಯಾರು, ಕಲ್ಲೇರಿ, ಕಾಡು ಎಂದೆಲ್ಲಾ ವಿವಿಧ ಹೇಳಿಕೆಗಳನ್ನು ನೀಡುತ್ತಿದ್ದಾನೆ. ಇದರಿಂದ ಎಸ್‌ಐಟಿ ಆತನನ್ನು ಮತ್ತಷ್ಟು ತೀವ್ರ ವಿಚಾರಣೆಗೆ ಒಳಪಡಿಸಿದಾಗ ತಾನು ಸುಳ್ಳು ಹೇಳಿದ್ದಾಗಿ ಒಪ್ಪಿಕೊಂಡಿದ್ದಾನೆ.

ವೈದ್ಯಕೀಯ ಸೇವೆಯಲ್ಲಿ ಭಾರತ ಜಾಗತಿಕವಾಗಿ ಮುಂಚೂಣಿಯಲ್ಲಿದೆ

ಸಂಸದ ಯದುವೀರ್ ಒಡೆಯರ್‌ರಿಗೆ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮಾಹಿತಿ

ಮೈಸೂರು,ಆ.18(ಬಿಎಲ್‌ಯು)– ಜಾಗತಿಕ ಮಟ್ಟದಲ್ಲಿ ವೈದ್ಯಕೀಯ ಸೇವೆ ನೀಡುವುದರಲ್ಲಿ ಭಾರತ ಮುಂಚೂಣಿ ಯಲ್ಲಿದೆ ಎಂದು ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರಸಿಂಗ್ ಶೇಖಾವತ್ ತಿಳಿಸಿದ್ದಾರೆ.

ಲೋಕಸಭಾ ಅಧಿವೇಶನದಲ್ಲಿ ಸೋಮವಾರ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಇದರಿಂದ ಜಾಗತಿಕ ಸ್ವಾಸ್ಥ್ಯ ಪ್ರವಾಸೋದ್ಯಮಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ ಎಂದು ಹೇಳಿದರು.

ವೈದ್ಯಕೀಯ ಪ್ರವಾಸೋದ್ಯಮ ಸೇರಿದಂತೆ ದೇಶದ ವಿವಿಧ ಪ್ರವಾಸೋದ್ಯಮ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಮತ್ತು ಉತ್ತೇಜಿಸಲು ಕೇಂದ್ರ ಸರ್ಕಾರ ಸೂಕ್ತ ಬೆಂಬಲ ಒದಗಿಸುತ್ತಿದೆ.

ವೈದ್ಯಕೀಯ ಪ್ರವಾಸೋದ್ಯಮ ಸೇರಿದಂತೆ ಪ್ರವಾಸಿ ತಾಣಗಳು ಮತ್ತು ಉತ್ಪನ್ನಗಳ ಅಭಿವೃದ್ಧಿ ಮತ್ತು ಪ್ರಚಾರವನ್ನು ಆಯಾ ರಾಜ್ಯ ಸರ್ಕಾರ ಹಾಗೂ ಕೇಂದ್ರಾಡಳಿತ ಪ್ರದೇಶ ಕೈಗೊಳ್ಳ ಬೇಕಿದೆ. ಇದಕ್ಕೆ ಕೇಂದ್ರ ಸರ್ಕಾರ ಎಲ್ಲಾ ಸಹಕಾರ ನೀಡಲಿದೆ ಎಂದು ಹೇಳಿದರು.


ಗಜೇಂದ್ರ ಸಿಂಗ್ ಶೇಖಾವತ್

ವೈದ್ಯಕೀಯ ಚಿಕಿತ್ಸೆಗಾಗಿ ಭಾರತಕ್ಕೆ ಆಗಮಿಸುವ ವಿದೇಶಿ ಪ್ರಜೆಗಳ ಭೇಟಿಗೆ ಅನುಕೂಲವಾಗುವಂತೆ ಇ–ವೈದ್ಯಕೀಯ ವೀಸಾ, ಇ–ವೈದ್ಯಕೀಯ ಅಟೆಂಡೆಂಟ್ ವೀಸಾ ಸೌಲಭ್ಯ ಒದಗಿಸುತ್ತದೆ ಎಂದರು.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಅಡಿಯಲ್ಲಿ ಸೇವೆಗಳ ರಫ್ತು ಉತ್ತೇಜನ ಮಂಡಳಿ ಸಂಜೀವಿನಿ ಎಂಬ ಅಂತರರಾಷ್ಟ್ರೀಯ ಆರೋಗ್ಯ ಮತ್ತು ಸ್ವಾಸ್ಥ್ಯ ಕಾರ್ಯಕ್ರಮ ಆಯೋಜಿಸುತ್ತದೆ. ಇದು ಭಾರತದ ಗುಣಪಡಿಸುವಿಕೆ ಮತ್ತು ಸ್ವಾಸ್ಥ್ಯ ತಾಣದ ಸಾಮರ್ಥ್ಯವನ್ನು ಜಾಗತಿಕ ಮಟ್ಟದಲ್ಲಿ ಪ್ರದರ್ಶಿಸಲಿದೆ ಎಂದು ವಿವರಿಸಿದರು.

ಭಾರತ ಹೀಲ್ ಇನ್ ಇಂಡಿಯಾ ಯೋಜನೆಯಲ್ಲಿ ಇದುವರೆಗೆ ಭಾರತಕ್ಕೆ ಆಗಮಿಸಿರುವ ವಿದೇಶಿ ಪ್ರವಾಸಿಗರ ಸಂಖ್ಯೆ ಕುರಿತು ಗಜೇಂದ್ರ ಸಿಂಗ್ ಶೇಖಾವತ್ ಅಂಕಿ ಅಂಶಗಳ ಸಹಿತ ಉತ್ತರ ನೀಡಿದರು.

ಪ್ರವಾಸೋದ್ಯಮಕ್ಕೆ ಉತ್ತಮ ಸ್ಪಂದನೆ



“ಕಳೆದ ಐದು ವರ್ಷದ ಅವಧಿಯಲ್ಲಿ ಹಲವು ದೇಶಗಳ ಪ್ರವಾಸಿಗರು ಭಾರತಕ್ಕೆ ಆಗಮಿಸಿ ಚಿಕಿತ್ಸೆ ಪಡೆದಿದ್ದು, ಇದರಿಂದ ವೈದ್ಯಕೀಯ ಪ್ರವಾಸೋದ್ಯಮಕ್ಕೆ ಹೆಚ್ಚು ಸ್ಪಂದನೆ ದೊರಕಿದೆ. ಹೀಲ್ ಇನ್ ಇಂಡಿಯಾ ಯೋಜನೆಯಲ್ಲಿ ಚಿಕಿತ್ಸೆಗಾಗಿ ಆಗಮಿಸುವ ವಿದೇಶಿಗರು ಹಾಗೂ ಅವರ ಜೊತೆಗಿರುವವರಿಗೆ ವೀಸಾ ಸೌಲಭ್ಯವನ್ನು ಕೇಂದ್ರ ಸರ್ಕಾರ ಸರಳೀಕರಣಗೊಳಿಸಿದೆ.

–ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

2019ರಲ್ಲಿ 1,09,30,355 ವಿದೇಶಿ ಪ್ರವಾಸಿಗರು ಭಾರತಕ್ಕೆ ಆಗಮಿಸಿದ್ದರು, ಇವರಲ್ಲಿ 6,97,453 ಪ್ರವಾಸಿಗರು ವೈದ್ಯಕೀಯ ಸೇವೆ ಪಡೆದಿದ್ದು, ಇದು ಶೇ.6.38 ರಷ್ಟಾಗಿದೆ. 2020ರಲ್ಲಿ 27,44,766 ಮಂದಿಯಲ್ಲಿ 1,82,945 ಜನ ವೈದ್ಯಕೀಯ ಸೇವೆ ಪಡೆದಿದ್ದು, ಇದು ಶೇ.6.67ರಷ್ಟಾಗಿದೆ. 2021ರಲ್ಲಿ 15,27,114 ಪ್ರವಾಸಿಗರು ಬಂದಿದ್ದು, 3,23,748 ಪ್ರವಾಸಿಗರು ವೈದ್ಯಕೀಯ ಸೇವೆ ಪಡೆದುಕೊಂಡಿದ್ದಾರೆ. ಇದು ಶೇ.21.20 ರಷ್ಟಾಗಿದೆ. 2022ರಲ್ಲಿ 64,37,467 ಪ್ರವಾಸಿಗರು ಭಾರತಕ್ಕೆ ಆಗಮಿಸಿದ್ದು, ಇವರಲ್ಲಿ 4,74,768 ಪ್ರವಾಸಿಗರು ವೈದ್ಯಕೀಯ ಸೇವೆ ಪಡೆದಿದ್ದು, ಇದು ಶೇ.7.38ರಷ್ಟಾಗಿದೆ.

2023ರಲ್ಲಿ ಭಾರತಕ್ಕೆ 95,20,928 ಪ್ರವಾಸಿಗರಲ್ಲಿ 6,59,356 ಜನ ವೈದ್ಯಕೀಯ ಸೇವೆ ಪಡೆದಿದ್ದು, ಇದು ಶೇ. 6.93ರಷ್ಟಾಗಿದೆ. 2024ರಲ್ಲಿ 99,51,722 ಪ್ರವಾಸಿಗರಲ್ಲಿ 6,44,387 ಜನ ವೈದ್ಯಕೀಯ ಸೇವೆ ಪಡೆದಿದ್ದು, ಇದು ಶೇ.6.48 ರಷ್ಟಾಗಿದೆ.

ಈ ವರ್ಷದ ಜನವರಿಯಿಂದ ಏಪ್ರಿಲ್‌ವರೆಗೆ 32,40,683 ಪ್ರವಾಸಿಗರು ಭಾರತಕ್ಕೆ ಆಗಮಿಸಿದ್ದು, ಇವರಲ್ಲಿ 1,31,859 ಪ್ರವಾಸಿಗರು ವೈದ್ಯಕೀಯ ಸೇವೆ ಪಡೆದಿದ್ದಾರೆ. ಇದು ಶೇಕಡ 4.07 ರಷ್ಟಾಗಿದೆ.

ದೇಶವಾರು ಪ್ರವಾಸಿಗರ ಭೇಟಿ

ಬಾಂಗ್ಲಾದೇಶದಿಂದ 2020ರಲ್ಲಿ 99,155, 2021ರಲ್ಲಿ 1,86,633, 2023ರಲ್ಲಿ 4,99,951 ಹಾಗೂ 2024ರಲ್ಲಿ 4,82,336 ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದಾರೆ.

ಇರಾಕ್‌ನಿಂದ 2020ರಲ್ಲಿ 16,647, 2021ರಲ್ಲಿ 15,357, 2022ರಲ್ಲಿ 30,701, 2023ರಲ್ಲಿ 28,758 ಮತ್ತು 2024ರಲ್ಲಿ 31,008 ಪ್ರವಾಸಿಗರು ಆಗಮಿಸಿದ್ದಾರೆ.

ಸೋಮಾಲಿಯಾದಿಂದ 2020ರಲ್ಲಿ 4,328, 2021ರಲ್ಲಿ 3,847, 2022ರಲ್ಲಿ 1,006, 2023ರಲ್ಲಿ 15,947 ಹಾಗೂ 2024ರಲ್ಲಿ 11,717 ಪ್ರವಾಸಿಗರು ಬಂದಿದ್ದಾರೆ.

ಒಮನ್‌ನಿಂದ 2020ರಲ್ಲಿ 4,328, 2021ರಲ್ಲಿ 7,610, 2022ರಲ್ಲಿ 11,121, 2023ರಲ್ಲಿ 13,397, 2024ರಲ್ಲಿ 8,921 ಪ್ರವಾಸಿಗರು ಭಾರತಕ್ಕೆ ಭೇಟಿ ನೀಡಿದ್ದಾರೆ.

ಉಜ್ಬೇಕಿಸ್ತಾನದಿಂದ 2020ರಲ್ಲಿ 1,712, 2021ರಲ್ಲಿ 3,847, 2022ರಲ್ಲಿ 6,768, 2023ರಲ್ಲಿ 7,081 ಹಾಗೂ 2024ರಲ್ಲಿ 8,921 ಪ್ರವಾಸಿಗರು ಆಗಮಿಸಿದ್ದಾರೆ.

ಬೆಂಗಳೂರಿನ ಹೆಬ್ಬಾಳ ಮೇಲ್ಸೇತುವೆ ಲೋಕಾರ್ಪಣೆ


ಬೆಂಗಳೂರಿನ ಹೃದಯ ಭಾಗದಲ್ಲಿರುವ ಹೆಬ್ಬಾಳ ಮೇಲ್ಸೇತುವೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಲೋಕಾರ್ಪಣೆಗೊಳಿಸಿದರು.

ಬೆಂಗಳೂರು, ಆ.18– ಬೆಂಗಳೂರಿನ ಹೃದಯ ಭಾಗದಲ್ಲಿರುವ ಹೆಬ್ಬಾಳ ಮೇಲ್ಸೇತುವೆ ಸೋಮವಾರ ಲೋಕಾರ್ಪಣೆಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಹಸಿರು ನಿಶಾನೆ ತೋರಿಸಿದ್ದಾರೆ.

ಮೇಲ್ಸೇತುವೆ 700 ಮೀಟರ್ ಉದ್ದವಿದ್ದು, ಕೆ.ಆರ್.ಪುರಂ ಕಡೆಯಿಂದ ಮೇಖ್ರಿ ಸರ್ಕಲ್ ಕಡೆಗೆ ಹೋಗಲು ಈ ಮೇಲ್ಸೇತುವೆ ವಾಹನ ಸವಾರರ ಓಡಾಟಕ್ಕೆ ಸಹಕಾರಿಯಾಗಲಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಈ ಫ್ಲೈ ಓವರ್ ನಿರ್ಮಿಸಿದ್ದು, ನಿರ್ಮಾಣ ಕಾರ್ಯ ಪೂರ್ಣಗೊಳಿಸಲು 31 ತಿಂಗಳಾಗಿದೆ. ಮೇಲ್ಸೇತುವೆ ನಿರ್ಮಾಣಕ್ಕೆ 80 ಕೋಟಿ ರೂ. ವೆಚ್ಚವಾಗಿದೆ.

ಉದ್ಘಾಟನೆ ಬಳಿಕ ಮಾತನಾಡಿದ ಡಿಸಿಎಂ ಡಿ.ಕೆ.ಶಿವಕುಮಾರ್, ಟ್ರಾಫಿಕ್ ಸಮಸ್ಯೆಗೆ ಪರಿಹಾರ ನೀಡಲು ಈ ಮೇಲ್ಸೇತುವೆ ಸಹಾಯಕವಾಗಲಿದೆ. ಈ ಮೇಲ್ಸೇತುವೆ ಪ್ರಸ್ತಾಪಕ್ಕೆ ಬಂದಿತ್ತು. ಆದರೆ ಕಾರ್ಯ ರೂಪಕ್ಕೆ ತಂದಿರಲಿಲ್ಲ. ನಾನು ಅಧಿಕಾರಕ್ಕೆ ಬಂದ ಮೇಲೆ ಹಣ ಒದಗಿಸಿ, ಅನುಮತಿ ನೀಡಿದ್ದೇನೆ ಎಂದರು.



ಬೈಕ್ ಓಡಿಸಿದ ಡಿಸಿಎಂ ಡಿಕೆಶಿ

ಹೆಬ್ಬಾಳ ಮೇಲ್ಸೇತುವೆ ಉದ್ಘಾಟನೆಗೂ ಮುನ್ನ ಡಿಸಿಎಂ ಡಿಕೆ ಶಿವಕುಮಾರ್ ತಮ್ಮ ನೆಚ್ಚಿನ ಯೆಜ್ಡಿ–1981 ಬೈಕ್ ಹತ್ತಿ ಹೆಬ್ಬಾಳ ನೂತನ ಮೇಲ್ಸೇತುವೆ ಮೇಲೆ ಸವಾರಿ ಮಾಡಿ ತಮ್ಮ ಕಾಲೇಜು ದಿನಗಳನ್ನು ನೆನಪಿಸಿಕೊಂಡರು.

ವಿದ್ಯುತ್ ಉತ್ಪಾದನೆಗೆ ‘ತೇಲುವ ಸೌರ ವಿದ್ಯುತ್ ಫಲಕ’ ಅಳವಡಿಕೆಗೆ ಸರ್ಕಾರ ಸಿದ್ಧತೆ: ಯಲಹಂಕದ 2 ಕೆರೆಗಳ ಆಯ್ಕೆ



ಬೆಂಗಳೂರು,ಆ.18–ಕೆರೆಗಳಲ್ಲಿ ತೇಲುವ ಸೌರ ವಿದ್ಯುತ್ ಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದಕ್ಕಾಗಿ ಯಲಹಂಕದ ಎರಡು ಕೆರೆಗಳನ್ನು ಆಯ್ಕೆ ಮಾಡಿದೆ ಎಂದು ತಿಳಿದುಬಂದಿದೆ.

ಯಲಹಂಕದ ದೊಡ್ಡಬೊಮ್ಮಸಂದ್ರ ಮತ್ತು ರಾಚೇನಹಳ್ಳಿಯ ಎರಡು ಕೆರೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದ್ದು, ಈ ಕೆರೆಗಳಲ್ಲಿ ಶೇ.10ರಷ್ಟು ತೇಲುವ ಫೋಟೊ ವೋಲ್ಟಾಯಿಕ್ (FPV) ಫಲಕಗಳ ಅಳವಡಿಸಿ, 20 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ಮುಂದಾಗಿದೆ ಎಂದು ತಿಳಿದುಬಂದಿದೆ. ಈ ಯೋಜನೆಗೆ ಕರ್ನಾಟಕ ಟ್ಯಾಂಕ್ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ದೊರೆತಿದ್ದು, ಫಲಕಗಳನ್ನು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಲಿಮಿಟೆಡ್ ಸ್ಥಾಪಿಸಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿಧಾನಸಭೆಯಲ್ಲಿ ಶಿವಾಜಿನಗರ ಶಾಸಕ ರಿಜ್ವಾನ್ ಹರ್ಷದ್ ಅವರ ಪ್ರಶ್ನೆಗೆ ಉತ್ತರಿಸಿದರು.

ಈ ಯೋಜನೆಯ ಫಲಿತಾಂಶದ ಆಧಾರದ ಮೇಲೆ ರಾಜ್ಯದಾದ್ಯಂತ ಇತರೆ ಕೆರೆಗಳಲ್ಲಿ ಸೌರ ಫಲಕಗಳನ್ನು ಸ್ಥಾಪಿಸಲಾಗುವುದು ಎಂದು ಡಿಸಿಎಂ ಹೇಳಿದರು.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಕಚೇರಿಯಲ್ಲಿ 79ನೇ ಸ್ವಾತಂತ್ರ್ಯೋತ್ಸವ...


ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಕಚೇರಿಯಲ್ಲಿ 79ನೇ ಸ್ವಾತಂತ್ರ್ಯ ದಿನ ಆಚರಿಸಲಾಯಿತು. ಬ್ಯಾಂಕಿನ ಅಧ್ಯಕ್ಷ ಜೆ.ಯೋಗೇಶ್ ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಬ್ಯಾಂಕ್ ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ್, ಹರೀಶ್‌ಕುಮಾರ್, ಜಿ.ನಿರಂಜನ್, ಆರ್.ಸೋಮಣ್ಣ, ಪ್ರಮೀಳಾ ಲೋಕೇಶ್, ಕೆ.ಗಿರೀಶ್, ಕಾರ್ಯದರ್ಶಿ ಹರ್ಷಿತ್‌ಗೌಡ ಹಾಗೂ ಬ್ಯಾಂಕ್ ನೌಕರರ ವರ್ಗ ಉಪಸ್ಥಿತರಿದ್ದರು.

ಶೀಘ್ರವೇ ಪಡಿತರ ಕಾರ್ಡ್ ಪರಿಷ್ಕರಣೆ



ಬೆಂಗಳೂರು, ಆ.18(ಕೆಎಂಶಿ)–ವಿಧಾನಸಭಾ ಅಧಿವೇಶನ ಪೂರ್ಣಗೊಂಡ ಕೂಡಲೇ ರಾಜ್ಯದಲ್ಲಿ ಪಡಿತರ ಕಾರ್ಡ್‌ಗಳನ್ನು ಪರಿಷ್ಕರಣೆ ಮಾಡಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಮೇಲ್ಮನೆಗೆ ತಿಳಿಸಿದ್ದಾರೆ. ಪ್ರಶ್ನೋತ್ತರ ವೇಳೆಯಲ್ಲಿ ಪ್ರತಾಪ್ ಸಿಂಹ ನಾಯಕ್ ಹಾಗೂ ಡಾ.ಯತೀಂದ್ರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ 15 ಲಕ್ಷ ಕಾರ್ಡ್‌ಗಳ ಪರಿಷ್ಕರಣೆಯ ಅವಶ್ಯಕತೆ ಇದೆ ಎಂದರು. ಹೊಸದಾಗಿ 3.27 ಲಕ್ಷ ಮಂದಿ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ್ದಾರೆ, ಎರಡು ವರ್ಷ ಕಳೆದಿದ್ದರೂ ಇದುವರೆಗೂ ಕಾರ್ಡ್ ವಿತರಣೆ ಮಾಡಲಾಗಿಲ್ಲ. ದೇಶದಲ್ಲಿ ಅತೀ ಹೆಚ್ಚು ಅಂದರೆ ಶೇ.74 ಬಿಪಿಎಲ್ ಕಾರ್ಡ್‌ದಾರರು ನಮ್ಮ ರಾಜ್ಯದಲ್ಲಿದ್ದಾರೆ. ಬೇರೆ ರಾಜ್ಯಗಳು ಶೇ.50ರಷ್ಟು ದಾಟಿಲ್ಲ. ನಮ್ಮ ರಾಜ್ಯದಲ್ಲಿ ಅರ್ಹತೆ ಇಲ್ಲದ 15 ಲಕ್ಷ ಬಿಪಿಎಲ್ ಕಾರ್ಡ್‌ದಾರರಿದ್ದಾರೆ. ಅವುಗಳ ಪರಿಷ್ಕರಣೆ ಮಾಡಿ ಎಪಿಎಲ್ ಕಾರ್ಡ್ ನೀಡಿದರೆ ಹೊಸದಾಗಿ 3.27 ಲಕ್ಷ ಮಂದಿಗೆ ಬಿಪಿಎಲ್ ಕಾರ್ಡ್ ಕೊಡುವುದರಲ್ಲಿ ತೊಂದರೆ ಎದುರಾಗುವುದಿಲ್ಲ ಎಂದು ಹೇಳಿದರು.

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ, ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನ

ಆಕ್ಷೇಪಣೆಗಳ ಆಹ್ವಾನ

ಮೈಸೂರು,ಆ.18–2022ರಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳನ್ನು ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಯಾದ ಹಾಗೂ ಆಯ್ಕೆಯಾಗದ ಪುಸ್ತಕಗಳ ಪ್ರದರ್ಶನವನ್ನು ಆ.20ರಿಂದ 22ರವರೆಗೆ ಡಾ.ವಿಷ್ಣುವರ್ಧನ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರ, ಎಂ.ಸಿ. ಬಡಾವಣೆ, (ಡಾ.ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಹತ್ತಿರ) ವಿಜಯನಗರ, ಬೆಂಗಳೂರು, ಇಲ್ಲಿ ಏರ್ಪಡಿಸಲಾಗಿದ್ದು, ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರು ಆಕ್ಷೇಪಣೆಗಳಿದ್ದಲ್ಲಿ ಆ.30ರ ಸಂಜೆ 5.30 ರೊಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯಗೋಪುರ 4ನೇ ಮಹಡಿ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇಲ್ಲಿಗೆ ಲಿಖಿತ ಮನವಿಗಳನ್ನು ಸಲ್ಲಿಸಬಹುದಾಗಿದೆ.

ಭಗವಂತನ ಒಲಿಸಿಕೊಳ್ಳಲು ಭಕ್ತಿಯೇ ಬಂಡವಾಳ...

ಪ್ರವಚನಕಾರ ಪ್ರೊ.ಕೆ.ಅನಂತರಾಮು



ಮೈಸೂರು, ಆ.18– ಭಗವಂತನನ್ನು ಒಲಿಸಿಕೊಳ್ಳಲು ಭಕ್ತಿಯೇ ಬಂಡವಾಳ ಎಂದು ಪ್ರೊ.ಕೆ.ಅನಂತರಾಮು ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಶ್ರಾವಣ ಮಾಸದ 22ನೇ ದಿನದ ಪ್ರವಚನ ನೀಡುತ್ತ ತಿಳಿಸಿದರು.

ಲಕ್ಕಣ್ಣದಂಡೇಶನ ಶಿವತತ್ವ ಚಿಂತಾ ಮಣಿಯಲ್ಲಿ ವಿವರಿಸಿರುವಂತೆ 63 ಪುರಾತನರು ಭಕ್ತಿಯಿಂದ ವೈವಿಧ್ಯಮಯವಾಗಿ ಶಿವನನ್ನು ಒಲಿಸಿಕೊಳ್ಳುತ್ತಾರೆ. ಒಬ್ಬರ ಭಕ್ತಿಗಿಂತ ಇನ್ನೊಬ್ಬರ ಭಕ್ತಿ ವಿಭಿನ್ನವಾಗಿತ್ತು. ಚೋಳಮಂಡಲದಲ್ಲಿ ಮುರುಗ ನಾಯನಾರ್ ಎಂಬ ಶಿವ ಭಕ್ತನಿದ್ದನು. ಹುಟ್ಟಿನಿಂದಲೇ ಶಿವನಲ್ಲಿ ಅಪಾರವಾದ ಭಕ್ತಿಯುಳ್ಳವನಾಗಿದ್ದನು. ಜೀವನ ಸಾಗಿಸಲು ಅಕ್ಕರೆಯಿಂದ ದನಗಳನ್ನು ಕಾಯುತ್ತಿದ್ದನು.

ಈ ಸಂದರ್ಭದಲ್ಲಿ ತನ್ನ ಕೊಳಲಿನ ನಾದದಿಂದಲೇ ನಮಃ ಶಿವಾಯ ಎಂಬ ಪಂಚಾಕ್ಷರ ಮಂತ್ರದ ಮೂಲಕವೇ ಶಿವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ. ಮಧುರೈನ ಅಳಗಾಂಡಮೂರ್ತಿ ಎಂಬ ಭಕ್ತನು ಅಲ್ಲಿನ ಏಕಾಂಬರನಾಥ ದೇವಾಲಯಕ್ಕೆ ಪ್ರತಿದಿನ ಶ್ರೀಗಂಧವನ್ನು ತೇಯ್ದು ಪೂಜೆಗೆ ನೀಡುತ್ತಿದ್ದನು. ಶ್ರೀಗಂಧವನ್ನು ಖರೀದಿಸಲು ತನ್ನ ಹತ್ತಿರವಿದ್ದ ಚಿನ್ನ ಹಾಗೂ ಆಸ್ತಿಯನ್ನೆಲ್ಲ ಮಾರಿದನು. ಸಂಪತ್ತೆಲ್ಲಾ ಖಾಲಿಯಾದಂತೆ ಕೊನೆಗೆ ಆತನಿಗೆ ದಿಕ್ಕು ತೋಚದಂತಾಯಿತು. ಆತನ ಹೃದಯಾಂತರಾಳ ನಿನ್ನ ಮೊಣಕೈಯಲ್ಲೇ ಶ್ರೀಗಂಧವಿದೆ ಎನ್ನುತ್ತದೆ. ಮೊಣಕೈಯನ್ನೇ ತೇಯಲು ಶುರು ಮಾಡಿದನು. ಅಪಾರರಕ್ತ ಹರಿಯಿತು, ಬಹಳ ಹೊತ್ತಿನ ನಂತರ ಆತನ ಕೈಯಲ್ಲಿ ಶ್ರೀಗಂಧ ಹೊಮ್ಮಿತು. ದೇಹ ವನ್ನೇ ತೇಯ್ದು ಗಂಧವನ್ನು ಶಿವನಿಗೆ ಅರ್ಪಿಸಿದನು. ಆತನ ಭಕ್ತಿಗೆ ಶಿವ ಪ್ರತ್ಯಕ್ಷನಾಗಿ ಅನಂತ ಸಂಪತ್ತು ಪ್ರಾಪ್ತಿಯಾಗಲೆಂದು ಆಶೀರ್ವದಿಸಿದನು ಎಂದರು.

ಬಿ.ರೇಖಾಗೆ ಪಿಹೆಚ್.ಡಿ ಪದವಿ



ಮೈಸೂರು, ಆ.18–ರೇಖಾ ಬಿ. ಅವರು ಡಾ.ಆರ್.ಕಿರಣ್ ಅವರ ಮಾರ್ಗದರ್ಶನದಲ್ಲಿ ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಸನ್ಮಾನ...


ಮೈಸೂರು ತಾಲೂಕು ಜಯಪುರ ಹೋಬಳಿಯ ಡಿ.ಸಾಲುಂಡಿ ಗ್ರಾಮದ ಶನೇಶ್ವರ ಸ್ವಾಮಿಯವರ 18ನೇ ವಾರ್ಷಿಕೋತ್ಸವ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಮಾಜ ಸೇವಕ ಎಸ್.ಶ್ರೀಕಾಂತ್, ರತ್ನಮ್ಮ, ಸರಸ್ವತಿ, ನೂತನ ಎಸ್.ಆರ್ಯ ಅವರನ್ನು ಶನೇಶ್ವರ ಸ್ವಾಮಿ ಭಕ್ತ ಮಂಡಳಿ ಸದಸ್ಯರು ಆತ್ಮೀಯವಾಗಿ ಸನ್ಮಾನಿಸಿದರು. ಮುಖಂಡ ಕೃಷ್ಣಮೂರ್ತಿ, ಅರ್ಚಕರು ಇದ್ದರು.

ಮತಗಳ್ಳತನದಿಂದ ಬಿಜೆಪಿ ಅಧಿಕಾರಕ್ಕೆ ಆರೋಪಿಸಿ ಕೆಆರ್ ಕ್ಷೇತ್ರ ಯುವ ಕಾಂಗ್ರೆಸ್ ಪ್ರತಿಭಟನೆ

ಮೈಸೂರು, ಆ.18(ಎಂಕೆ)– ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತಗಳ್ಳತನ ಮಾಡಿ ಅಧಿಕಾರಕ್ಕೆ ಬಂದಿದೆ ಎಂದು ಆರೋಪಿಸಿ, ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಬಿಜೆಪಿ ವಿರುದ್ಧ ದಿಕ್ಕಾರ ಕೂಗಿ, ಸ್ಟಾಪ್ ವೋಟ್ ಚೋರ್... ಸಂವಿಧಾನ ದುರ್ಬಳಕ್ಕೆ ಬಿಜೆಪಿ ಹುನ್ನಾರ... ಎಂಬಿತ್ಯಾದಿ ಪೋಸ್ಟರ್‌ಗಳನ್ನು ಆಟೋಗಳಿಗೆ ಅಂಟಿಸಿ, ಕಿಡಿಕಾರಿದರು.

ನಂತರ ಮಾತನಾಡಿದ ಅವರು, ಬಿಜೆಪಿ ಮತಗಳ್ಳತನ ಮಾಡಿ ದೇಶದಲ್ಲಿ ಅಧಿಕಾರ ಹಿಡಿದಿದೆ. ಬಿಹಾರದಲ್ಲಿ 65 ಲಕ್ಷ ಮತದಾರರನ್ನು ಕೈ ಬಿಟ್ಟಿದ್ದಾರೆ. ಕಾಂಗ್ರೆಸ್ ಪರ ಇರುವ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಬಡವರ ಮತಗಳನ್ನು ತೆಗೆದು ಹಾಕಿ ತಮಗೆ ಬೇಕಾದವರನ್ನು ಎಲ್ಲಾ ಕಡೆ ಸೇರಿಸಿದ್ದಾರೆ ಎಂದು ದೂರಿದರು.

ಹಾಗಾಗಿ ನಾವೆಲ್ಲ ಬೂತ್ ಮಟ್ಟದಲ್ಲಿ ಎಲ್ಲೆಲ್ಲಿ ಮತಗಳ್ಳತನ ಆಗಿದೆ ಎಂಬುದನ್ನು ಪರಿಶೀಲನೆ ಮಾಡಬೇಕಿದೆ. ಇಲ್ಲವಾದರೆ ಇದೇ ರೀತಿ ಮೋಸ ಮಾಡಿ ಅಧಿಕಾರ ಹಿಡಿಯುತ್ತಲೇ ಇರುತ್ತಾರೆ. ಈಗಾಗಲೇ ರಾಹುಲ್ ಗಾಂಧಿ, ಸಾಕ್ಷಿ ಸಮೇತ ದೇಶದ ಜನತೆಯ ಮುಂದೆ ಸತ್ಯವನ್ನು ಹೇಳಿದ್ದಾರೆ. ಪ್ರಜಾಪ್ರಭುತ್ವಕ್ಕೆ ಮೋಸ ಮಾಡಿ ಬಿಜೆಪಿ ಗೆದ್ದಿದ್ದಾರೆ. ಮಹಾರಾಷ್ಟ್ರದಲ್ಲಿ ಮತಗಳ್ಳತನ ನಡೆದಿದೆ. ಇದನ್ನು ನಾವು ಜನರಿಗೆ ತಿಳಿಸಿ ಕೊಡಬೇಕು. ಜನರಿಗೆ ಅರ್ಥ ಮಾಡಿಸಬೇಕು ಎಂದರು.


ಕೃಷ್ಣರಾಜ ಕ್ಷೇತ್ರದ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಹೊಯ್ಸಳ, ನವೀನ್, ರೋಹಿತ್ ಸಿಂಗ್, ಶಂಕರ್, ಗಜೇಂದ್ರ, ವಿವೇಕ್, ಮನು, ಅಕ್ಷತಾ, ಧರ್ಮೇಂದ್ರ, ಆಶ್ರಯ ಸಮಿತಿ ಸದಸ್ಯರಾದ ಮಹಮ್ಮದ್ ಫಾರೂಖ್, ಹರವೆ ಸಿದ್ದು, ಕಾರ್ಯದರ್ಶಿ ಡೈರಿ ವೆಂಕಟೇಶ್, ಸೇವಾದಳ ಮೋಹನ್, ರವೀಶ್, ಕುಮಾರ್, ಕಲೀಂ ಷರೀಫ್, ನಾಸೀರ್ ಮತ್ತಿತರಿದ್ದರು.



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಕೃಷ್ಣರಾಜ ಕ್ಷೇತ್ರದ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ದೇಶ - ವಿದೇಶ

ಭೀಕರ ಕಾರು ಅಪಘಾತ: ರಷ್ಯಾದ ಮಾಜಿ ಬ್ಯೂಟಿ ಕ್ವೀನ್, ರೂಪದರ್ಶಿ ಸಾವು



ಮಾಸ್ಕೋ: ರಷ್ಯಾದ ಮಾಜಿ ಬ್ಯೂಟಿ ಕ್ವೀನ್, ರೂಪದರ್ಶಿ ಕ್ಸೆನಿಯಾ ಅಲೆಕ್ಸಾಂಡ್ರೋವಾ ಅಪಘಾತದಲ್ಲಿ ಸಾವನ್ನಪ್ಪಿರುವ ಘಟನೆ ರಷ್ಯಾದ ಒಬ್ಲಾಸ್ಟ್‌ನಲ್ಲಿ ನಡೆದಿದ್ದು, ಈಕೆ 4 ತಿಂಗಳ ಹಿಂದಷ್ಟೇ ವಿವಾಹವಾಗಿದ್ದರು ಎಂದು ವರದಿ ತಿಳಿಸಿದೆ.

ನ್ಯೂಯಾರ್ಕ್ ಪೋಸ್ಟ್ ವರದಿ ಪ್ರಕಾರ, 2017ರ ಮಾಜಿ ಮಿಸ್ ರಷ್ಯಾ ಕಿರೀಟವನ್ನು ತಮ್ಮ ಮುಡಿಗೇರಿಸಿಕೊಂಡಿದ್ದ ಕ್ಸೆನಿಯಾ ಕಾರು ಅಪಘಾತದಲ್ಲಿ ತಲೆಗೆ ಗಂಭೀರವಾಗಿ ಗಾಯವಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿರುವುದಾಗಿ ವಿವರಿಸಿದೆ. ಜುಲೈ 5ರಂದು ಅಲೆಕ್ಸಾಂಡ್ರೋವಾ ಮತ್ತು ಪತಿ ಝುವ್ ಜತೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಅಲೆಕ್ಸಾಂಡ್ರೋವಾ ಮೆದುಳಿಗೆ ಗಂಭೀರವಾದ ಹೊಡೆತ ಬಿದ್ದಿರುವುದಾಗಿ ವರದಿ ತಿಳಿಸಿದೆ. ಗಂಭೀರವಾಗಿ ಗಾಯಗೊಂಡಿದ್ದ ಅಲೆಕ್ಸಾಂಡ್ರೋವಾ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಕೋಮಾಕ್ಕೆ ಜಾರಿದ್ದ ಆಕೆ ಚಿಕಿತ್ಸೆ ಫಲಕಾರಿಯಾಗದೇ ಆ.15ರಂದು ಕೊನೆಯುಸಿರೆಳೆದಿದ್ದು, ಪತಿ ಪ್ರಾಣಾಪಾಯದಿಂದ ಪಾರಾಗಿರುವುದಾಗಿ ವರದಿ ವಿವರಿಸಿದೆ.

ಕರ್ತವ್ಯಕ್ಕೆ ತೆರಳುತ್ತಿದ್ದ ಯೋಧನ ಮೇಲೆ ಟೋಲ್ ಸಿಬ್ಬಂದಿ ಹಲ್ಲೆ



ಮೀರತ್: ಉತ್ತರ ಪ್ರದೇಶದ ಮೀರತ್ ಜಿಲ್ಲೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ತೆರಳುತ್ತಿದ್ದ ಯೋಧನ ಮೇಲೆ ಟೋಲ್ ಸಿಬ್ಬಂದಿ ಗಂಭೀರವಾಗಿ ಹಲ್ಲೆ ನಡೆಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸರೂರ್‌ಪುರ ಪ್ರದೇಶದ ಭುನಿ ಟೋಲ್ ಪ್ಲಾಜಾದಲ್ಲಿ ಭಾನುವಾರ ಈ ಘಟನೆ ನಡೆದಿದೆ. ಪ್ರಕರಣ ಸಂಬಂಧ ಆರು ಮಂದಿ ಟೋಲ್ ಸಿಬ್ಬಂದಿಯನ್ನು ಬಂಧಿಸಲಾಗಿದೆ.

ಗೋಟ್ಕಾದ ಯೋಧ ಕಪಿಲ್ ರಜೆ ಮುಗಿಸಿ ಕರ್ತವ್ಯಕ್ಕೆ ಹಾಜರಾಗಲು ತೆರಳುತ್ತಿದ್ದರು. ಟೋಲ್ ಪ್ಲಾಜಾದಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದ ಪರಿಣಾಮ ಕಪಿಲ್‌ರ ಕಾರು ದಟ್ಟಣೆಯಲ್ಲಿ ಸಿಲುಕಿಕೊಂಡಿತ್ತು. ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಒತ್ತಾಯಿಸಿದ್ದರು. ಈ ವೇಳೆ ಕಪಿಲ್ ಹಾಗೂ ಟೋಲ್ ಸಿಬ್ಬಂದಿ ನಡುವೆ ವಾಗ್ವಾದ ನಡೆದಿದ್ದು, ಟೋಲ್ ಸಿಬ್ಬಂದಿ ಕಪಿಲ್‌ರ ಮೇಲೆ ಗಂಭೀರವಾಗಿ ಹಲ್ಲೆ ನಡೆಸಿದ್ದಾರೆ. ಕಪಿಲ್ ಪರವಾಗಿ ಅವರ ಕುಟುಂಬದವರು ಪ್ರಕರಣ ದಾಖಲಿಸಿದ್ದಾರೆ. ಸಿಸಿಟಿವಿ ದೃಶ್ಯಾವಳಿ ಆಧರಿಸಿ 5 ಮಂದಿಯನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಎಸ್‌ಪಿ ರಾಕೇಶ್‌ಕುಮಾರ್ ಮಿಶ್ರಾ ತಿಳಿಸಿದ್ದಾರೆ.

ಫೇಸ್‌ಬುಕ್ ಲೈವ್‌ನಲ್ಲಿದ್ದಾಗಲೇ ವ್ಯಕ್ತಿ ಹತ್ಯೆ



ವಾಷಿಂಗ್ಟನ್: ಫೇಸ್‌ಬುಕ್‌ನ ನೇರ ಪ್ರಸಾರದಲ್ಲಿದ್ದ ವ್ಯಕ್ತಿಯೊಬ್ಬನನ್ನು ಗುಂಡಿಟ್ಟು ಹತ್ಯೆ ಮಾಡಿರುವ ಘಟನೆ ನಡೆದಿದೆ. ಆತನ ಅಂತಿಮ ಕ್ಷಣಗಳನ್ನು ಸೆರೆಹಿಡಿಯಲಾಗಿರುವ ವಿಡಿಯೋ ಇದೀಗ ವೈರಲ್ ಆಗಿದೆ. ಹೌದು, 42 ವರ್ಷದ ವ್ಯಕ್ತಿಯೊಬ್ಬರು ಫೇಸ್‌ಬುಕ್‌ನಲ್ಲಿ ನೇರಪ್ರಸಾರ ಮಾಡುತ್ತಿದ್ದ ವೇಳೆ ಕೊಲ್ಲಲ್ಪಟ್ಟಿದ್ದಾರೆ. ಅಮೆರಿಕದ ಚಿಕಾಗೊದ ಸೌತ್ ಆಸ್ಟಿನ್‌ನಲ್ಲಿ ಈ ಘಟನೆ ನಡೆದಿದ್ದು, ಚಿಕಾಗೊ ಪೊಲೀಸರು ಈ ಘಟನೆ ಸಂಬಂಧ ತನಿಖೆ ನಡೆಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗುತ್ತಿರುವ ವಿಡಿಯೊದಲ್ಲಿ ಕೆವಿನ್ ವ್ಯಾಟ್ಸನ್ ಎಂಬುವವರು ಕಾರಿನಲ್ಲಿ ಕುಳಿತು ಫೇಸ್‌ಬುಕ್‌ನಲ್ಲಿ ನೇರಪ್ರಸಾರ ಕೈಗೊಂಡಿದ್ದರು. ಈ ವೇಳೆ ಅವರನ್ನು ಯಾರೋ ಕೆಳಗಿಳಿಯುವಂತೆ ಹೇಳಿದ್ದಾರೆ. ಕೆಲವು ಸೆಕೆಂಡುಗಳ ನಂತರ ಗುಂಡಿನ ಸದ್ದು ಕೇಳಿಬಂದಿದೆ. ದುಷ್ಕರ್ಮಿಗಳು ವ್ಯಾಟ್ಸನ್‌ಗೆ ಫೈರಿಂಗ್ ಮಾಡಿ ಪರಾರಿಯಾಗಿದ್ದಾರೆ. ದಕ್ಷಿಣ ಆಸ್ಟಿನ್‌ನ ವೆಸ್ಟ್ ಮ್ಯಾಡಿಸನ್ ಸ್ಟ್ರೀಟ್‌ನ 5000 ಬ್ಲಾಕ್‌ನಲ್ಲಿ ಆಗಸ್ಟ್ 13ರ ಸಂಜೆ 6:14ರ ಸುಮಾರಿಗೆ ಗುಂಡಿನ ದಾಳಿ ನಡೆದಿದೆ. ವ್ಯಾಟ್ಸನ್ ಕಾರಿನಲ್ಲಿ ಕುಳಿತಿದ್ದಾಗ ಮತ್ತೊಂದು ವಾಹನ ಸಮೀಪಿಸುತ್ತಿತ್ತು. ಈ ವೇಳೆ ದುಷ್ಕರ್ಮಿಗಳು ಗುಂಡು ಹಾರಿಸಲು ಪ್ರಾರಂಭಿಸಿದರು. ವ್ಯಾಟ್ಸನ್ ಅವರ ಅಂತಿಮ ಕ್ಷಣಗಳನ್ನು ಫೇಸ್‌ಬುಕ್ ಲೈವ್‌ನಲ್ಲಿ ಸೆರೆ ಹಿಡಿಯಲಾಗಿದೆ.

ಬೆಂಗಳೂರಲ್ಲಿ ಶವಪೆಟ್ಟಿಗೆಯ ತಪ್ಪು ಸ್ಟಿಕ್ಕರ್: ಒಡಿಶಾದಲ್ಲಿ ಶವ ಅದಲು ಬದಲು



ಬಾಲ್ವೇಶ್ವರ: ಬೆಂಗಳೂರಿನಲ್ಲಿ ಮೃತಪಟ್ಟ ಒಡಿಶಾದ ವ್ಯಕ್ತಿಯ ಶವಪೆಟ್ಟಿಗೆ ಮೇಲೆ ತಪ್ಪಾದ ಚೀಟಿ ಅಂಟಿಸಿದ್ದರಿಂದ, ಬೇರೊಬ್ಬ ವ್ಯಕ್ತಿಯ ಮೃತದೇಹ ಸ್ವೀಕರಿಸಿದ್ದೇವೆ ಎಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ.

ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಮೇಲ್ವಿಚಾರಕರಾಗಿ ಕೆಲಸ ಮಾಡುತ್ತಿದ್ದ ರಾಕೇಶ್ ಶಾ (21) ಆ.15ರಂದು ವಿದ್ಯುತ್ ಅವಘಡದಿಂದ ಮೃತಪಟ್ಟಿದ್ದರು. ಪಶ್ಚಿಮ ಬಂಗಾಳದ ಸಿಲಿಗುರಿ ಮೂಲದ ಮತ್ತೊಬ್ಬ ವ್ಯಕ್ತಿಯ ಮೃತದೇಹದೊಂದಿಗೆ ರಾಕೇಶ್ ಅವರ ಮೃತದೇಹವನ್ನೂ ಒಂದೇ ಆಂಬ್ಯುಲೆನ್ಸ್‌ನಲ್ಲಿ ಸಾಗಿಸಲಾಗಿತ್ತು. ರಾಕೇಶ್ ಅವರ ಮೃತದೇಹವೆಂದು ಗುರುತು ಮಾಡಲಾಗಿದ್ದ ಶವಪೆಟ್ಟಿಗೆಯನ್ನು ಮುಲಿಸಿಂಗ್ ಗ್ರಾಮದಲ್ಲಿರುವ ಅವರ ಕುಟುಂಬಕ್ಕೆ ಹಸ್ತಾಂತರಿಸಿ ಆಂಬುಲೆನ್ಸ್ ಭಾನುವಾರ ಸಿಲಿಗುರಿಗೆ ತೆರಳಿದೆ. ಆದರೆ ಶವಪೆಟ್ಟಿಗೆಯನ್ನು ತೆರೆದಾಗ ಅದರಲ್ಲಿರುವ ಮೃತದೇಹವು ರಾಕೇಶ್ ಅವರದ್ದಲ್ಲ ಎಂದು ಗೊತ್ತಾಗಿದೆ. ಕೂಡಲೇ, ಶವಪೆಟ್ಟಿಗೆ ರವಾನಿಸಲು ವ್ಯವಸ್ಥೆ ಮಾಡಿದ ಕಂಪನಿ ಸಂಪರ್ಕಿಸಿ, ಸಿಲಿಗುರಿಗೆ ತೆರಳುತ್ತಿದ್ದ ಆಂಬುಲೆನ್ಸ್ ಅನ್ನು ಹಿಂದೆ ಕರೆಸಲಾಯಿತು. ಡಿಸ್‌ಚಾರ್ಜ್ ಪಾಯಿಂಟ್‌ನಲ್ಲಿ ತಪ್ಪು ಚೀಟಿಗಳನ್ನು ಅಂಟಿಸಿದ್ದರಿಂದ ಈ ಅವ್ಯವಸ್ಥೆ ಸಂಭವಿಸಿದೆ ಎಂದು ಕುಟುಂಬ ಸದಸ್ಯರು ಆರೋಪಿಸಿದ್ದಾರೆ.

ಭಾರತೀಯ ಮೂಲದ ಕೃಷಾಂಗಿ ಮೆಶ್ರಮ್: 18ಕ್ಕೆ ಪದವಿ; 21ಕ್ಕೆ ಬ್ರಿಟನ್‌ನ ಸಾಲಿಸಿಟರ್



ಇಂಗ್ಲೆಂಡ್: ಭಾರತೀಯ ಮೂಲಕ 21 ವರ್ಷದ ಕಾನೂನು ಪದವೀಧರೆ ಕೃಷಾಂಗಿ ಮೆಶ್ರಾಮ್ ಅವರು ಇಂಗ್ಲೆಂಡ್ ಮತ್ತು ವೇಲ್ಸ್‌ನ ಸಾಲಿಸಿಟರ್ ಆಗಿ ನೇಮಕಗೊಂಡಿದ್ದು, ಈ ಹುದ್ದೆ ಪಡೆದ ಅತ್ಯಂತ ಕಿರಿಯ ವಕೀಲೆ ಎಂದೆನಿಸಿಕೊಂಡಿದ್ದಾರೆ. ಪಶ್ಚಿಮ ಬಂಗಾಳ ಮೂಲದವರಾದ ಕೃಷಾಂಗಿ ಸದ್ಯ ಸಂಯುಕ್ತ ಅರಬ್ ಸಂಸ್ಥಾನದಲ್ಲಿ ನೆಲೆಸಿದ್ದಾರೆ. ತಮ್ಮ 15ನೇ ವಯಸ್ಸಿನಲ್ಲಿ ಇವರು ಮಿಲ್ಟನ್‌ನ ಕೀನ್ಸ್ ಮುಕ್ತ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ವ್ಯಾಸಂಗ ಆರಂಭಿಸಿದರು. 18ನೇ ವಯಸ್ಸಿನಲ್ಲಿ ಮೊದಲ ದರ್ಜೆಯಲ್ಲಿ ಹಾನರ್ಸ್ ಪದವಿ ಪಡೆದರು.

ನಾನು 15 ವರ್ಷದವಳಿದ್ದಾಗ ಕಾನೂನು ಪದವಿ ದಾಖಲಾಗಲು ಮುಕ್ತ ವಿವಿ ಅವಕಾಶ ಮಾಡಿಕೊಟ್ಟಿತು. ಇದಕ್ಕಾಗಿ ನಾನು ಅವರಿಗೆ ಧನ್ಯವಾದ ಅರ್ಪಿಸುತ್ತೇನೆ. ಈ ಅವಧಿಯಲ್ಲಿ ಕಾನೂನು ವೃತ್ತಿಗೆ ನಾನು ಅಡಿಪಾಯ ಹಾಕಿಕೊಳ್ಳುವುದರ ಜತೆಗೆ, ಈ ಕ್ಷೇತ್ರದೆಡೆಗೆ ಅಪಾರವಾದ ಆಸಕ್ತಿ ಹಾಗೂ ಬದ್ಧತೆಯನ್ನು ಬೆಳೆಸಿಕೊಳ್ಳಲು ಅವಕಾಶವಾಯಿತು ಎಂದಿದ್ದಾರೆ. ಈ ಕುರಿತು ಅವರು ತಮ್ಮ ಲಿಂಕ್‌ಡಿನ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ. ಇದೇ ವಿಷಯವಾಗಿ ಕಳೆದ ವಾರ ಲೇಖನ ಪ್ರಕಟಿಸಿದ್ದ ಮುಕ್ತ ವಿಶ್ವವಿದ್ಯಾಲಯ, ಕಾನೂನು ಪದವೀಧರೆ ಕೃಷಾಂಗಿ ಮತ್ತೊಮ್ಮೆ ಇತಿಹಾಸ ನಿರ್ಮಿಸಿದ್ದಾರೆ ಎಂದಿತ್ತು.

ಮುಂದುವರೆದ ಮಳೆ

ಆರೆಂಜ್ ಅಲರ್ಟ್ ವಿಸ್ತರಣೆ

ಮಡಿಕೇರಿ: ಜಿಲ್ಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಿದ್ದು, ವಿವಿಧ ಕಡೆಗಳಲ್ಲಿ ಮಳೆ ಮುಂದುವರೆದಿದೆ. ಈ ನಡುವೆಯೇ ಜಿಲ್ಲೆಯಾದ್ಯಂತ ಆ.20ರವರೆಗೆ ಈ ಮುನ್ಸೂಚನೆ ಜಾರಿಯಲ್ಲಿರಲಿದೆ. ಗಾಳಿ ಸಹಿತ ಮಳೆ ಸುರಿದ ಪರಿಣಾಮ ಮಡಿಕೇರಿ ಚೆಟ್ಟಳ್ಳಿ ರಸ್ತೆಗೆ ಅಡ್ಡಲಾಗಿ ಮರ ಬಿದ್ದು ಕೆಲ ಕಾಲ ವಾಹನ ಸಂಚಾರ ವ್ಯತ್ಯಯವಾಗಿತ್ತು. ಸ್ಥಳೀಯಾಡಳಿತ ಮತ್ತು ಸಾರ್ವಜನಿಕರು ಮರ ತೆರವು ಮಾಡಿ ವಾಹನ ಸಂಚಾರಕ್ಕೆ ಅನುವು ಮಾಡಿದರು. ಗಾಳಿಯ ತೀವ್ರತೆಗೆ ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವ ಬಗ್ಗೆ ವರದಿಯಾಗಿದೆ. ಜಿಲ್ಲೆಯಲ್ಲಿ ಮಳೆಯ ಸಹಿತ ದಟ್ಟ ಮಂಜು ಮುಸುಕಿದ ಮೈ ಕೊರೆಯುವ ಚಳಿಯ ವಾತಾವರಣ ಕಂಡು ಬಂದಿದೆ.

ಇಂದೂ ರಜೆ

ಮಳೆ ಮುಂದುವರೆದಿರುವ ಹಿನ್ನೆಲೆಯಲ್ಲಿ ಆ.19ರಂದು ಕೂಡ ಜಿಲ್ಲೆಯ ಅಂಗನವಾಡಿ, ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಮುಂಜಾ ಗ್ರತಾ ಕ್ರಮವಾಗಿ ರಜೆ ಘೋಷಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ.

ದಟ್ಟ ಮಂಜು ತಪ್ಪಿದ ಅನಾಹುತ



ಮಂಜು ಮುಸುಕಿದ್ದರಿಂದ ಚಾಲಕನ ನಿಯಂತ್ರಣ ಕಳೆದುಕೊಂಡು ಬಸ್ ರಸ್ತೆ ಬದಿಗೆ ಸರಿದಿದೆ

ಮಡಿಕೇರಿ: ಸೋಮವಾರಪೇಟೆಯಿಂದ ಸೂರ್ಲಬ್ಬಿ ಮಾರ್ಗವಾಗಿ ಮುಟ್ಲು ಗ್ರಾಮಕ್ಕೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ವೊಂದು ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಗೆ ಸರಿದು ನಿಂತ ಘಟನೆ ಮುಟ್ಲು ಗ್ರಾಮದಲ್ಲಿ ನಡೆದಿದೆ. ಇಲ್ಲಿನ ಸುಬ್ರಮಣ್ಯ ದೇವಸ್ಥಾನ ಸಮೀಪದ ರಸ್ತೆಯಲ್ಲಿ ಮಳೆ ಸಹಿತ ದಟ್ಟ ಮಂಜು ಮುಸುಕಿದ್ದು, ರಸ್ತೆ ತಿರುವಿನಲ್ಲಿ ಬಸ್ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಬದಿಗೆ ಸರಿದಿದೆ. ಬಸ್‌ನಲ್ಲಿದ್ದ ಪ್ರಯಾಣಿಕರು ಯಾವುದೇ ಗಾಯಗಳಿಲ್ಲದೇ ಅಪಾಯದಿಂದ ಪಾರಾಗಿದ್ದಾರೆ. ಬಸ್‌ನ ಹಿಂಬದಿಯ ತುರ್ತು ನಿರ್ಗಮನದ ಮೂಲಕ ಹೊರ ಬಂದ ಪ್ರಯಾಣಿಕರು ಬಳಿಕ ನಡೆದುಕೊಂಡು ತಮ್ಮ ಗ್ರಾಮಗಳಿಗೆ ತೆರಳಿದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಿರಲಿ

ವಿರಾಜಪೇಟೆ ತಾಲೂಕು ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳಿಗೆ ತಾಕೀತು



ವಿರಾಜಪೇಟೆ ತಾಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ಜಿಪಂ ಉಪ ಕಾರ್ಯದರ್ಶಿ ಎಂ.ಸಿ.ಚಂದ್ರಶೇಖರ್ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯಿತಿ ಸಾಮಾನ್ಯ ಸಭೆ ನಡೆಯಿತು.

ಮಡಿಕೇರಿ ಆ.18–ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳುವಂತೆ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಗ್ರಾಮೀಣ ಕುಡಿಯುವ ನೀರು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ವಿರಾಜಪೇಟೆ ತಾಲೂಕು ಪಂಚಾಯಿತಿ ಸಾಮರ್ಥ್ಯ ಸೌಧದಲ್ಲಿ ತಾಲೂಕು ಆಡಳಿತಾಧಿಕಾರಿಗಳು, ಜಿಪಂ ಉಪ ಕಾರ್ಯದರ್ಶಿ ಎಂ.ಸಿ. ಚಂದ್ರಶೇಖರ್ ನೇತೃತ್ವದಲ್ಲಿ ತಾ.ಪಂ. ಸಾಮಾನ್ಯ ಸಭೆ ನಡೆಯಿತು.

ಕುಡಿಯುವ ನೀರಿಗೆ ಸಂಬಂಧಿಸಿದಂತೆ ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಒಟ್ಟು 3 ಬ್ಯಾಚ್‌ಗಳಿಂದ 120 ಕಾಮಗಾರಿಗಳಿದ್ದು 44 ಕಾಮಗಾರಿಗಳು ಮಾತ್ರ ಮುಕ್ತಾಯಗೊಂಡಿದ್ದು, ಇನ್ನುಳಿದ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮವಹಿಸಬೇಕೆಂದರು.

ಶಾಲಾ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಉಚಿತ ಪಠ್ಯ– ಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿ ಊಟದ ನೀಡುತ್ತಿದ್ದರೂ ಕೂಡ ಸರ್ಕಾರಿ ಶಾಲೆಗೆ ದಾಖಲಾಗುವ ಮಕ್ಕಳ ಸಂಖ್ಯೆ ಮಾತ್ರ ಇಳಿಕೆಯಾಗುತ್ತಿದೆ. ಎಸ್ಸೆಸ್ಸೆಲ್ಸಿ ಓದುತ್ತಿರುವ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸಿ ಫಲಿತಾಂಶವು ಕಳೆದ ವರ್ಷಕ್ಕಿಂತ ಈ ಬಾರಿ ಉತ್ತಮಪಡಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಿ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಾಡಿ ಜನರಿಗೆ ಸಿಗುತ್ತಿರುವ ಸೌಲಭ್ಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. 6 ಆಶ್ರಮ ಶಾಲೆಗಳಲ್ಲಿ 700ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದು, ಎಲ್ಲಾ ಶಾಲೆಗಳು ಉತ್ತಮ ರೀತಿಯಲ್ಲಿ ನಿರ್ವಹಣೆ ಕೈಗೊಳ್ಳಲಾಗುತ್ತಿದೆ ಮತ್ತು ಹಾಡಿ ಜನರಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಸೆಸ್ಕ್ ವಿಭಾಗದಿಂದ ತಾಲೂಕಿನ ವಿವಿಧ ಭಾಗಗಳಲ್ಲಿ ಹೊಸ ಕಂಬಗಳನ್ನು ಅಳವಡಿಸುವ ಸಂಬಂಧಿಸಿದಂತೆ ಕಂಬಗಳನ್ನು ರಸ್ತೆಯಲ್ಲಿ ಎಳೆದುಕೊಂಡು ಹೋಗುತ್ತಿರುವುದರಿಂದ ರಸ್ತೆಗೆ ಹಾನಿಯಾಗುತ್ತಿರುವುದು ಕಂಡು ಬಂದಿದ್ದು, ಇದರ ಕುರಿತು ಕ್ರಮ ವಹಿಸಲು ಎಂಜಿನಿಯರ್‌ಗಳಿಗೆ ತಿಳಿಸಿದರು.

ಅರಣ್ಯ ಇಲಾಖೆಯಿಂದ ವನ್ಯಜೀವಿಗಳ (ಆನೆದಾಳಿ, ಹುಲಿದಾಳಿ, ಬೆಳೆನಾಶ) ದಾಳಿ ಯಿಂದ ತಾಲೂಕಿನಲ್ಲಿ ಒಟ್ಟು 618 ಪ್ರಕರಣಗಳು ದಾಖಲಾಗಿದ್ದು ಈಗಾಗಲೇ ಹಲವು ಪ್ರಕರಣಗಳಿಗೆ ಪರಿಹಾರ ನೀಡಲಾಗಿದೆ ಎಂದು ವಲಯ ಅರಣ್ಯಾಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಮಾನವ ಮತ್ತು ಪ್ರಾಣಿ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸಭೆಯಲ್ಲಿ ತಿಳಿಸಲಾಯಿತು.

ಕೃಷಿ, ಸಹಕಾರ, ಕಂದಾಯ, ಅಬಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ, ತೋಟಗಾರಿಕೆ, ಅಕ್ಷರ ದಾಸೋಹ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಇಲಾಖಾವಾರು ಸಭೆಗೆ ಮಹಿತಿ ನೀಡಿದರು.

ಸಭೆಯಲ್ಲಿ ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಸಿ.ಅಪ್ಪಣ್ಣ, ವಿವಿಧ ಇಲಾಖೆಗಳ ಅಧಿಕಾರಿಗಳು, ತಾಲೂಕು ಪಂಚಾಯಿತಿ ಸಿಬ್ಬಂದಿ ಉಪಸ್ಥಿತರಿದ್ದರು.

ಧರ್ಮಸ್ಥಳ ಪ್ರಕರಣ: ಮಂಜುನಾಥ ಪಾದಯಾತ್ರಿಕರಿಂದ ಮೌನ ಮೆರವಣಿಗೆ



ಧರ್ಮಸ್ಥಳದ ವಿರುದ್ಧ ಅಪಪ್ರಚಾರ ವಿರೋಧಿಸಿ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಹಾಗೂ ಮಂಜುನಾಥ ಪಾದಯಾತ್ರೆ ಸಮಿತಿ ಸದಸ್ಯರು ಮೌನ ಮೆರವಣಿಗೆ ನಡೆಸಿದರು.

ಮಡಿಕೇರಿ,ಆ.18– ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ಅಪಪ್ರಚಾರ ಹಾಗೂ ಕಳಂಕ ತರಲು ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿ ವಿವಿಧ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಹಾಗೂ ಮಂಜುನಾಥ ಪಾದಯಾತ್ರೆ ಸಮಿತಿಯ ಸದಸ್ಯರು ಗುಡುಗಳಲೆಯಿಂದ ಶನಿವಾರಸಂತೆಯ ಬನ್ನಿ ಮಂಟಪದವರೆಗೆ ಮೌನ ಮೆರವಣಿಗೆ ನಡೆಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಹಿಂದೂ ಸಂಘಟನೆ ಮುಖಂಡ ಎಸ್.ಎನ್ ರಘು ಹಿಂದೂ ದೇವಾಲಯ ಹಾಗೂ ಹಿಂದೂ ಹೋರಾಟಗಾರರನ್ನು ತುಳಿಯಲು ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿದರು. ಧರ್ಮಸ್ಥಳ ವಿರುದ್ಧದ ಅಪಪ್ರಚಾರ ಮಾಡುತ್ತಿರುವವರಿಗೆ ಹಣದ ಬೆಂಬಲ ಯಾರು ನೀಡುತ್ತಿದ್ದಾರೆ ಎಂಬ ಬಗ್ಗೆ ತನಿಖೆ ಆಗಬೇಕು ಎಂದು ಆಗ್ರಹಿಸಿದರು.

ಹಿಂದೂ ಮುಖಂಡ ಬಿ.ಎಸ್.ಅನಂತ್ ಕುಮಾರ್ ಮಾತನಾಡಿ, ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತು ನಿಜವಾಗಿದ್ದರೆ ಸೂಕ್ತ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಪಾದಯಾತ್ರೆ ಸಮಿತಿಯ ಹೇಮಂತ್, ಮಹೇಶ್, ಪುನೀತ್, ದಿನೇಶ್, ದಿವಾಕರ್, ಚಂದ್ರಕಾಂತ್, ಯತೀಶ್, ಮಂಜುನಾಥ್, ಕಿಶೋರ್, ತನ್ಮಯ್ ಮತ್ತಿತರರು ಪಾಲ್ಗೊಂಡಿದ್ದರು.

ಬಸ್–ಕಾರು ಮುಖಾಮುಖಿ ಡಿಕ್ಕಿ ; ಚಾಲಕ ಸೇರಿ ಇಬ್ಬರಿಗೆ ತೀವ್ರ ಗಾಯ

ಸುಂಟಿಕೊಪ್ಪ: ಕೆಎಸ್‌ಆರ್‌ಟಿಸಿ ಬಸ್ ಮತ್ತು ಮಾರುತಿ ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು ಕಾರು ಚಾಲಕ ಸೇರಿದಂತೆ ಇಬ್ಬರು ಗಂಭೀರ ಗಾಯಗೊಂಡ ಘಟನೆ ಮಡಿಕೇರಿ–ಕುಶಾಲನಗರ ಮುಖ್ಯ ರಸ್ತೆಯ ಸುಂಟಿಕೊಪ್ಪ ಬಳಿಯ ಬಾಳೆಕಾಡು ರಸ್ತೆ ತಿರುವಿನಲ್ಲಿ ನಡೆದಿದೆ.

ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಮಡಿಕೇರಿ ಕಡೆಯಿಂದ ಕುಶಾಲನಗರ ಕಡೆಗೆ ತೆರಳುತ್ತಿದ್ದ ಕಾರು ಹಾಗೂ ಕುಶಾಲನಗರ ಕಡೆಯಿಂದ ಮಡಿಕೇರಿ ಕಡೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ನಡುವೆ ಅಪಘಾತವಾಗಿದ್ದು, ಕಾರಿನ ಮುಂಭಾಗ ಜಖಂಗೊಂಡಿದೆ. ಕಾರು ಚಲಾಯಿಸುತ್ತಿದ್ದ ಚಾಲಕ ರಂಜಿತ್ ಹಾಗೂ ಪ್ರಯಾಣಿಕ ಕುವಾರ ಎಂಬವರಿಗೆ ಗಂಭೀರ



ಸುಂಟಿಕೊಪ್ಪ ಬಳಿ ಕೆಎಸ್‌ಆರ್‌ಟಿಸಿ ಬಸ್–ಮಾರುತಿ ಕಾರು ಮುಖಾಮುಖಿ ಡಿಕ್ಕಿ ಸಂಭವಿಸಿರುವುದು.

ಗಾಯಗಳಾಗಿದ್ದು, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಸುಂಟಿಕೊಪ್ಪ ಪೊಲೀಸರು ತೆರಳಿ ಸ್ಥಳ ಮಹಜರು ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಜಿಲ್ಲಾಮಟ್ಟದ ಹಗ್ಗ ಜಗ್ಗಾಟ ಸ್ಪರ್ಧೆ: ಈಶ್ವರ ಇಗ್ಗುತ್ತಪ್ಪ ತಂಡ ಪ್ರಥಮ



ಪುರುಷರ ವಿಭಾಗದಲ್ಲಿ ಈಶ್ವರ ಇಗ್ಗುತ್ತಪ್ಪ–ಬಿ ತಂಡ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.



ಮಹಿಳಾ ವಿಭಾಗದಲ್ಲಿ ಬಲಮುರಿಯ ಮಹದೇವ ಸ್ಪೋರ್ಟ್ಸ್ ಕ್ಲಬ್ ತಂಡಕ್ಕೆ ಪ್ರಥಮ ಸ್ಥಾನ.

ನಾಪೋಕ್ಲು: ಸಮಸ್ತ ಹಿಂದೂ ಬಾಂಧವರಿಗಾಗಿ ಸಮೀಪದ ಹಳೆ ತಾಲೂಕಿನ ಜಿಎಂಪಿ ಶಾಲಾ ಮೈದಾನದಲ್ಲಿ ಹಿಂದೂ ಮಲಯಾಳಿ ಸಂಘ ಆಯೋಜಿಸಿದ್ದ ಜಿಲ್ಲಾಮಟ್ಟದ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಪುರುಷರ ವಿಭಾಗದಲ್ಲಿ ಈಶ್ವರ ಇಗ್ಗುತ್ತಪ್ಪ–ಬಿ ತಂಡ ಪ್ರಥಮ ಸ್ಥಾನಗಳಿಸಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು. ಪುರುಷರಿಗಾಗಿ ಆಯೋಜಿಸಲಾದ್ದ ಸ್ಪರ್ಧೆಯಲ್ಲಿ ವಿಜೇತ ತಂಡಕ್ಕೆ ಮೊದಲ ಬಹುಮಾನ ರೂ.33,333 ನಗದು ಹಾಗೂ ಆಕರ್ಷಕ ಟ್ರೋಫಿ ವಿತರಿಸಲಾಯಿತು.

ದ್ವಿತೀಯ ಸ್ಥಾನವನ್ನು ಈಶ್ವರ ಇಗ್ಗುತ್ತಪ್ಪ–ಎ ತಂಡ ಗಳಿಸಿತು. ಈ ತಂಡ ದ್ವಿತೀಯ ಬಹುಮಾನ 22,222 ರೂ. ನಗದು ಹಾಗೂ ಆಕರ್ಷಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ತೃತೀಯ ಸ್ಥಾನ ಬೇಗೂರು ಮಹಾವಿಷ್ಣು ತಂಡದ ಪಾಲಾಯಿತು. ತೃತೀಯ ಸ್ಥಾನ ಪಡೆದ ತಂಡಕ್ಕೆ ನಗದು 11,111ರೂ. ನಗದು ಹಾಗೂ ಆಕರ್ಷಕ ಟ್ರೋಫಿ ಲಭಿಸಿತು.

ಮಹಿಳಾ ವಿಭಾಗದಲ್ಲಿ ಬಲಮುರಿಯ ಮಹದೇವ ಸ್ಪೋರ್ಟ್ಸ್ ಕ್ಲಬ್ ತಂಡ ಪ್ರಥಮ ಸ್ಥಾನ ಗಳಿಸಿತು. ದ್ವಿತೀಯ ಸ್ಥಾನ ನಾಪೋಕ್ಲು ಭಗವತಿ ತಂಡದ ಪಾಲಾಯಿತು. ಮಹಿಳೆಯರಿಗಾಗಿ ಆಯೋಜಿಸಲಾಗಿದ್ದ ಸ್ಪರ್ಧೆಯಲ್ಲಿ ವಿಜೇತ ತಂಡಕ್ಕೆ ರೂ.11,111 ನಗದು ಹಾಗೂ ಆಕರ್ಷಕ ಟ್ರೋಫಿ ಮತ್ತು ಎರಡನೇ ಸ್ಥಾನ ಪಡೆದ ತಂಡಕ್ಕೆ 5,555 ರೂ.ನಗದು ಹಾಗೂ ಆಕರ್ಷಕ ಟ್ರೋಫಿಯನ್ನು ಹಿಂದೂ ಮಲಯಾಳಿ ಸಂಘದ ವತಿಯಿಂದ ವಿತರಿಸಲಾಯಿತು. ಸಂಘದ ಗೌರವಾಧ್ಯಕ್ಷ ರಮೇಶ್, ನಾಪೋಕ್ಲು ಬಿಲ್ಲವ ಸಮಾಜದ ಅಧ್ಯಕ್ಷ ಬಿ.ಎಂ. ಪ್ರದೀಪ್, ಜೆಡಿಎಸ್ ರಾಜ್ಯ ಸಂಘಟನಾ ಕಾರ್ಯದರ್ಶಿ ಮನ್ಸೂರ್ ಆಲಿ, ಮಡಿಕೇರಿ ಕೆಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹರೀಶ್ ಪೂವಯ್ಯ, ಗ್ರಾಪಂ ಸದಸ್ಯ ಅರುಣ್ ಬೇಬಾ, ಸಭೆಯ ಉದ್ದೇಶಿಸಿ ಮಾತನಾಡಿದರು.

ಪೊಕ್ಕುಳಂಡ್ರ ಕಾಮಿನಿ ನಿಧನ



ನಾಪೋಕ್ಲು, ಆ.18– ಇಲ್ಲಿಗೆ ಸಮೀಪದ ಚೇಯ್ಯಂಡಾಣೆ ನರಿಯಂದಡ ಗ್ರಾಮದ ಪೊಕ್ಕುಳಂಡ್ರ ಆನಂದಯ್ಯರವರ ಧರ್ಮಪತ್ನಿ ಪೊಕ್ಕುಳಂಡ್ರ ಕಾಮಿನಿ(83) ಶನಿವಾರ ದೈವಾಧೀನರಾದರು.

ಮೃತರ ಅಂತ್ಯ ಸಂಸ್ಕಾರ ಭಾನುವಾರ ನೆರವೇರಿತು.

ಮೃತರು ಪತಿ ಮೂರು ಹೆಣ್ಣು ಹಾಗೂ ಎರಡು ಗಂಡು ಮಕ್ಕಳು ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

ದುಂದುವೆಚ್ಚದ ಮದುವೆಗೆ ಕಡಿವಾಣ ಹಾಕಲು ಸುತ್ತೂರು ಶ್ರೀಗಳ ಕರೆ

ಬ್ರೇಕ್ ವಿಫಲ : ಅರಣ್ಯ ಪ್ರದೇಶ ನುಗ್ಗಿದ ದಿಬ್ಬಣದ ಬಸ್ಸು

ಹನೂರು, ಆ.18–ಮಲೆಮಹದೇಶ್ವರ ಬೆಟ್ಟದಲ್ಲಿ ನಡೆದ ಉಚಿತ ಸಾಮೂಹಿಕ ವಿವಾಹ ಮುಗಿಸಿಕೊಂಡು ಸ್ವಗ್ರಾಮಕ್ಕೆ ತೆರಳುತ್ತಿದ್ದ ಬಸ್‌ವೊಂದು ಬ್ರೇಕ್ ವಿಫಲತೆಯಿಂದ ಅರಣ್ಯ ಪ್ರದೇಶಕ್ಕೆ ನುಗ್ಗಿರುವ ಘಟನೆ ವರದಿಯಾಗಿದೆ.



ತಾಲೂಕಿನ ಮಲೆಮಹದೇಶ್ವರ ಬೆಟ್ಟದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಉಚಿತ ಸಾಮೂಹಿಕ ವಿವಾಹಕ್ಕೆ ಮದ್ದೂರು ತಾಲೂಕಿನಿಂದ ಬಸ್‌ನಲ್ಲಿ ಆಗಮಿಸಿದ್ದು, ಮದ್ದೂರಿಗೆ ಹಿಂದಿರುಗುವಾಗ ಬಸ್ಸು ತಾಳಬೆಟ್ಟದ ನಾಲ್ಕನೇ ತಿರುವಿನಲ್ಲಿ ಬ್ರೇಕ್ ವಿಫಲಗೊಂಡು ಅರಣ್ಯ ಪ್ರದೇಶ ನುಗ್ಗಿದೆ. ಈ ಘಟನೆಯಲ್ಲಿ ಬಸ್ಸಿನಲ್ಲಿದ್ದ ಪ್ರಯಾಣಿಕರಿಗೆ ಯಾವುದೇ ರೀತಿಯ ಪ್ರಾಣಾಪಾಯ ಸಂಭವಿಸಿರುವುದಿಲ್ಲ.

ಸ್ಥಳಕ್ಕೆ ಠಾಣೆಯ ಇನ್ಸ್‌ಪೆಕ್ಟರ್ ಜಗದೀಶ್ ಮತ್ತವರ ಸಿಬ್ಬಂದಿ ಆಗಮಿಸಿ ಕ್ರೇನ್ ಸಹಾಯದಿಂದ ಬಸ್ಸನ್ನು ಸ್ವಸ್ಥಾನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ

ಹನೂರು, ಆ.18 (ಸೋಮು)–ಸರಳ ವಿವಾಹಗಳಿಗೆ ಒತ್ತು ನೀಡುವ ಮೂಲಕ ದುಂದು ವೆಚ್ಚದ ಮದುವೆಗೆ ಕಡಿವಾಣ ಹಾಕಬೇಕಿದೆ ಎಂದು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಜಿಲ್ಲೆಯ ಹನೂರು ತಾಲೂಕಿನ ಶ್ರೀ ಮಲೆ ಮಹದೇಶ್ವರಸ್ವಾಮಿ ಬೆಟ್ಟದ ದೇವಸ್ಥಾನದ ಆವರಣದಲ್ಲಿ ಸೋಮವಾರ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದಿಂದ ಆಯೋಜಿಸಿದ್ದ ಸಾಮೂಹಿಕ ವಿವಾಹದಲ್ಲಿ ನೂತನ ವಧುವರರಿಗೆ ಮಾಂಗಲ್ಯ, ವಸ್ತ್ರ ವಿತರಣೆ ಮಾಡಿ ಮಾತನಾಡಿದ ಅವರು, ಬೇರೆ ಕಡೆಯಾಗುವ ವಿವಾಹಕ್ಕಿಂತ ಧಾರ್ಮಿಕ ಕ್ಷೇತ್ರಗಳಲ್ಲಾಗುವ ವಿವಾಹಗಳು ವಿಭಿನ್ನವಾಗಿರುತ್ತದೆ. ಧಾರ್ಮಿಕ ಕ್ಷೇತ್ರಗಳಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡುವುದರಿಂದ ಭಕ್ತಿ ಭಾವನೆ ಬರಲಿದೆ ಎಂದರು.

ಮೆಟ್ಟೂರು ಶಾಸಕ ಸದಾಶಿವಂ ಮಾತನಾಡಿ, ಕರ್ನಾಟಕದ ಪುಣ್ಯ ಕ್ಷೇತ್ರವಾದ ಮಲೆ ಮಹದೇಶ್ವರ ಬೆಟ್ಟದಲ್ಲಿ ಹಲವು ವರ್ಷಗಳಿಂದ ಸಾಮೂಹಿಕ ವಿವಾಹ ಕಾರ್ಯ ಕ್ರಮ ನಡೆಯುತ್ತಿರುವುದರಿಂದ ಬಡ ಕುಟುಂಬದವರು ಹಾಗೂ ಮಧ್ಯಮ ವರ್ಗದವರಿಗೆ ಹೆಚ್ಚಿನ ಅನುಕೂಲವಾಗಿದೆ. ನವೆಂಬರ್‌ನಲ್ಲಿ ತಮಿಳುನಾಡಿನಲ್ಲಿ ಅಧಿವೇಶನ ನಡೆಯಲಿದ್ದು, ತಮಿಳುನಾಡಿನ ಪ್ರಮುಖ ದೇವಾಲಯಗಳಲ್ಲಿಯೂ ಇದೇ ಮಾದರಿಯಲ್ಲಿ ಉಚಿತ ಸಾಮೂಹಿಕ ಕಾರ್ಯಕ್ರಮ ಆಯೋಜಿಸಲು ಚರ್ಚೆ ನಡೆಸಲಾಗುವುದು ಎಂದರು.



ಸಾಮೂಹಿಕ ವಿವಾಹದಲ್ಲಿ ನೂತನ ವಧು–ವರರನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಲೂರು ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಆಶೀರ್ವದಿಸಿದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಉಚಿತ ಸಾಮೂಹಿಕ ವಿವಾಹವಾಗುವುದರಿಂದ ನಿಮ್ಮ ಕುಟುಂಬಕ್ಕೆ ಆರ್ಥಿಕವಾಗಿ ಸಹಾಯವಾಗುವುದಲ್ಲದೆ ದುಂದು ವೆಚ್ಚಕ್ಕೆ ಕಡಿವಾಣ ಹಾಕಿದಂತಾಗಿದೆ. ದೇವಾಲಯದಲ್ಲಿ ಮದುವೆಯಾದರೆ ಜೋಡಿಗಳ ಜೀವನ ನೆಮ್ಮದಿಯಾಗಿರುತ್ತದೆ ಎಂಬ ನಂಬಿಕೆ ಇದೆ.

ಸಾಲೂರು ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮೆಟ್ಟೂರು ಶಾಸಕ ಸದಾಶಿವಂ, ಗ್ಯಾರಂಟಿ ಯೋಜನೆಗಳ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಪಂ ಸಿಇಒ ಮೋನಾರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಪ್ರಾಧಿಕಾರದ ಕಾರ್ಯದರ್ಶಿ ಎ.ಇ. ರಘು, ಡಿವೈಎಸ್‌ಪಿ ಧರ್ಮೇಂದ್ರ, ತಹಸೀಲ್ದಾರ್ ಚೈತ್ರಾ, ನಾಮನಿರ್ದೇಶಿತ ಸದಸ್ಯರಾದ ಭಾಗ್ಯಮ್ಮ, ಮರಿಸ್ವಾಮಿ, ಗ್ರಾಪಂ ಅಧ್ಯಕ್ಷೆ ಅರ್ಚನಾ ಉಪಸ್ಥಿತರಿದ್ದರು.

ದಾಂಪತ್ಯ ಜೀವನಕ್ಕೆ 93 ಜೋಡಿಗಳು

ಮಲೆ ಮಹದೇಶ್ವರ ಬೆಟ್ಟದಲ್ಲಿ ಸೋಮವಾರ ನಡೆದ ಉಚಿತ ಸಾಮೂಹಿಕ ವಿವಾಹದಲ್ಲಿ ಜಿಲ್ಲೆ, ಹೊರ ಜಿಲ್ಲೆ ಹಾಗೂ ತಮಿಳುನಾಡಿನ ಸುಮಾರು 93 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಶಾಸ್ತ್ರೋಕ್ತವಾಗಿ ಮದುವೆ ಕಾರ್ಯವನ್ನು ಪ್ರಾಧಿಕಾರದಿಂದ ನೆರವೇರಿಸಲಾಯಿತು. ವಧುವಿಗೆ ಸೀರೆ, ಮಾಂಗಲ್ಯ, ಬಳೆ, ರವಿಕೆ, ಕಾಲುಂಗುರ ಹಾಗೂ ವರನಿಗೆ ಪಂಚೆ, ಶರ್ಟ್, ಟವೆಲ್ ಅನ್ನು ನೀಡಲಾಯಿತು.

ಮೈಸೂರಿನ ರಾಜು ವಿಕಲ ಚೇತನರಾಗಿದ್ದು, ಶ್ರೀರಂಗಪಟ್ಟಣದ ಶ್ವೇತಾ ಎಂಬುವವರನ್ನು ವಿವಾಹವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ಮಹಿಳಾ ವೃತ್ತಿಪರ ಕೌಶಲ್ಯಗಳಿಂದ ಆರ್ಥಿಕ ಪ್ರಗತಿ ಸಾಧ್ಯ



ಪಟ್ಟಣದ ಸುವರ್ಣ ರಾಷ್ಟ್ರೀಯ ಜೀವನ್ ಮಿಷನ್ ವತಿಯಿಂದ ನಡೆದ ಮಾಸಿಕ ಸಂತೆಗೆ ತಾಪಂ ಸಹಾಯಕ ನಿರ್ದೇಶಕ ರವೀಂದ್ರನಾಥ್ ಚಾಲನೆ ನೀಡಿದರು.

ಯಳಂದೂರು, ಆ.18–ಮಹಿಳೆಯರು ವೃತ್ತಿಪರ ಕೌಶಲ್ಯಗಳನ್ನು ಕಲಿಯುವ ಮೂಲಕ ಆರ್ಥಿಕ ಸ್ವಾವ ಲಂಬನೆಯನ್ನು ಸಾಧಿಸಬಹುದು ಎಂದು ರಾಷ್ಟ್ರೀಯ ಗ್ರಾಮೀಣ ಜೀವನ ಉಪಾಯ್ ಮಿಷನ್‌ನ ತಾಲೂಕು ಯೋಜನಾ ವ್ಯವಸ್ಥಾಪಕ ಶ್ರೀಕಾಂತ್ ಹೇಳಿದರು.

ಪಟ್ಟಣದ ಸುವರ್ಣ ತಿರುಪತಿ ದೇಗುಲದ ಸಮೀಪದ ಶನಿವಾರ ರಾಷ್ಟ್ರೀಯ ಜೀವನ್ ಮಿಷನ್ ವತಿಯಿಂದ ನಡೆದ ಮಾಸಿಕ ಸಂತೆಯಲ್ಲಿ ಮಾತನಾಡಿ, ಮಹಿಳೆಯರು ಸ್ವಾವಲಂಬಿ ಜೀವನಕ್ಕೆ ತಾವೇ ತಯಾರಿಸಿದ ಉತ್ಪನ್ನವನ್ನು ಮಾರಾಟ ಮಾಡಿ ಹೆಚ್ಚು ಲಾಭಗಳಿಸುವ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಈ ನಿಟ್ಟಿನಲ್ಲಿ ತಾಲೂಕಿನ ಸಂಜೀವಿನಿ ಒಕ್ಕೂಟಗಳನ್ನು ಸ್ಥಾಪಿಸಲಾಗಿದೆ ಎಂದರು.

ಎನ್‌ಆರ್‌ಎಲ್‌ಎಂ ಯೋಜನೆ ಮೂಲಕ 12 ಒಕ್ಕೂಟಗಳು ತಾಲೂಕಿನಲ್ಲಿ ಕೆಲಸವನ್ನು ನಿರ್ವಹಿಸುತ್ತಿವೆ. ಇವರು ತಯಾರಿಸುವ ಸ್ವದೇಶಿ ಉತ್ಪನ್ನಗಳನ್ನು ತಯಾರಿಸುವುದಕ್ಕೆ ಸಹಾಯಧನವನ್ನು ನೀಡಲಾಗುತ್ತದೆ. ಇದರಲ್ಲಿ ಬಿದಿರಿನಿಂದ ತಯಾರಾಗುವ ವಸ್ತುಗಳು, ತೋರಣ, ಹಾರಗಳ ತಯಾರಿಕೆ, ಹಪ್ಪಳ, ಸಂಡಿಗೆ, ಉಪ್ಪಿನಕಾಯಿ, ಮಿಠಾಯಿ, ಸಿಹಿ ತಿನಿಸುಗಳು, ಗಾಣದಿಂದ ತಯಾರಾಗುವ ಅಡುಗೆ ಎಣ್ಣೆ ಸೇರಿದಂತೆ ವಿವಿಧ ಅಲಂಕಾರಿಕ ವಸ್ತುಗಳು, ಮಾರುಕಟ್ಟೆಯಲ್ಲಿ ಪ್ರಚಲಿತದಲ್ಲಿರುವ ಉತ್ಪನ್ನಗಳು ಹಾಗೂ ಜನರ ಸದಭಿರುಚಿಗೆ ಅನುಗುಣವಾಗಿ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಉತ್ಪನ್ನಗಳ ತಯಾರಿಕೆ ತರಬೇತಿ ನೀಡಲಾಗುತ್ತದೆ. ಇವರ ಉತ್ಪನ್ನಗಳನ್ನು ಮಾರಾಟ ಮಾಡಲು ಪ್ರತಿ ತಿಂಗಳು ಜನನಿಬಿಡ ಪ್ರದೇಶಗಳಲ್ಲಿ ಸಂತೆಯನ್ನು ಮಾಡಿ ಈ ಪ್ರದರ್ಶನ ಮತ್ತು ಮಾರಾಟಕ್ಕೆ ಎಲ್ಲಾ ರೀತಿಯ ಸೌಕರ್ಯಗಳನ್ನು ನೀಡಿ ಇವರಿಗೆ ಉತ್ತೇಜನ ನೀಡಲಾಗುತ್ತದೆ. ಇದರಿಂದ ಮಹಿಳೆಯರು ಸ್ವಾವಲಂಬಿಯಾಗಿ ಬದುಕು ನಡೆಸಲು ಸಾಧ್ಯವಾಗುವ ಜೊತೆಗೆ ಆರ್ಥಿಕವಾಗಿ ಸಬಲರಾಗಲು ಇದು ಉತ್ತೇಜನಕಾರಿಯಾಗಿದೆ. ಈ ನಿಟ್ಟಿನಲ್ಲಿ ಗ್ರಾಹಕರೂ ಸಹ ಇಂತಹ ಉತ್ಪನ್ನಗಳನ್ನು ಖರೀದಿಸಿ ದೇಸಿಯ ವಸ್ತುಗಳ ಖರೀದಿಗೆ ಮುಂದಾಗಬೇಕು ಎಂದು ಮನವಿ ಮಾಡಿದರು.

ಸಹಾಯಕ ನಿರ್ದೇಶಕ ರವೀಂದ್ರನಾಥ್ ಸಂತೆಯನ್ನು ಉದ್ಘಾಟಿಸಿದರು. ಮಹಿಳಾ ಒಕ್ಕೂಟದ ರಾಜಮ್ಮ, ಪ್ರೇಮ, ಮಧುಸೂಧನ್, ರವಿ, ವಾಣಿಶ್ರೀ, ಭೂಮಿಕಾ, ಜಯಮ್ಮ, ಮಣಿ, ನಾಗಮ್ಮ ಮಹಿಳಾ ಒಕ್ಕೂಟಗಳ ಸದಸ್ಯರಿದ್ದರು

ಇಂದು ಗುಂಡ್ಲುಪೇಟೆ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ವಿದ್ಯುತ್ ಪ್ರಸರಣ ನಿಗಮವು ಗುಂಡ್ಲುಪೇಟೆ ಉಪವಿಭಾಗದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಗುಂಡ್ಲುಪೇಟೆ, ಬರಗಿ, ಕೋಡಿಹಳ್ಳಿ, ಬೇರಂಬಾಡಿ, ನೆನೆಕಟ್ಟೆ, ವೀರನಪುರ, ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಎನ್.ಜೆ.ವೈ, ಗೋವಿಂದಪುರ, ಕಗ್ಗಳ, ಕೆಲಸಿಪುರ, ಲಕ್ಕೂರು, ಫ್ಯಾಕ್ಟರಿ, ವಾಟರ್ ಸಪ್ಲೈ ಹಾಗೂ ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹೆಗ್ಗವಾಡಿ, ಹೊಂಗಹಳ್ಳಿ ಐಪಿ, ಮುಂಟಿಪುರ ಐಪಿ, ಹೆಚ್.ಎಸ್. ಹುಂಡಿ ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಬೈಕ್‌ನಿಂದ ಬಿದ್ದು ಗಾಯಾಳು ಮಹಿಳೆ ಸಾವು

ಕೊಳ್ಳೇಗಾಲ. ಆ.18– ಮೋಟಾರು ಬೈಕ್‌ನಿಂದ ಬಿದ್ದು ತೀವ್ರ ಗಾಯಗೊಂಡಿದ್ದ ಮಹಿಳೆಯೊಬ್ಬರು ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಬೆಳಗ್ಗೆ ಮೈಸೂರಿನ ಕೆ ಆರ್ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ.



ತಾಲ್ಲೂಕಿನ ಕರಳಕಟ್ಟೆ ಗ್ರಾಮದ ಶಿವರುದ್ರಮ್ಮ ಮೃತ ದುರ್ದೈವಿ ಮಹಿಳೆ. ಈಕೆ ಕಂಚಗಳ್ಳಿ ಗ್ರಾಮದ ತನ್ನ ತಾಯಿಯ ಜಮೀನಿನಲ್ಲಿ ಕೂಲಿ ಕೆಲಸ ಮುಗಿಸಿಕೊಂಡು ತನ್ನ ಅಕ್ಕನ ಮಗ ಮಹೇಶ್ ಎಂಬಾತನ ಜೊತೆ ಗ್ರಾಮಕ್ಕೆ ಹಿಂದಿರುಗುವಾಗ ಕೆಂಪನಪಾಳ್ಯ ಗ್ರಾಮದ ಬಳಿ ಬೈಕ್‌ನಿಂದ ಬಿದ್ದು ತಲೆಗೆ ತೀವ್ರ ಪೆಟ್ಟು ಬಿದ್ದಿತ್ತು. ಗಾಯಾಳು ಮಹಿಳೆಗೆ ಪಟ್ಟಣದ ಆಸ್ಪತ್ರೆಗೆ ಕರೆತಂದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕಳುಹಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಬೆಳಗಿನ ಜಾವ ಸಾವನ್ನಪ್ಪಿದ್ದಾರೆ. ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಬೈಕ್‌ಗಳ ಮುಖಾಮುಖಿ ಡಿಕ್ಕಿ, ಗಾಯಾಳು ಸವಾರ ಸಾವು



ಸಿದ್ದಶೆಟ್ಟಿ

ಕೊಳ್ಳೇಗಾಲ, ಆ.18–ತಾಲೂಕಿನ ನರೀಪುರ ಕ್ರಾಸ್ ಬಳಿ ಸಂಭವಿಸಿದ್ದ ಬೈಕ್‌ಗಳ ಮುಖಾಮುಖಿ ಡಿಕ್ಕಿಯಲ್ಲಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಬೈಕ್ ಸವಾರ ಸಾವನ್ನಪ್ಪಿದ್ದಾರೆ.

ತಾಲೂಕಿನ ತೆಳ್ಳನೂರು ಸಿದ್ದಶೆಟ್ಟಿ(51) ಮೃತ ದುರ್ದೈವಿ. ಈತ ಪತ್ನಿ ಜೊತೆಯಲ್ಲಿ ಶನಿವಾರ ಸಂಜೆ ಕೊಳ್ಳೇಗಾಲದಿಂದ ತಮ್ಮ ಸ್ವಗ್ರಾಮಕ್ಕೆ ವಾಪಸ್ಸು ಹೋಗುವಾಗ ನರೀಪುರ ಕ್ರಾಸ್ ಬಳಿ ಎದುರುಗಡೆಯಿಂದ ಬಂದ ಬೈಕ್ ಸವಾರ ಡಿಕ್ಕಿ ಹೊಡೆದಿದ್ದನು. ಬೈಕ್ ಸವಾರ ಸಿದ್ದಶೆಟ್ಟಿಗೆ ತೀವ್ರವಾಗಿ ಗಾಯವಾಗಿದ್ದು, ಪಟ್ಟಣದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ಕಳುಹಿಸಲಾಗಿತ್ತು. ಇವರ ಪತ್ನಿ ಮಂಗಳಮ್ಮ ಸಣ್ಣಪುಟ್ಟ ಗಾಯಗಳಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಮತ್ತೊಬ್ಬ ಬೈಕ್ ಸವಾರ ಬೆಂಗಳೂರಿನ ಆನೇಕಲ್ ಜಿಗಣಿಯ ಉದ್ಯಮಿ ಭೀಮ ಎಂಬವರು ಮೈಸೂರಿನ ಖಾಸಗಿ ಕಾವೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಕ್ತಚಂದನ ಸಾಗಿಸುತ್ತಿದ್ದ ಆರೋಪಿಗಳಿಬ್ಬರ ಬಂಧನ

1.50 ಲಕ್ಷ ರೂ. ಮೌಲ್ಯದ ಮಾಲು ವಶ



ವಾಹನ ಸಮೇತ ವಶಪಡಿಸಿಕೊಳ್ಳಲಾದ ರಕ್ತಚಂದನದ ತುಂಡುಗಳು ಮತ್ತು ಆರೋಪಿಗಳೊಂದಿಗೆ ಸಿಐಡಿ ಅರಣ್ಯ ಸಂಚಾರಿ ದಳದ ಸಿಬ್ಬಂದಿ

ಕೊಳ್ಳೇಗಾಲ, ಆ.18–ತಾಲೂಕಿನ ಸತ್ತೇಗಾಲ ಗ್ರಾಮದ ಸಮೀಪ ಅಕ್ರಮವಾಗಿ ರಕ್ತಚಂದನದ ಮರದ ತುಂಡುಗಳ ಸಾಗಾಣಿಕೆಯಲ್ಲಿ ನಿರತರಾಗಿದ್ದ ಇಬ್ಬರು ಆರೋಪಿಗಳನ್ನು ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸರು ಬಂಧಿಸಿ ಅವರಿಂದ ಒಂದೂವರೆ ಲಕ್ಷ ಮೌಲ್ಯದ ಮಾಲನ್ನು ವಶಪಡಿಸಿ ಕೊಂಡಿರುವ ಘಟನೆ ನಡೆದಿದೆ.

ಚನ್ನಪಟ್ಟಣ ಟೌನ್ ತಬ್ರೇಜ್ ಖಾನ್ (30), ಮೆಹದಿ ನಗರ ಬಡಾವಣೆಯ ವಾಸಿ ಸಾದಿಕ್ ಪಾಷ(26) ಬಂಧಿತ ಆರೋಪಿಗಳಾಗಿದ್ದು ಇವರಿಂದ 205 ಕೆ.ಜಿ. ತೂಕದ ರಕ್ತಚಂದನದ 28 ಮರದ ತುಂಡುಗಳು ಹಾಗೂ ಸಾಗಾಣಿಕೆಗೆ ಬಳಸಿದ್ದ ಟಾಟಾ ಸುಮೋ (ಕೆಎಂ 09, ಎನ್72 82) ಜಪ್ತಿ ಮಾಡಿ ಮುಂದಿನ ಕ್ರಮಕೈಗೊಂಡಿದ್ದಾರೆ.

ಸಿಐಡಿ ಅರಣ್ಯ ಸಂಚಾರಿ ದಳದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ವಿಜಯರಾಜ್ ಮತ್ತು ಮುಖ್ಯ ಪೇದೆಗಳಾದ ಬಸವರಾಜು, ರಾಮಚಂದ್ರ, ಸ್ವಾಮಿ, ಲತಾ, ಸೈಯದ್ ಜಮೀಲ್, ಕಾನ್ಸ್‌ಟೆಬಲ್ ಬಸವರಾಜು, ಚಾಲಕ ಪ್ರಭಾಕರ್ ಇನ್ನಿತರ ಆರೋಪಿಗಳನ್ನು ತಾಲೂಕಿನ ಸತ್ತೇಗಾಲದ ಬಳಿ ಮಾಲು ಸಮೇತ ಬಂಧಿಸಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಂಡಿದ್ದಾರೆ.

ಮೈಸೂರು ಮಿತ್ರ

ದಸರಾದೊಳಗೆ ಚಾಮುಂಡೇಶ್ವರಿ ಕ್ಷೇತ್ರದ ಸ್ಲಂಗಳಿಗೆ ಮೂಲಸೌಕರ್ಯ ಕಲ್ಪಿಸಿ

●ವಸತಿ ಸಚಿವ ಜಮೀರ್ ಅಹಮದ್‌ಗೆ ಶಾಸಕ ಜಿ.ಟಿ.ದೇವೇಗೌಡರ ಆಗ್ರಹ ●ಹಂಚ್ಯಾ, ಸಾತಗಳ್ಳಿ, ರೂಪಾನಗರ, ಮಂಡಕಳ್ಳಿ, ಕುಪ್ಪಲೂರು, ರಮಾಬಾಯಿನಗರ, ಏಕಲವ್ಯನಗರ, ಕೆಸರೆ ಸೇರಿ 9 ಸ್ಲಂ ನಿವಾಸಿಗಳ ಸಂಕಷ್ಟ ಪರಿಸ್ಥಿತಿ ವಿವರಿಸಿದ ಜಿಟಿಡಿ

ಮೈಸೂರು, ಆ.18– ದಸರಾ ಆರಂಭವಾಗುವಷ್ಟರಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸ್ಲಂ ಬಡಾವಣೆಗಳಿಗೆ ಮೂಲಸೌಕರ್ಯ ಕಲ್ಪಿಸುವಂತೆ ಶಾಸಕ ಜಿ.ಟಿ.ದೇವೇಗೌಡರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ವಿಧಾನಸಭೆ ಅಧಿವೇಶನದಲ್ಲಿ ಸೋಮವಾರ ಮಾತನಾಡಿದ ಅವರು, ಮೈಸೂರು ಸುಂದರ, ಸ್ವಚ್ಛ ನಗರಿ ಎಂಬ ಖ್ಯಾತಿ ಪಡೆದಿದೆ. ಆದರೆ ನನ್ನ ಕ್ಷೇತ್ರದಲ್ಲಿ ಹಂಚ್ಯಾ, ಸಾತಗಳ್ಳಿ, ರೂಪನಗರ, ಮಂಡಕಳ್ಳಿ, ಕುಪ್ಪಲೂರು, ರಮಾಬಾಯಿನಗರ, ರಾಜೀವನಗರ, ಏಕಲವ್ಯ ನಗರ ಹಾಗೂ ಕೆಸರೆ ಭಾಗದಲ್ಲಿ ಒಟ್ಟು 9 ಸ್ಲಂ ಬಡಾವಣೆಗಳಿದ್ದು, ಅಲ್ಲಿನ ನಿವಾಸಿಗಳು ಕನಿಷ್ಠ ಮೂಲಸೌಕರ್ಯಗಳಿಲ್ಲದೆ ಸಂಕಷ್ಟದಲ್ಲಿದ್ದಾರೆ ಎಂದು ತಿಳಿಸಿದರು.

ಕಳೆದ ಡಿಸೆಂಬರ್‌ನಲ್ಲಿ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸ್ಲಂಗಳ ಮೂಲ ಸೌಕರ್ಯಕ್ಕೆ 14 ಕೋಟಿ ರೂ. ಅನುದಾನ ನೀಡುವಂತೆ ಮನವಿ ಮಾಡಿದಾಗ ಅವರು ಅನುದಾನ ಮಂಜೂರು ಮಾಡಲು ಸೂಚಿಸಿದ್ದರು. ಈ ಬಗ್ಗೆ ವಸತಿ ಸಚಿವ ಜಮೀರ್ ಅಹಮದ್ ಅವರೊಂದಿಗೆ ನಡೆದ ಸಭೆಯಲ್ಲಿ 10 ಕೋಟಿ ರೂ. ಅನುದಾನ ನೀಡಲು ಒಪ್ಪಿ, ಮೊದಲ ಹಂತದಲ್ಲಿ 5 ಕೋಟಿ ರೂ. ಬಿಡುಗಡೆ ಮಾಡುವ ಭರವಸೆ ನೀಡಲಾಗಿತ್ತು. ಆದರೆ ಈವರೆಗೆ ಒಂದು ರೂಪಾಯಿ ಅನುದಾನ ನೀಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಬಡಾವಣೆಗಳೆಲ್ಲಾ ಜೆಎನ್ ನರ್ಮ್ ಯೋಜನೆಯಡಿ ನಿರ್ಮಾಣವಾಗಿದ್ದು, ಅಲ್ಲಿ ಕೂಲಿ ಕಾರ್ಮಿಕರು, ಪೌರಕಾರ್ಮಿಕರು ಸೇರಿದಂತೆ ಕಡುಬಡವರು ವಾಸವಿದ್ದಾರೆ. ಅವರಿಗೆ ಕುಡಿಯುವ ನೀರು, ಶೌಚಾಲಯ, ರಸ್ತೆ, ಸ್ವಚ್ಛತೆ ಸೇರಿದಂತೆ ಯಾವುದೇ ಸೌಕರ್ಯಗಳಿಲ್ಲ. ನೈರ್ಮಲ್ಯವಿಲ್ಲದೆ ಸಾರ್ವಜನಿಕರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ ಎಂದು ತಿಳಿಸಿದರು.





ಜಿ.ಟಿ.ದೇವೇಗೌಡ ಜಮೀರ್ ಅಹ್ಮದ್

ನೀವು(ಜಮೀರ್ ಅಹಮದ್) ಮುಖ್ಯಮಂತ್ರಿಗಳ ಬಲಗೈ ಭಂಟನ ರೀತಿ ಯಾವಾಗಲು ಜೊತೆಯಲ್ಲೇ ಇರುತ್ತೀರಿ. ನೀವು ಯಾವುದೇ ಕೆಲಸ ಹೇಳಿದರು ಮುಖ್ಯಮಂತ್ರಿಗಳು ಮಾಡುತ್ತಾರೆ. ವಸತಿ ಖಾತೆಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿರುವ ನಿಮಗೆ ಬಡವರ ಬಗ್ಗೆ ಕಾಳಜಿ ಜೊತೆಗೆ ಸಹಾಯ ಮಾಡಬೇಕೆಂಬ ಬದ್ಧತೆ ಇದೆ. ಆದರೆ ಸ್ಲಂ ಬಡಾವಣೆಗಳ ಬಗ್ಗೆ ನಿರ್ಲಕ್ಷ್ಯ ಏಕೆ? ಆದಷ್ಟು ಬೇಗ ಅನುದಾನ ಮಂಜೂರು ಮಾಡಿ. ಬಡಾವಣೆ ಅಭಿವೃದ್ಧಿಪಡಿಸಿದ ನಂತರ ನಾನೇ ಮುಂದೆ ನಿಂತು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡಿಸುವುದಾಗಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಜಮೀರ್ ಅಹಮದ್, 2011–12ರಲ್ಲೇ ಬಡಾವಣೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಪ್ರಯತ್ನ ನಡೆಯಿತಾದರೂ ಸಾಕಾರವಾಗಲಿಲ್ಲ. ನಿಮ್ಮ (ಜಿಟಿಡಿ) ಜೊತೆ ಸಭೆ ನಡೆಸಿ, 5 ಕೋಟಿ ರೂ. ಅನುದಾನ ಬಿಡುಗಡೆಗೆ ಹಣಕಾಸು ಇಲಾಖೆಗೆ ಕಡತ ಕಳುಹಿಸಲಾಗಿತ್ತು. ಆದರೆ ಹಣಕಾಸು ಇಲಾಖೆಯವರು ಅಷ್ಟು ಹಣ ನೀಡಲು ಸಾಧ್ಯವಾಗದು ಎಂದು ಕಡತ ವಾಪಸ್ ಕಳುಹಿಸಿದರು. ಆದರೂ ಸ್ಲಂ ಬೋರ್ಡ್ ಬಡ್ಡಿ ಹಣದಲ್ಲಿ ಮಂಜೂರು ಮಾಡುವಂತೆ ಹಣಕಾಸು ಇಲಾಖೆಗೆ ಮತ್ತೆ ಪ್ರಸ್ತಾವನೆ ಕಳಿಸಿದ್ದು, ಅನುಮೋದನೆ ಸಿಗುವ ನಿರೀಕ್ಷೆ ಇದೆ. ಇನ್ನೊಂದು ವರ್ಷದಲ್ಲಿ ಸ್ಲಂಗಳಿಗೆ ಮೂಲಸೌಕರ್ಯ ಕಲ್ಪಿಸಿ, ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರ ಮಾಡುವುದಾಗಿ ಭರವಸೆ ನೀಡಿದರು.

ಇದನ್ನು ಒಪ್ಪದ ಶಾಸಕ ಜಿಟಿಡಿ, ಇನ್ನೂ ಒಂದು ವರ್ಷ ಸ್ಲಂ ನಿವಾಸಿಗಳು ನರಕ ಅನುಭವಿಸಬೇಕೇ? ದಸರಾ ಮಹೋತ್ಸವಕ್ಕೆ ವಿಶೇಷ ಅನುದಾನ ಮಂಜೂರು ಮಾಡುವ ವೇಳೆಗೆ ಸ್ಲಂ ಬಡಾವಣೆಗಳ ಮೂಲಸೌಕರ್ಯಕ್ಕೂ ಅನುದಾನ ಕಲ್ಪಿಸಿ. ಅಲ್ಲಿನ ನಿವಾಸಿಗಳಿಗೂ ದಸರಾ ಸಂಭ್ರಮಿಸಲು ಅನುವು ಮಾಡಿಕೊಡಿ ಎಂದು ಮನವಿ ಮಾಡಿದರು.

ಒಳ ಮೀಸಲಾತಿ ಸಮೀಕ್ಷೆಯ ಗಣತಿದಾರರ ಗೌರವ ಧನಕ್ಕಾಗಿ 17.28 ಕೋಟಿ ಬಿಡುಗಡೆ

ಮೈಸೂರು, ಆ.18(ಎಸ್‌ಪಿಎನ್)– ಪರಿಶಿಷ್ಟ ಜಾತಿ ಒಳಮೀಸಲಾತಿ ಸಮೀಕ್ಷೆಗಾಗಿ ರಾಜ್ಯದ 31 ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸಿದ 57,600 ಮಂದಿ ಗಣತಿದಾರರಿಗೆ ಗೌರವ ಧನ ನೀಡಲು 17.28 ಕೋಟಿ ರೂ. ಅನುದಾನ ಬಿಡುಗಡೆಗೆ ಸರ್ಕಾರ ಅನುಮತಿ ನೀಡಿದೆ.

ನ್ಯಾ.ಎಚ್.ಎನ್.ನಾಗಮೋಹನ್ ದಾಸ್ ಏಕ ಸದಸ್ಯ ಆಯೋಗದ ಮಧ್ಯಂತರ ವರದಿಯಲ್ಲಿನ ಶಿಫಾರಸ್ಸಿನಂತೆ 2025ರ ಮೇ 5ರಿಂದ ಜೂ.6ರವರೆಗೆ ಅಗತ್ಯ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ದತ್ತಾಂಶಗಳ ಸಂಗ್ರಹಣೆಗಾಗಿ ಗಣತಿದಾರರಾಗಿ ಕಾರ್ಯ ನಿರ್ವಹಿಸಿದ ಪ್ರತಿ ಗಣತಿದಾರರಿಗೆ 3 ಸಾವಿರ ರೂ.ನಂತೆ 57,600 ಶಿಕ್ಷಕರ ಗೌರವ ಧನ 17.28 ಕೋಟಿ ರೂ. ಬಿಡುಗಡೆಗೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತ ರಾಕೇಶ್ ಕುಮಾರ್ ಆದೇಶಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ 3,339 ಮಂದಿ ಗಣತಿದಾರರು ಭಾಗವಹಿಸಿದ್ದು, (ಜಿಲ್ಲಾಧಿಕಾರಿ ಸಿಓ ಕೋಡ್ 031480) ಇವರಿಗೆ ಗೌರವ ಧನ ನೀಡಲು ಒಟ್ಟು ಮೊತ್ತ 1,00,17,000 ರೂ., ಚಾಮರಾಜನಗರ ಜಿಲ್ಲೆಯಲ್ಲಿ 1,218 ಮಂದಿಗೆ (ಸಿಓ ಕೋಡ್ 031320) ಗೌರವ ಧನ ನೀಡಲು ಒಟ್ಟು ಮೊತ್ತ 36.54 ಲಕ್ಷ ರೂ., ಹಾಸನ ಜಿಲ್ಲೆಯಲ್ಲಿ 2,441 ಮಂದಿಗೆ (ಸಿಓ ಕೋಡ್ 031380) ಗೌರವ ಧನ ನೀಡಲು ಒಟ್ಟು ಮೊತ್ತ 73.23 ಲಕ್ಷ ರೂ. ಹಾಗೂ ಕೊಡಗು ಜಿಲ್ಲೆಯಲ್ಲಿ 557 ಮಂದಿಗೆ (ಸಿಓ ಕೋಡ್ 031400) ಒಟ್ಟು 16.71 ಲಕ್ಷ ಪಾವತಿಸಬೇಕಿದೆ.

ಆ. 20, 21 ಎರಡೆರಡ್ಲಾ ಐದು ನಾಟಕ ಪ್ರದರ್ಶನ

ಮೈಸೂರು,ಆ.18(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸಂಚಲನ ಮೈಸೂರು ವತಿಯಿಂದ ಆ. 20, 21 ರಂದು ಸಂಜೆ 6.30ಕ್ಕೆ ಆಸಿಫ್ ಕ್ಷತ್ರಿಯ ರಚನೆಯ 'ಎರಡೆರಡ್ಲಾ ಐದು' ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಚಲನ ಮೈಸೂರು ತಂಡದ ಮುಖ್ಯಸ್ಥ ದೀಪಕ್ ಮೈಸೂರು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವೊಂದು ಬಗೆದರೆ ದೈವದ ವಿನ್ಯಾಸವೇ ಮತ್ತೊಂದಾಗಿರುತ್ತದೆ. 1975ರ ಆಸುಪಾಸಿನಲ್ಲಿ ಈ ಕಥೆ ನಡೆಯುತ್ತದೆ. ಪ್ರಾಮಾಣಿಕ ಸರ್ಕಾರಿ ನೌಕರ ಆರ್ಥಿಕ, ಸಾಮಾಜಿಕ ಸಮರವನ್ನು ಹಂತ ಹಂತವಾಗಿ ಈ ನಾಟಕ ಬಿತ್ತರಿಸುತ್ತದೆ. ನಿರ್ದೇಶನ ಶ್ವೇತ ಶ್ರೀನಿವಾಸ್ ಹಾಗೂ ಆಸಿಫ್ ಕ್ಷತ್ರಿಯ ಅವರದ್ದಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಚಲನ ಮೈಸೂರು ತಂಡದ ಆಸಿಫ್ ಕ್ಷತ್ರಿಯ, ರಾಜೇಂದ್ರ, ಶ್ರೀಂಯುಕ್ತ ಆನಂದ್, ಶ್ವೇತಾ ಶ್ರೀನಿವಾಸ್ ಇದ್ದರು.

ಅರಣ್ಯ ಇಲಾಖೆಯಲ್ಲಿ 310 ವೀಕ್ಷಕರು; 540 ರಕ್ಷಕರ ನೇಮಕಾತಿ

ವನ್ಯಜೀವಿ–ಮಾನವ ಸಂಘರ್ಷ ನಿಯಂತ್ರಣಕ್ಕೆ; ಅರಣ್ಯ ಸಚಿವ ಈಶ್ವರ ಖಂಡ್ರೆ ಮಾಹಿತಿ



ಬೆಂಗಳೂರು, ಆ.18(ಕೆಎಂಶಿ)– ಅರಣ್ಯ ಇಲಾಖೆಯಲ್ಲಿ ಮುಂಚೂಣಿ ಸಿಬ್ಬಂದಿ ಕೊರತೆ ನೀಗಿಸಲು 310 ಅರಣ್ಯ ವೀಕ್ಷಕರ ನೇಮಕವಾಗಿದ್ದು, 540 ಅರಣ್ಯ ರಕ್ಷಕರ (ಗಾರ್ಡ್) ನೇಮಕಾತಿ ಪ್ರಗತಿಯಲ್ಲಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ವಿಧಾನಪರಿಷತ್ತಿನಲ್ಲಿಂದು ತಿಳಿಸಿದ್ದಾರೆ.

ಎಸ್.ಕೇಶವ ಪ್ರಸಾದ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕಾಡಾನೆ, ಹುಲಿ ಸೇರಿದಂತೆ ವನ್ಯಜೀವಿ ದಾಳಿಯಿಂದ ಮೃತಪಟ್ಟವರಿಗೆ ಪ್ರಸ್ತುತ 20 ಲಕ್ಷ ರೂ. ಪರಿಹಾರ ನೀಡಲಾಗುತ್ತಿದೆ. ಹಾವು ಕಚ್ಚಿ ಮೃತಪಟ್ಟವರಿಗೆ ಕೃಷಿ ಇಲಾಖೆ 2 ಲಕ್ಷ ರೂ. ಪರಿಹಾರ ಒದಗಿಸುತ್ತಿದೆ ಎಂದರು.

ವನ್ಯಜೀವಿಗಳ ಸಂಖ್ಯೆ ಹೆಚ್ಚಳವಾಗಿದೆ. ಸರ್ಕಾರ ಮಾನವ–ವನ್ಯಜೀವಿ ಸಂಘರ್ಷ ನಿಯಂತ್ರಣಕ್ಕೆ ಕ್ರಮ ಕೈಗೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಗೆ ಪ್ರತ್ಯೇಕ ಆನೆ ಕಾರ್ಯಪಡೆ ಮಂಜೂರಿಗೆ ಸೂಚಿಸಲಾಗಿದೆ 2–3 ದಿನಗಳಲ್ಲಿ ಅಧಿಕೃತ ಪ್ರಕಟಣೆ ಹೊರಡಿಸಲಾಗುವುದು.


ಪಡೆಯಲ್ಲಿ 32 ಸಿಬ್ಬಂದಿ ಇರಲಿದ್ದು, ಆನೆಗಳನ್ನು ಕಾಡಿಗೆ ಓಡಿಸುವ ಜೊತೆಗೆ ಪುಂಡಾನೆ ಸೆರೆ ಕಾರ್ಯಾಚರಣೆಯಲ್ಲೂ ಸಹಕರಿಸಲಿದ್ದಾರೆ.

ಆನೆಪಥ (ಕಾರಿಡಾರ್) ಮತ್ತು ಆವಾಸಸ್ಥಾನ ಸಂರಕ್ಷಣೆ ಅಧ್ಯಯನಕ್ಕೆ ಭಾರತೀಯ ವಿಜ್ಞಾನ ಮಂದಿರ (ಐಐಎಸ್‌ಸಿ) ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ, ಪ್ರೊ.ಆರ್.ಸುಕುಮಾರ್ ತಂಡ ಅಧ್ಯಯನ ಆರಂಭಿಸಿದೆ.

ಮಲೆಮಹದೇಶ್ವರ ಬೆಟ್ಟದ ವನ್ಯಜೀವಿ ಧಾಮದಲ್ಲಿ ತಾಯಿ ಹುಲಿ ಮತ್ತು ನಾಲ್ಕು ಮರಿ ಹುಲಿಗಳು ವಿಷಪ್ರಾಶನದಿಂದ ಮೃತಪಟ್ಟಿದ್ದು ಅತ್ಯಂತ ನೋವಿನ ಸಂಗತಿ, ಈಗಾಗಲೇ ತಪ್ಪಿತಸ್ಥರ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆಯಡಿ ಕ್ರಮ ಕೈಗೊಳ್ಳಲಾಗಿದೆ.

ಆನೆ–ಮಾನವ ಸಂಘರ್ಷ ನಿಯಂತ್ರಿಸಲು ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಸರ್ಕಾರ ಆದ್ಯತೆ ನೀಡಿದೆ. ರಾಮನಗರ ಜಿಲ್ಲೆ ಜನರ ಸಮಸ್ಯೆಗೆ ಸರ್ಕಾರ ಸ್ಪಂದಿಸಲಿದೆ. ಆನೆ ಶಿಬಿರ ನಿರ್ಮಾಣಕ್ಕೆ ಹಲವು ಭಾಗಗಳಿಂದ ಬೇಡಿಕೆ ಇದ್ದು ಪರಿಶೀಲಿಸಲಾಗುವುದು. ಮಂಗಗಳ ಹಾವಳಿಯಿಂದ ಬೆಳೆಗಳ ಹಾನಿ ಸರ್ಕಾರದ ಗಮನಕ್ಕೆ ಬಂದಿದೆ, ಮಂಗಗಳನ್ನು ಹಿಡಿಯಲು ಸೂಚನೆ ನೀಡುವುದಾಗಿ ತಿಳಿಸಿದರು.

ಹೊಸ ತಾಲೂಕು ರಚನೆ ಪ್ರಸ್ತಾವ ಸರ್ಕಾರದ ಮುಂದಿಲ್ಲ



ಬೆಂಗಳೂರು, ಆ.18(ಕೆಎಂಶಿ)–ರಾಜ್ಯದಲ್ಲಿ ಸದ್ಯಕ್ಕೆ ಹೊಸ ತಾಲೂಕುಗಳ ರಚನೆಯ ಪ್ರಸ್ತಾವ ಇಲ್ಲ. ಈಗಾಗಲೇ ರಚನೆಯಾಗಿರುವ ತಾಲೂಕುಗಳಿಗೆ ಮೂಲಸೌಲಭ್ಯ ಕಲ್ಪಿಸುವುದು ನಮ್ಮ ಆದ್ಯತೆಯಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ವಿಧಾನಸಭೆಗಿಂದು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆ ಟಿ.ರಘುಮೂರ್ತಿ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಈ ಹಿಂದೆ 2009ರಲ್ಲಿ ಹಿರಿಯ ಅಧಿಕಾರಿ ಎಂ.ಬಿ.ಪ್ರಕಾಶ್ ಸಮಿತಿ, ವೈಜ್ಞಾನಿಕ ಅಧ್ಯಯನ ಮಾಡಿ ಹೊಸ ತಾಲೂಕುಗಳ ರಚನೆಗೆ ಶಿಫಾರಸ್ಸು ಮಾಡಿತ್ತು, ಸರ್ಕಾರ ವರದಿ ಪರಿಗಣಿಸಲಿಲ್ಲ, 2013–14ರಲ್ಲಿ 43 ಹೊಸ ತಾಲೂಕುಗಳನ್ನು ರಚಿಸಲಾಗಿದೆ. ಆನಂತರ ಬಂದ ಸರ್ಕಾರಗಳು ಬೇರೆ ಬೇರೆ ಕಾರಣಗಳಿಗೆ ನೂತನ ತಾಲೂಕುಗಳನ್ನು ಘೋಷಣೆ ಮಾಡಿವೆ ಎಂದರು. ಸದ್ಯದ ಪರಿಸ್ಥಿತಿಯಲ್ಲಿ ತಾಲೂಕುಗಳ ರಚನೆ ಕಷ್ಟಸಾಧ್ಯ, ಮುಂದಿನ ದಿನಗಳಲ್ಲಿ ಸರ್ಕಾರ ಪರಿಶೀಲಿಸಲಿದೆ ಎಂದರು.

ನಾಳೆಯಿಂದ ಜೆಎಸ್‌ಎಸ್ ವಿವಿಯಲ್ಲಿ ಅಂತರರಾಷ್ಟ್ರೀಯ ಸಮ್ಮೇಳನ


ಮೈಸೂರು,ಆ.18(ಎಂಟಿವೈ)– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಜೆಎಸ್‌ಎಸ್ ಆಡಳಿತ ನಿರ್ವಹಣೆ ಕೇಂದ್ರದ ವತಿಯಿಂದ ಜೆಎಸ್‌ಎಸ್ ಐಟಿ ಸಂಸ್ಥೆಯ ಆರ್.ಪಿ. ಸಿಂಘಾನಿಯಾ ಸಭಾಂಗಣದಲ್ಲಿ ಆ.20, 21ರಂದು 'ಡಿಜಿಟಲ್ ಇನ್ನೋವೇಷನ್ ಅಂಡ್ ಟ್ರಾನ್ಸ್‌ಫರ್ಮೇಶನ್ ಇನ್ ಸೌತ್ ಈಸ್ಟ್ ಏಷ್ಯಾ' ವಿಷಯ ಕುರಿತ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಡೀನ್ ಡಾ.ಪಿ.ನಾಗೇಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಹಾಗೂ ಮಲೇಷಿಯಾದ 'ಮಲೇಷಿಯಾ ಯೂನಿವರ್ಸಿಟಿ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ' ಸಂಯುಕ್ತಾಶ್ರಯದಲ್ಲಿ ಸಮ್ಮೇಳನ ಆಯೋಜಿಸಲಾಗಿದೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟ್‌ಸೂರ್‌ಮಠ್ ವಹಿಸಲಿದ್ದಾರೆ. ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾ ನಾಗ್, 'ಮಲೇಷಿಯಾ ಯೂನಿವರ್ಸಿಟಿ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ' ಮುಖ್ಯಸ್ಥ ಪ್ರೊ. ಪ್ರೇಮ್‌ಕುಮಾರ್ ರಾಜ್‌ಗೋಪಾಲ್, ಜೆಎಸ್‌ಎಸ್ ಟೆಕ್ನಿಕಲ್ ಎಜುಕೇಷನ್ ಡಿವಿಷನ್ ನಿರ್ದೇಶಕ ಡಾ.ಬಿ.ಸುರೇಶ್, ಉಪಕುಲಪತಿ ಪ್ರೊ.ಎ.ಎನ್.ಸಂತೋಷ್‌ಕುಮಾರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸಮ್ಮೇಳನದಲ್ಲಿ ಅಂತಾರಾಷ್ಟ್ರೀಯ ತಜ್ಞರು, ಉದ್ಯಮ ಕ್ಷೇತ್ರದ ಪ್ರವೀಣರು, ನಿರ್ವಹಣೆಕಾರರು ಪಾಲ್ಗೊಳ್ಳಲಿದ್ದಾರೆ. ಡಿಜಿಟಲ್ ರೂಪಾಂತರ ಕ್ಷೇತ್ರದ ಒಳನೋಟ, ಸಂಶೋಧನೆ, ನಾವೀನ್ಯತೆ ಕುರಿತು ಬೆಳಕು ಚೆಲ್ಲಲಾಗುವುದು. 200 ಪ್ರಬಂಧಗಳ ಸಾರಾಂಶ, 120 ಸಂಪೂರ್ಣ ಪ್ರಬಂಧ ಸ್ವೀಕೃತವಾಗಿವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಡಾ. ಸ್ವರೂಪ್‌ಸಿಂಹ, ಡಾ. ಅರುಣಾ ಇದ್ದರು.

ಮಹಿಳೆಯರು, ಮಕ್ಕಳ ಮೇಲಿನ ದೌರ್ಜನ್ಯ: ಎರಡೂವರೆ ವರ್ಷದಲ್ಲಿ 43,052 ಪ್ರಕರಣ ದಾಖಲು

●ಪೋಕ್ಸೊ, ಲೈಂಗಿಕ ಕಿರುಕುಳ ಪ್ರಕರಣಗಳ ಸಂಖ್ಯೆಯೇ ಅಧಿಕ
●ವರದಕ್ಷಿಣೆ ಕಿರುಕುಳದಿಂದ 340 ಗೃಹಿಣಿಯರ ಸಾವು



ಬೆಂಗಳೂರು, ಆ.18– ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ಹಲವು ಕಾನೂನುಗಳು ಇದ್ದರೂ, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಎರಡು ವರ್ಷ, ಏಳು ತಿಂಗಳಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ 43,053 ದೌರ್ಜನ್ಯ ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿವೆ.

2023 ರಿಂದ 2025ರ ಜುಲೈ ಅವಧಿಯಲ್ಲಿ ಅತ್ಯಾಚಾರ, ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಸಾವು, ಗಂಡನಿಂದ ಕಿರುಕುಳ, ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012), ಬಾಲ್ಯವಿವಾಹ, ಬಾಲ ಕಾರ್ಮಿಕ, ಮಕ್ಕಳ ರಕ್ಷಣೆ ಮತ್ತು ಆರೈಕೆ ಕಾಯ್ದೆ (ಜೆ.ಜೆ.ಕಾಯ್ದೆ) ಅಡಿ 43 ಸಾವಿರಕ್ಕೂ ಹೆಚ್ಚು ಮಹಿಳೆಯರು ಹಾಗೂ ಮಕ್ಕಳ ಮೇಲೆ ನಡೆದ ದೌರ್ಜನ್ಯ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, ವರದಕ್ಷಿಣೆ ಕಿರುಕುಳ ಹಾಗೂ ಪೋಕ್ಸೊ ಕಾಯ್ದೆ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆಯೇ ಅಧಿಕವಾಗಿದೆ.

ಕೆಲಸದ ಸ್ಥಳ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದಕ್ಕೆ ಸಂಬಂಧಿಸಿದಂತೆ 16,273 ಪ್ರಕರಣಗಳು, ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದಂತೆ ಒಟ್ಟು 5,456 ಪ್ರಕರಣಗಳು ದಾಖಲಾಗಿದ್ದು, ವರದಕ್ಷಿಣೆ ಕಿರುಕುಳದಿಂದಲೇ 340 ಗೃಹಿಣಿಯರು ಮೃತಪಟ್ಟಿದ್ದಾರೆ. ಗಂಡನ ಕಿರುಕುಳಕ್ಕೆ ಸಂಬಂಧಿಸಿದಂತೆ 7,546 ಪ್ರಕರಣಗಳು ದಾಖಲಾಗಿವೆ ಎಂಬುದು ಪೊಲೀಸ್ ಇಲಾಖೆಯ ಅಂಕಿ–ಅಂಶಗಳಿಂದ ಗೊತ್ತಾಗಿದೆ.

ಅತ್ಯಾಚಾರ ಪ್ರಕರಣಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. 2023ರಲ್ಲಿ 600, 2024ರಲ್ಲಿ 739 ಹಾಗೂ 2025ರ ಜುಲೈವರೆಗೆ 549 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ. ಪೋಕ್ಸೊ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದು, 2023ರಲ್ಲಿ 3,902, 2024ರಲ್ಲಿ 4,064 ಹಾಗೂ 2025ರ ಜುಲೈವರೆಗೆ 2,544 ಪ್ರಕರಣಗಳು ದಾಖಲಾಗಿವೆ.

ಬಡತನ, ಅನಕ್ಷರತೆ, ಕಾನೂನಿನ ಕುರಿತು ಸಮರ್ಪಕ ಮಾಹಿತಿ ಇಲ್ಲದಿರುವುದರಿಂದ ಮಹಿಳೆಯರು ಹಾಗೂ ಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿವೆ. ಸಂತ್ರಸ್ತ ಮಹಿಳೆಯರಿಗೆ ಮಹಿಳಾ ಆಯೋಗವು ಪೊಲೀಸ್ ಇಲಾಖೆಯ ಸಹಕಾರದ ಮೂಲಕ ರಕ್ಷಣೆ ಒದಗಿಸುವುದರ ಜೊತೆಗೆ ಅವರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುತ್ತಿದೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ತಿಳಿಸಿದ್ದಾರೆ.

ಸ.ರ.ಸುದರ್ಶನರ ಅಗಲಿಕೆಗೆ ಎಂಎಲ್‌ಸಿ ಅಡಗೂರು ಹೆಚ್.ವಿಶ್ವನಾಥ್ ಕಂಬನಿ





ಸ.ರ.ಸುದರ್ಶನ ಹೆಚ್.ವಿಶ್ವನಾಥ್

ಮೈಸೂರು,ಆ.18(ಪಿಎಂ)–ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಅವರ ನಿಧನವು ಅತೀವ ದುಃಖ ತಂದಿದೆ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಕಂಬನಿ ಮಿಡಿದಿದ್ದಾರೆ.

ಸುದರ್ಶನ ಕನ್ನಡ ಭಾಷೆಯ ಅಪ್ಪಟ ಹೋರಾಟಗಾರರು. ಕನ್ನಡ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದವರು. ಜೊತೆಗೆ ಜಯಪ್ರಕಾಶ್ ನಾರಾಯಣ್ (ಜೆಪಿ) ಚಳುವಳಿಯಲ್ಲಿಯೂ ಪ.ಮಲ್ಲೇಶ್, ಶ್ರೀರಾಮ್, ರಾಮದಾಸ್, ನಂಜುಂಡಸ್ವಾಮಿ ಅಂತಹವರ ಜೊತೆಯಲ್ಲಿ ಹಾಗೂ ನಮ್ಮೊಟ್ಟಿಗೆ ದುಡಿದಂತಹವರು.

ಕನ್ನಡ ಮಾಧ್ಯಮದಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಇದೇ ಆ.6ರಂದು ನೃಪತುಂಗ ಕನ್ನಡ ಶಾಲೆ ಆವರಣದ ರಮಾಗೋವಿಂದ ರಂಗಮಂದಿರದಲ್ಲಿ ಪ್ರತಿಭಾ ಪುರಸ್ಕಾರ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸಿದ್ದೆ. ಸುದರ್ಶನ ಅವರು ನೃಪತುಂಗ ಕನ್ನಡ ಶಾಲೆ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಇವರ ನಿಧನವು ಕನ್ನಡ ಹೋರಾಟಗಾರರೆಲ್ಲರಿಗೂ ಅತೀವ ದುಃಖ ತಂದಿದೆ. ಮೃತರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿ ನೀಡುವಂತೆ ತಾಯಿ ಚಾಮುಂಡೇಶ್ವರಿ ದೇವಿಯಲ್ಲಿ ಪ್ರಾರ್ಥಿಸುತ್ತೇನೆ ಎಂದು ಅವರು ಸಂತಾಪ ಸೂಚಿಸಿದ್ದಾರೆ.

ಮೈಸೂರು ಭಾಗದಲ್ಲಿ ಸಹಕಾರಿ ಕ್ಷೇತ್ರ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆದಿಲ್ಲ

ಸೌಹಾರ್ದ ಸಂಯುಕ್ತ ಸಹಕಾರಿ ಅಧ್ಯಕ್ಷ ಜಿ.ನಂಜನ್‌ಗೌಡ ಬೇಸರ

ಮೈಸೂರು,ಆ.18(ಎಂಟಿವೈ)– ಮೈಸೂರು ಭಾಗದಲ್ಲಿ ಜನರಿಗೆ ಉಪಯುಕ್ತವಾದ ಕಾರ್ಯಕ್ರಮದೊಂದಿಗೆ ಸಹಕಾರಿ ಕ್ಷೇತ್ರವನ್ನು ಇನ್ನಷ್ಟು ಜನಪ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಅಧ್ಯಕ್ಷ ಜಿ. ನಂಜನಗೌಡ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ಬ್ಯಾಂಕಿಂಗ್ ಸಂಸ್ಥೆಗಳ ಪ್ರಭಾವ ಹೆಚ್ಚಾಗಿರುವುದರಿಂದ ಸಹಕಾರ ಕ್ಷೇತ್ರ ನಿರೀಕ್ಷಿತ ಪ್ರಮಾಣದಲ್ಲಿ ಬೆಳೆದಿಲ್ಲ. ಹೀಗಾಗಿ ಹೆಚ್ಚು ಜನಪ್ರಿಯಗೊಳಿಸಿ, ಹೆಚ್ಚು ಜನರನ್ನು ಸಹಕಾರಿಗಳನ್ನಾಗಿಸಿ, ಸಹಕಾರಿ ಸಂಸ್ಥೆಗಳ ಸಂಖ್ಯೆ ಹೆಚ್ಚಳ ಉದ್ದೇಶದಿಂದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಅನೇಕ ಕಾರ್ಯಕ್ರಮ ಹಮ್ಮಿಕೊಂಡಿದೆ. ಅಲ್ಲದೆ, ಮೈಸೂರಿನ ವಿಶ್ವೇಶ್ವರನಗರದಲ್ಲಿ ವಿಭಾಗೀಯ ಕಚೇರಿ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಗಿದ್ದು ಇದು 5 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ 3 ಅಂತಸ್ತಿನ ಕಟ್ಟಡವಾಗಿದೆ. ಆ. 22 ರಂದು ಬೆಂಗಳೂರು ಅರಮನೆ ಮೈದಾನದಲ್ಲಿ ಬೆಳ್ಳಿಹಬ್ಬ ನಡೆಯಲಿದ್ದು, ಸಾವಿರಾರು ಸಂಖ್ಯೆಯಲ್ಲಿ ಸಹಕಾರಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಪ್ರತಿ ಜಿಲ್ಲೆಯಲ್ಲೂ ಸಹಕಾರ ಕ್ಷೇತ್ರ ಕುರಿತು ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ. ಇ– ಸ್ಟ್ಯಾಂಪಿಂಗ್ ವ್ಯವಹಾರ ಮೂಲಕ ಆದಾಯ ಗಳಿಸಲಾಗುತ್ತಿದೆ. ಈ ರೀತಿ ಅನೇಕ ಕ್ರಮ ಕೈಗೊಳ್ಳಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಹಕಾರಿ ಮುಖಂಡರಾದ ಪ್ರಸನ್ನ, ಕೃಷ್ಣಾರೆಡ್ಡಿ, ಹೆಚ್.ವಿ. ರಾಜೀವ್, ಭಾರತಿ ಭಟ್, ಶರಣ್‌ಗೌಡ ಇನ್ನಿತರರು ಇದ್ದರು.

ಕೈದಿಗಳಿಗಿಂತ ಅತಿಥಿ ಶಿಕ್ಷಕರಿಗೆ ಸಂಬಳ ಕಡಿಮೆ!

ಪರಿಷತ್‌ನಲ್ಲಿ ಶಿಕ್ಷಕರ ಸಮಸ್ಯೆ ಅನಾವರಣಗೊಳಿಸಿದ ವಿವೇಕಾನಂದ



ಬೆಂಗಳೂರು, ಆ. 18– ಮಕ್ಕಳಿಗೆ ವಿದ್ಯೆ ಬೋಧಿಸುವ ಪ್ರೌಢಶಾಲೆಯ ಅತಿಥಿ ಶಿಕ್ಷಕರಿಗೆ ಜೈಲಿನ ಕೈದಿಗಳಿಗಿಂತ ಕಡಿಮೆ ಸಂಬಳ ಕೊಡಲಾಗುತ್ತಿದೆ ಎಂದು ವಿಧಾನಪರಿ ಷತ್‌ನಲ್ಲಿ ಜೆಡಿಎಸ್ ಸದಸ್ಯ ವಿವೇಕಾನಂದ ಅವರು ಅತಿಥಿ ಶಿಕ್ಷಕರ ಸ್ಥಿತಿಯನ್ನು ವಿವರಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ಕುರಿತು ಶಿಕ್ಷಣ ಸಚಿವರ ಗಮನ ಸೆಳೆದ ಅವರು, ಜೈಲಿನಲ್ಲಿರುವ ಕೈದಿಗಳಿಗೆ ದಿನಕ್ಕೆ 567 ರೂ. ಸಂಬಳ ನೀಡಲಾಗುತ್ತಿದೆ. ಆದರೆ, ಅತಿಥಿ ಶಿಕ್ಷಕರಿಗೆ ದಿನಕ್ಕೆ ಕೇವಲ 400 ರೂ. ಮಾತ್ರ ಸಂಬಳ ಕೊಡಲಾಗುತ್ತಿದೆ ಎಂದು ಹೇಳಿದರು. ಅತಿಥಿ ಶಿಕ್ಷಕರು ತಮ್ಮ ಮನೆಯಿಂದ ಶಾಲೆಗೆ 15ರಿಂದ 20 ಕಿ.ಮೀ. ಸ್ಕೂಟರ್‌ನಲ್ಲಿ ಬಂದು ಹೋಗುತ್ತಾರೆ. ಅವರಿಗೆ ಪೆಟ್ರೋಲ್ ವೆಚ್ಚವೇ ದಿನಕ್ಕೆ 100ರಿಂದ 150 ರೂ. ತಗಲುತ್ತದೆ. ಸರ್ಕಾರ ಅವರಿಗೆ 12500 ರೂ. ಸಂಬಳ ಕೊಡುತ್ತಿದ್ದು, ಆ ಶಿಕ್ಷಕರಿಗೆ ಪೆಟ್ರೋಲ್ ವೆಚ್ಚ ಕಳೆದು 7ರಿಂದ 8 ಸಾವಿರ ರೂ. ಮಾತ್ರ ದೊರೆಯುತ್ತಿದೆ. ಇದರಿಂದಾಗಿ ಹಲವು ಅತಿಥಿ ಶಿಕ್ಷಕರು ನಾಲ್ಕೈದು ಕಡೆ ಟ್ಯೂಷನ್ ಮಾಡಲು ಹೋಗುತ್ತಿದ್ದಾರೆ. ಖಾಯಂ ಶಿಕ್ಷಕರಿಗೆ 1.20 ಲಕ್ಷದಿಂದ 1.30 ಲಕ್ಷ ಸಂಬಳ ನೀಡುತ್ತಿದ್ದು, ಅವರಿಗೆ ನೀಡುವ ಸಂಬಳದ 10ನೇ ಒಂದು ಭಾಗದಷ್ಟು ಮಾತ್ರ ಅತಿಥಿ ಶಿಕ್ಷಕರಿಗೆ ನೀಡುವುದು ನ್ಯಾಯವೇ ಎಂದು ಪ್ರಶ್ನಿಸಿದರು. ಈ ಶಿಕ್ಷಕರು 10ರಿಂದ 15 ವರ್ಷಗಳಿಂದ ಅತಿಥಿ ಶಿಕ್ಷಕರಾಗಿಯೇ ಕೆಲಸ ಮಾಡುತ್ತಿದ್ದು, ಅವರನ್ನು ಖಾಯಂ ಮಾಡಬೇಕೆಂದು ಆಗ್ರಹಿಸಿದರು.

ಅವರಿಗೆ ಉತ್ತರಿಸಿದ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಅತಿಥಿ ಶಿಕ್ಷಕರಿಗೆ 2000 ರೂ. ಸಂಬಳ ಹೆಚ್ಚಳ ಮಾಡಲಾಗಿದೆ. ಇದು ಅಷ್ಟೇನೂ ದೊಡ್ಡ ಮೊತ್ತವಲ್ಲ. ಶಾಲೆಗಳಿಗೆ ಶಿಕ್ಷಕರ ಕೊರತೆಯೂ ಇದೆ. ಶೀಘ್ರದಲ್ಲೇ ಖಾಯಂ ಶಿಕ್ಷಕರನ್ನು ನೇಮಕ ಮಾಡಲಾಗುತ್ತದೆ ಎಂದು ತಿಳಿಸಿದರು.

ಕಂಗೊಳಿಸಲಿದೆ ದಸರಾ ಫಲಪುಷ್ಪ ಪ್ರದರ್ಶನ; 75 ಸಾವಿರ ಹೂವಿನ ಕುಂಡದಲ್ಲಿ 40 ಬಗೆಯ ಹೂವಿನ ಅಂದ

●ತೋಟಗಾರಿಕೆ ಇಲಾಖೆಯ 6 ನರ್ಸರಿಗಳಲ್ಲಿ ಹೂವಿನ ಗಿಡ ಪೋಷಣೆ
●ಹೊರರಾಜ್ಯದಿಂದ 25 ಸಾವಿರ ಹೂವಿನ ಕುಂಡ ಖರೀದಿಸಲು ನಿರ್ಧಾರ



ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಸಮೀಪವಿರುವ ಗೋರ್ಡಾನ್ ಪಾರ್ಕ್ ನರ್ಸರಿಯಲ್ಲಿ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಹೂವಿನ ಗಿಡ ಬೆಳೆಸಿ, ಪೋಷಿಸುತ್ತಿರುವುದು.



● ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.18– ನಾಡಹಬ್ಬ ದಸರಾ ಮಹೋತ್ಸವದ ಮತ್ತೊಂದು ಪ್ರಮುಖ ಆಕರ್ಷಣೆ ದಸರಾ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ ನಡೆದಿದ್ದು, ತೋಟಗಾರಿಕಾ ಇಲಾಖೆಯ ವಿವಿಧ ನರ್ಸರಿಗಳಲ್ಲಿ 35ರಿಂದ 40 ಬಗೆಯ ಹೂವಿನ ಗಿಡಗಳನ್ನು 75 ಸಾವಿರ ಕುಂಡಗಳಲ್ಲಿ ಬೆಳೆಸಲಾಗಿದೆ.

ಮೈಸೂರಿನ ಹಾರ್ಡಿಂಗ್ ವೃತ್ತದ ಬಳಿಯ ಕುಪ್ಪಣ್ಣ ಪಾರ್ಕ್‌ನಲ್ಲಿ ಸೆ.22ರಿಂದ ಅ.2 ಅಥವಾ 3ರವರೆಗೆ ದಸರಾ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಈ ಬಾರಿ 35ರಿಂದ 40ಕ್ಕೂ ಹೆಚ್ಚು ತಳಿಯ ವಿವಿಧ ಹೂವಿನ ಹಾಗೂ ಅಲಂಕಾರಿಕ ಗಿಡಗಳು ನೋಡುಗರ ಮನಸೂರೆಗೊಳ್ಳಲಿವೆ. ಫಲಪುಷ್ಪ ಪ್ರದರ್ಶನಕ್ಕಾಗಿ ಈಗಾಗಲೇ ವಿವಿಧ ನರ್ಸರಿಗಳಲ್ಲಿ 120 ದಿನದಿಂದ 30 ದಿನದಲ್ಲಿ ಹೂವು ಬಿಡುವ ಗಿಡಗಳನ್ನು ಪಾಟ್‌ಗಳಲ್ಲಿ ಬೆಳೆಸಲಾಗಿದ್ದು, ಫಲಪುಷ್ಪ ಪ್ರದರ್ಶನ ಈ ಬಾರಿ ಜನಾಕರ್ಷಣೀಯವಾಗಿಸಲು ಕ್ರಮ ಕೈಗೊಳ್ಳಲಾಗಿದೆ.

75 ಸಾವಿರ ಹೂವಿನ ಕುಂಡ: ನವರಾತ್ರಿಯ ವೇಳೆ ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯಲಿರುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ ವಿವಿಧ ಬಗೆಯ ಹೂವಿನ ಗಿಡಗಳು ಪ್ರವಾಸಿಗರನ್ನು ಸೆಳೆಯಲಿವೆ. ಈ ಬಾರಿ ಒಂದು ಲಕ್ಷಕ್ಕೂ ಹೆಚ್ಚು ಕುಂಡಗಳಲ್ಲಿ ಬೆಳೆದಿರುವ ಬಗೆ ಬಗೆಯ ಹೂವಿನ ಗಿಡಗಳನ್ನು ಜೋಡಣೆ ಮಾಡಲಾಗುತ್ತದೆ. ಅದಕ್ಕಾಗಿ ಫಲಪುಷ್ಪ ಪ್ರದರ್ಶನಕ್ಕೆ ಬಳಸುವ ಹೂವಿನ ಕುಂಡಗಳನ್ನು, ಕೇಂದ್ರ ಸಸ್ಯಾಗಾರ, ಕುಪ್ಪಣ್ಣ ಪಾರ್ಕ್, ಸರ್ಕಾರಿ ಅತಿಥಿ ಗೃಹ, ಜಲದರ್ಶಿನಿ ವಿಭಾಗ, ಕರ್ಜನ್ ಪಾರ್ಕ್, ಗೋರ್ಡಾನ್ ಪಾರ್ಕ್ ಮತ್ತು ವಸ್ತುಪ್ರದರ್ಶನದಲ್ಲಿರುವ ತೋಟಗಾರಿಕೆ ವಿಭಾಗಗಳಲ್ಲಿ ಪಾಲನೆ ಮಾಡಲಾಗುತ್ತಿದೆ.

ಗಿಡಗಳಿಗೆ ಗೊಬ್ಬರ ಹಾಕಿ ಸಕಾಲಕ್ಕೆ ನೀರುಣಿಸುವ ಮೂಲಕ ಹೂವಿನ ಗಿಡದ ಸತ್ವವನ್ನು ಕಾಪಾಡಿಕೊಳ್ಳಲಾಗುತ್ತಿದೆ. ಈ ಹೂವಿನ ಗಿಡಗಳ ಪಾಟ್‌ಗಳಲ್ಲಿ ಕುಪ್ಪಣ್ಣ ಪಾರ್ಕ್‌ನ ಆಯ್ದ ಸ್ಥಳದಲ್ಲಿ, ವಾಕಿಂಗ್ ಪಾಥ್‌ನಲ್ಲಿ ಜೋಡಿಸಲಾಗುತ್ತದೆ. ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ವಿವಿಧ ನರ್ಸರಿಯಲ್ಲಿ ಬೆಳೆಸಿರುವ ಗಿಡಗಳಲ್ಲದೆ, ಹೊರರಾಜ್ಯದಿಂದ 25 ಸಾವಿರ ಕುಂಡಗಳಲ್ಲಿ ಬೆಳೆದಿರುವ ಗಿಡಗಳನ್ನು ಖರೀದಿಸಿ ತರಲಾಗುತ್ತಿದ್ದು, ಈ ಬಾರಿ ಲಕ್ಷಕ್ಕೂ ಅಧಿಕ ಹೂವಿನ ಗಿಡಗಳು ಫಲಪುಷ್ಪ ಪ್ರದರ್ಶನಕ್ಕೆ ಮೆರುಗು ನೀಡಲಿದೆ.

ಯಾವ ಯಾವ ಗಿಡ: ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ 35 ರಿಂದ 40 ಬಗೆಯ ಹೂವಿನ ತಳಿಯ ಗಿಡಗಳನ್ನು ಬೆಳೆಸಲಾಗಿದೆ. ದಸರಾ ಫಲಪುಷ್ಪ ಪ್ರದರ್ಶನಕ್ಕೆ 120 ದಿನದ ಮೊದಲೇ ನಾನಾ ಹೂವಿನ ಬೀಜವನ್ನು ಬಿತ್ತನೆ ಮಾಡಲಾಗಿದ್ದು, ಅವಧಿಗೆ ಸರಿಯಾಗಿ ಹೂವು ಬಿಡುವ ಗಿಡಗಳನ್ನು ಬೆಳೆಸಲಾಗಿದೆ. ಅವುಗಳಲ್ಲಿ ಜಿನ್ನಿಯಾ, ಸ್ನಾಪ್ ಡ್ರಾಗನ್, ಸಾಲ್ವಿಯಾ, ಜೆರೇನಿಯಂ, ಕಾಸ್ಮೋಸ್, ಮಾರಿ ಗೋಲ್ಡ್, ಗೈಲಾರ್ಡಿಯಾ, ಗಜೆನಿಯಾ, ಕ್ಯಾಲೆಡುಲ, ಪೆಟುನಿಯಾ, ಪೆಂಟಾಸ್, ಥೋರೇನಿಯಂ, ಕಾಕ್ಸ್ ಕಾಂಬ್, ಜೇಡ, ಚೀನಾ ಆಸ್ಟರ್, ಕೋಲಿಯಸ್, ಕ್ರೈಸಾಂಥೆಮಮ್ ಸೇರಿದಂತೆ ವಿವಿಧ ಹೂವಿನ ಗಿಡಗಳು ಪ್ರದರ್ಶನಕ್ಕೆ ಸಿದ್ಧವಿದೆ.

ಗಾಜಿನ ಮನೆಯಲ್ಲಿ ಸಬರಮತಿ ಆಶ್ರಮ: ದಸರಾ ಫಲಪುಷ್ಪ ಪ್ರದರ್ಶನದ ಗಾಜಿನ ಮನೆಯಲ್ಲಿ ಲಕ್ಷಾಂತರ ಹೂವಿಂದ ಸಬರಮತಿ ಆಶ್ರಮ ನಿರ್ಮಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಟೆಂಡರ್ ಪ್ರಕ್ರಿಯೆಗೆ ಚಾಲನೆ ದೊರೆತಿದ್ದು, ಅಲಂಕಾರಿಕ ಸಂಸ್ಥೆಗಳನ್ನು ಆಹ್ವಾನಿಸಲಾಗಿದೆ. ಇದಲ್ಲದೇ ಫಲಪುಷ್ಪ ಪ್ರದರ್ಶನದಲ್ಲಿ ಹೂವುಗಳಿಂದ ವಿವಿಧ ಆಕೃತಿಗಳು ತಲೆ ಎತ್ತಲಿವೆ. ಈ ಬಾರಿ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೀಯ ಕೇಂದ್ರಬಿಂದುವಾಗಿ ಜನಾಕರ್ಷಣೀಯವಾಗಿ ಕಣ್ಮನ ಸೆಳೆಯಲಿದೆ.


ಮೈಮುಲ್‌ನಿಂದ ನಿತ್ಯ 10 ಲಕ್ಷ ಲೀ. ಹಾಲು ಶೇಖರಣೆ

4.5 ಲಕ್ಷ ಲೀ. ಮಾರಾಟ, ಉಳಿದ ಹಾಲಿನಿಂದ ಉತ್ಪನ್ನಗಳ ತಯಾರಿಕೆ: ಮೈಮುಲ್ ಅಧ್ಯಕ್ಷ ಆರ್.ಚಲುವರಾಜು

ತಿ.ನರಸೀಪುರ, ಆ.18– ಮೈಸೂರು ಜಿಲ್ಲಾ ಹಾಲು ಒಕ್ಕೂಟಕ್ಕೆ ರೈತರು ನಿತ್ಯ 10 ಲಕ್ಷ ಲೀಟರ್ ಹಾಲು ಸರಬರಾಜು ಮಾಡುತ್ತಿದ್ದು, ಈ ಪೈಕಿ 4.5 ಲಕ್ಷ ಲೀಟರ್ ಹಾಲು ಮಾರಾಟವಾಗುತ್ತಿದೆ ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ತಿಳಿಸಿದರು.

ತಾಲೂಕಿನ ದೊಡ್ಡಮುಲಗೂಡು ಗ್ರಾಮದಲ್ಲಿ ನಡೆದ ಹಾಲು ಉತ್ಪಾದಕರ ಸಹಕಾರ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಮೈಮುಲ್ ರೈತರ ನಂಬಿಕಸ್ಥ ಒಕ್ಕೂಟವಾಗಿದ್ದು, ರೈತರು ಎಷ್ಟೇ ಪ್ರಮಾಣದಲ್ಲಿ ಹಾಲು ಸರಬರಾಜು ಮಾಡಿದರೂ ಅದನ್ನು ನಿರಾಕರಿಸದೆ ಅವರಿಂದ ಹಾಲು ಪಡೆದು ಸಮಯಕ್ಕೆ ಸರಿಯಾಗಿ ಬಟವಾಡೆ ಮಾಡಿಕೊಂಡು ಬರಲಾಗುತ್ತಿದೆ. ಮಾರಾಟವಾಗದೇ ಉಳಿಯುವ ಹಾಲನ್ನು ಶೇಖರಣೆ ಮಾಡಿ ಹಾಲಿನ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡಲಾಗುತ್ತಿದೆ. ರಾಜ್ಯದಲ್ಲಿ ರೈತರಿಗೆ ಹಾಲಿನ ದರ ಹೆಚ್ಚಿಗೆ ನೀಡುತ್ತಿರುವುದು ಮೈಸೂರು ಜಿಲ್ಲಾ ಹಾಲು ಒಕ್ಕೂಟವೇ ಆಗಿದೆ ಎಂದರು.

ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವ ರೈತರು ಹೈನುಗಾರಿಕೆಯನ್ನು ಉಪಕಸುಬು ಎಂದು ಪರಿಗಣಿಸದೇ ಅದನ್ನು ಉದ್ಯಮವಾಗಿ ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸಬೇಕು. ಮನೆ ಮನೆಯಲ್ಲೂ ಹೈನುಗಾರಿಕೆ ಆರಂಭಿಸಿ ಆರ್ಥಿಕ ಸ್ವಾವಲಂಬನೆ ಸಾಧಿಸುವ ಕಡೆಗೆ ಗಮನ ನೀಡುವಂತೆ ಸಲಹೆ ನೀಡಿದರು.



ಸರ್ವ ಸದಸ್ಯರ ಸಭೆಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರನ್ನು ಸನ್ಮಾನಿಸಲಾಯಿತು.

> ದೊಡ್ಡ ಮುಲಗೂಡು ಹೈನುಗಾರಿಕೆಯಲ್ಲಿ ಪ್ರಗತಿ ಸಾಧಿಸಿದ್ದು, 2400 ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಬಿಎಂಸಿ ಕೇಂದ್ರ ನಿರ್ಮಾಣವಾಗಿದೆ. ಒಕ್ಕೂಟ ಅಥವಾ ಸಹಕಾರ ಸಂಘದಿಂದ ದೊರಕಬಹುದಾದ ಯಾವುದೇ ಸವಲತ್ತುಗಳಿದ್ದರೂ ಅದನ್ನು ಪ್ರಾಮಾಣಿಕವಾಗಿ ರೈತರಿಗೆ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಅಲ್ಲದೇ ಸಹಕಾರ ಸಂಘಕ್ಕೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಅಭಿವೃದ್ಧಿಯ ತುಡಿತ ಹೊಂದಿರುವ ನಿರ್ದೇಶಕರನ್ನು ಅವಿರೋಧವಾಗಿ ಆಯ್ಕೆ ಮಾಡಿರುವುದು ನಿಜಕ್ಕೂ ಶ್ಲಾಘನೀಯ.
> – ಓಂಪ್ರಕಾಶ್, ಮೈಮುಲ್ ಮಾಜಿ ಅಧ್ಯಕ್ಷ.

ದೊಡ್ಡಮುಲಗೂಡು ಹೆಚ್ಚು ಹಾಲು ಉತ್ಪಾದಿಸುವ ಗ್ರಾಮವಾಗಿದ್ದು, ಒಕ್ಕೂಟ ಅಥವಾ ವೈಯಕ್ತಿಕವಾಗಿ ಯಾವುದೇ ಸೌಲಭ್ಯಗಳನ್ನು ದೊರಕಿಸಿಕೊಡಲು ಗ್ರಾಮಕ್ಕೆ ಮೊದಲ ಆದ್ಯತೆ ನೀಡಲಾಗುತ್ತದೆ. ಒಕ್ಕೂಟದಿಂದ ಈಗಾಗಲೇ ಕಟ್ಟಡ, ಸಭಾಂಗಣ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಲಾಗಿದೆ. 61 ಮ್ಯಾಟ್‌ಗಳನ್ನು ರೈತರಿಗೆ ನೀಡಲಾಗಿದ್ದು, ಇನ್ನೂ ಹೆಚ್ಚಿನ ಮ್ಯಾಟ್‌ಗಳನ್ನು ಸರಬರಾಜು ಮಾಡಲಾಗುತ್ತದೆ. ಮುಂದಿನ ತಿಂಗಳಿಂದ ಶೇ.50ರ ಸಬ್ಸಿಡಿ ದರದಲ್ಲಿ ಚಾಪ್ ಕಟರ್ ನೀಡಲಾಗುತ್ತದೆ ಎಂದರು.

ರೈತರು ಒಂದು ಲೀಟರ್ ಹಾಲು ಕರೆಯಬೇಕೆಂದರೆ ಇರುವ ಕಷ್ಟದ ಅರಿವು ನನಗಿದೆ. ಎಲ್ಲಿ ಬಟವಾಡೆ ಕಡಿಮೆಯಾಗುತ್ತದೆ ಎಂದು ಮನೆಗೂ ಅರ್ಧ ಲೀಟರ್ ಹಾಲನ್ನು ಇಟ್ಟುಕೊಳ್ಳದೇ ಡೈರಿಗೆ ಹಾಕುತ್ತಿದ್ದಾರೆ. ಹಾಗಾಗಿ ರೈತರಿಗೆ ಶ್ರಮಕ್ಕೆ ಪ್ರತಿಫಲ ದೊರಕಲಿದೆ. ರೈತರು ಗುಣಮಟ್ಟದ ಹಾಲಿನ ಸರಬರಾಜಿಗೆ ಗಮನಹರಿಸಬೇಕು. ಯಾರೋ ಒಬ್ಬರು ನೀರು ಬೆರೆಸಿದ ಹಾಲು ನೀಡುವುದ ರಿಂದ ರೈತರು ತಲೆ ತಗ್ಗಿಸುವ ಪರಿಸ್ಥಿತಿ ನಿರ್ಮಾಣವಾಗುವುದು ಬೇಡ. ಎಲ್ಲರೂ ಒಟ್ಟಾಗಿ ಗುಣಮಟ್ಟದ ಹಾಲು ಕೊಡದ ವ್ಯಕ್ತಿ ಹಾಲನ್ನು ನಿರಾಕರಿಸಿದಾಗ ಒಕ್ಕೂಟ ಹಾಗೂ ಸಂಘ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದರು.

ಸಂಘದ ಸಿಇಓ ಡಿ.ಎಲ್.ಗುರುಪ್ರಸಾದ್ ಸಂಘದ ವಾರ್ಷಿಕ ವರದಿ ಮಂಡಿಸಿ ಮಾತನಾಡಿ, ಸಂಘ 2024–25ನೇ ಸಾಲಿನಲ್ಲಿ 8,09,789 ರೂ. ನಿವ್ವಳ ಲಾಭಗಳಿಸಿ ಉತ್ತಮವಾಗಿ ಮುನ್ನಡೆಯುತ್ತಿದ್ದು, ಮೈಮುಲ್ ಅಧ್ಯಕ್ಷ ಚೆಲುವರಾಜು ಹಾಗೂ ನಿರ್ದೇಶಕ ಓಂ ಪ್ರಕಾಶ್ ಅವರ ಸಹಕಾರ ಇದಕ್ಕೆ ಕಾರಣ. ಸಂಘದ ಕಟ್ಟಡ ನಿರ್ಮಾಣಕ್ಕೆ ಚೆಲುವರಾಜು 10 ಲಕ್ಷ ಹಾಗೂ ಓಂಪ್ರಕಾಶ್ 4 ಲಕ್ಷ ನೀಡಿದ್ದು ಅವರಿಗೆ ಸಂಘದ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಇದೇ ವೇಳೆ ಸಂಘಕ್ಕೆ ಅತಿ ಹೆಚ್ಚು ಹಾಲು ಸರಬರಾಜು ಮಾಡಿದ ಡಿ.ಬಿ.ರಮೇಶ್ (19,063 ಲೀಟರ್), ರವಿಕುಮಾರ್ (18466 ಲೀಟರ್) ಹಾಗೂ ಎಸ್.ಮಹದೇವು (16,040 ಲೀಟರ್) ಅವರಿಗೆ ಬಹುಮಾನ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಡಿ.ಕೆ.ಸತೀಶ್, ಉಪಾಧ್ಯಕ್ಷ ಹರೀಶ್, ನಿರ್ದೇಶಕರಾದ ನಾಗರಾಜು, ಮಲ್ಲಾರಾಧ್ಯ ಮಹೇಶ್, ನವೀನ್ ಕುಮಾರ್, ಮಾದೇಗೌಡ, ಮಂಜು, ಜ್ಯೋತಿ, ಸೌಮ್ಯ, ಪುಟ್ಟಸಿದ್ದಮ್ಮ ಮಹದೇವ್, ಮಾರ್ಗ ವಿಸ್ತರಣಾಧಿಕಾರಿ, ಪ್ರಮೋದ್, ದಿವ್ಯಶ್ರೀ, ಡಾ.ಕಾರ್ತಿಕ್, ಹಾಲು ಪರೀಕ್ಷಕ ಚಂದ್ರಶೇಖರ್, ಮಹೇಶ್, ಶಿವಪ್ರಸಾದ್, ಅನು ಸೇರಿದಂತೆ ಗ್ರಾಮಸ್ಥರು, ಷೇರುದಾರರು ಹಾಜರಿದ್ದರು.

ಸಡಗರದ ಶ್ರೀಕೃಷ್ಣ ಜನ್ಮಾಷ್ಟಮಿ



ಕೆ.ಆರ್.ನಗರ, ಆ.18– ಇಲ್ಲಿನ ಶ್ರೀಕೃಷ್ಣ ದೇವಸ್ಥಾನದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಸಡಗರ ಸಂಭ್ರಮದಿಂದ ನೆರವೇರಿತು.

ಜನ್ಮಾಷ್ಟಮಿ ಅಂಗವಾಗಿ ಶನಿವಾರ ಶಾಲಾ ಮಕ್ಕಳಿಗೆ ಚಿತ್ರ ಸ್ಪರ್ಧೆ, ದಾಸರ ಪದಗಳ ಸ್ಪರ್ಧೆ ಮತ್ತು ಭಾನುವಾರ ಪುಟಾಣಿ ಮಕ್ಕಳಿಗೆ ಶ್ರೀಕೃಷ್ಣ ಮತ್ತು ರಾಧಾಯರ ವೇಷ ಸ್ಪರ್ಧೆಗಳನ್ನು ಶ್ರೀಕೃಷ್ಣ ಪ್ರತಿಷ್ಠಾನದ ವತಿಯಿಂದ ಆಯೋಜಿಸಲಾಗಿತ್ತು. 250ಕ್ಕೂ ಹೆಚ್ಚು ಮಕ್ಕಳು ಸ್ಪರ್ಧೆಗಳಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಸಂಜೆ ನಡೆದ 'ಬಾಲ ಗೋಕುಲ' ಮೆರವಣಿಗೆಯಲ್ಲಿ ನೂರಕ್ಕೂ ಹೆಚ್ಚು ಮಕ್ಕಳು ಶ್ರೀಕೃಷ್ಣ ಮತ್ತು ರಾಧೆ ವೇಷ ಧರಿಸಿ ಮೆರವಣಿಗೆಯಲ್ಲಿ ಸಂತಸದಿಂದ ಪಾಲ್ಗೊಂಡಿದ್ದರು. ಸಮಿತಿ ಸದಸ್ಯರು ಶ್ರೀಕೃಷ್ಣ ನಾಮ ಸ್ಮರಣೆಯ ತಾಳಕ್ಕೆ ಹೆಜ್ಜೆ ಹಾಕಿದರು. ಜೊತೆಗೆ ಭಜನಾ ಮಂಡಳಿ ಮಹಿಳಾ ಸದಸ್ಯರು ಭಜನೆಗೆ ಕುಣಿದಿದ್ದು ವಿಶೇಷವಾಗಿತ್ತು.

ಮೆರವಣಿಗೆ ನಂತರ ಶ್ರೀಕೃಷ್ಣ ಮತ್ತು ರಾಧಾ ವೇಷಧಾರಿಗಳಿಗೆ 'ಮೊಸರು ಕುಡಿಕೆ' ಆಯೋಜಿಸಲಾಗಿತ್ತು. ವೇಷಧಾರಿ ಮಕ್ಕಳು ಮೊಸರು ಕುಡಿಕೆ ಒಡೆದು ನಲಿದರು.

ಮೆರವಣಿಗೆಯಲ್ಲಿ ಶ್ರೀಕೃಷ್ಣ ಪ್ರತಿಷ್ಠಾನದ ಗೌರವಾಧ್ಯಕ್ಷ ಡಾ.ಮೋಹನ್‌ದಾಸ್ ಭಟ್, ಡಾ.ಜನಾರ್ಧನ ಭಟ್, ಡಾ.ಗೋವರ್ಧನಾಚಾರ್, ಎ.ನಾಗರಾಜ್, ನಾಗರಾಜ ಪುರಾಣಿಕ್, ಕೃಷ್ಣಮೂರ್ತಿ, ಕೆ. ನಾಗೇಶ್, ಚೈತನ್ಯ, ಯು.ಕೃಷ್ಣ ಭಟ್, ಕೇಶವ, ಪದ್ಮನಾಭ, ಆಟೋ ಶಂಕರ್, ರಿಷಿಕೇಶ್, ಆನಂದ್, ಶ್ರೀಹರ್ಷ, ಶಮಂತ್, ಶ್ರೀನಿಧಿ, ರಮಾನಂದ್, ಕೆ.ನರಸಿಂಹ ಸೋಮಯಾಜಿ, ಪ್ರಶಾಂತ್, ಪ್ರದೀಪ್, ಡಾ.ಅಕ್ಷತಾ, ಅರ್ಪಿತ, ಶ್ರೀರಕ್ಷಾ, ವರುಣ್, ಮೋಹನ್ ರಾವ್, ಹರಿಯಣ್ಣ, ಅಮೋದ್, ಶ್ರೀಕೃಷ್ಣ ಭಜನಾ ಮಂಡಳಿ ಮಹಿಳಾ ಸದಸ್ಯರಾದ ಸುಮಾ, ಶೋಭಾ ಹೃಷಿಕೇಶ್, ಸತ್ಯವತಿ ರಮೇಶ್ ಸೇರಿದಂತೆ ಅನೇಕರಿದ್ದರು.

ಪ್ರತಿಯೊಬ್ಬರೂ ದೇಶದ ಅಭಿವೃದ್ಧಿಗೆ ಶ್ರಮಿಸಬೇಕು

ಸ್ವಾತಂತ್ರ್ಯ ದಿನಾಚರಣೆಯಲ್ಲಿ ತಹಸೀಲ್ದಾರ್ ಮೋಹನಕುಮಾರಿ

ಸರಗೂರು, ಆ.18– ಪ್ರತಿಯೊಬ್ಬರೂ ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ತಹಸೀಲ್ದಾರ್ ಮೋಹನಕುಮಾರಿ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ, ಅಂಬೇಡ್ಕರ್ ಅವರ ಸಂವಿಧಾನ ಪೀಠಿಕೆ ಓದುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವಲ್ಲಿ ಸಾಕಷ್ಟು ಮಹಾನ್ ನಾಯಕರು ತಮ್ಮ ಜೀವವನ್ನೇ ತ್ಯಾಗ, ಬಲಿದಾನಗೈದಿದ್ದಾರೆ. ಪ್ರತಿಯೊಬ್ಬರಲ್ಲೂ ದೇಶ ಪ್ರೇಮ ಬೆಳೆಯಬೇಕು. ಸಮಾಜದಲ್ಲಿ ಜಾತೀಯತೆ ಅಳಿಸಬೇಕು. ಸಮಾನತೆ ಬೆಳೆಯಬೇಕು. ಎಲ್ಲರೂ ಒಂದೇ ಎನ್ನುವ ಮನೋಭಾವ ಮೂಡಿಸಿಕೊಳ್ಳಬೇಕು. ಆ ಮೂಲಕ ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಡಾ.ವೈ.ಡಿ. ರಾಜಣ್ಣ ಮಾತನಾಡಿದರು. ಜಿಹೆಚ್‌ಪಿಎಸ್ ಹಳೆಯೂರು ಶಿಕ್ಷಕ ರಂಗನಾಥ್ ಪ್ರಧಾನ ಭಾಷಣ ಮಾಡಿ ದೇಶಕ್ಕಾಗಿ ಹೋರಾಡಿದ ಮಹನೀಯರ ಕುರಿತು ಮಾತನಾಡಿದರು.



ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದವರು ಹಾಗೂ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ವಿನಾಯಕ ಪ್ರಸನ್ನ, ಶ್ರೀನಿವಾಸ್, ನೂರಾಳಸ್ವಾಮಿ, ಚಲುವಕೃಷ್ಣ, ಹೇಮಾವತಿ, ದಿವ್ಯ, ಚಂದ್ರಕಲಾ, ಉಮಾ, ಸಣ್ಣತಾಯಮ್ಮ, ಚೈತ್ರಾ, ಜಿಪಂ ಮಾಜಿ ಸದಸ್ಯ ಪಿ.ರವಿ, ಸಮಾಜ ಸೇವಕ ಎಸ್.ವಿ.ವೆಂಕಟೇಶ್, ಕಸಾಪ ಅಧ್ಯಕ್ಷ ಕೆಂಡಗಣ್ಣಸ್ವಾಮಿ, ರೈತ ಕಲ್ಯಾಣ ಸಂಘದ ಯುವ ಘಟಕದ ರಾಜ್ಯಾಧ್ಯಕ್ಷ ಎಸ್.ಬಿ.ಸಮಂತ್, ಶಿವಣ್ಣ, ವಾಹನ ಚಾಲಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಮುಖ್ಯಾಧಿಕಾರಿ ಸಂತೋಷ್ ಕುಮಾರ್, ನೀರಾವರಿ ಇಲಾಖೆ ಎಇಇ ಉಷಾ, ತಾಪಂ ಇಓ ಪ್ರೇಮ್ ಕುಮಾರ್, ಎಸ್‌ಐ ಕಿರಣ್, ಆರ್‌ಎಫ್‌ಓ ಅಕ್ಷಯ್ ಕುಮಾರ್ ಇತರರಿದ್ದರು.

ಗ್ಯಾರಂಟಿಗಳಿಂದ ಸರ್ಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ

ಮಾಜಿ ಶಾಸಕ ಬಿ.ಹರ್ಷವರ್ಧನ್ ಆರೋಪ

ನಂಜನಗೂಡು, ಆ.18– ಗ್ಯಾರಂಟಿ ಯೋಜನೆಗಳಿಂದ ರಾಜ್ಯ ಸರ್ಕಾರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಕಳೆದ 3 ತಿಂಗಳಿಂದ ಮಹಿಳೆಯರಿಗೆ 2 ಸಾವಿರ ಸಹಾಯಧನ ದೊರೆತಿಲ್ಲ ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಆರೋಪಿಸಿದರು.

ನಗರದ ಯಾತ್ರಿ ಭವನ್ ಕಲ್ಯಾಣ ಮಂಟಪದಲ್ಲಿ ಸೋಮವಾರ ನಡೆದ ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಶಕ್ತಿ ಯೋಜನೆಯಿಂದಾಗಿ ಸಾರಿಗೆ ಬಸ್‌ಗಳಲ್ಲಿ ವಿದ್ಯಾರ್ಥಿಗಳು ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಸ್ಥಳಾವಕಾಶ ಲಭ್ಯವಾಗದೆ ತೊಂದರೆಗೆ ಸಿಲುಕಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಪ್ರೇರಿತರಾಗಿ ವಿವಿಧ ರಾಜ್ಯಗಳು ಚುನಾವಣೆ ವೇಳೆ ಗ್ಯಾರಂಟಿಗಳನ್ನು ಜಾರಿಗೆ ತರುವುದಾಗಿ ಹೇಳುತ್ತಿರುವುದರಿಂದ ಅಭಿವೃದ್ಧಿ ಕಾಮಗಾರಿಗಳಿಗೆ ತಡೆ ಉಂಟಾಗಲಿದೆ. ಕಳೆದ 11 ವರ್ಷಗಳ ಪ್ರಧಾನಿ ಮೋದಿ ಆಡಳಿತದಲ್ಲಿ ಸ್ವಚ್ಛ ಭಾರತ್ ಅಭಿಯಾನದಡಿ ದೇಶಾದ್ಯಂತ ಶೌಚಾಲಯಗಳನ್ನು ನಿರ್ಮಿಸುವ ಮೂಲಕ ಗ್ರಾಮೀಣ ಮಹಿಳೆಯರು ಬಯಲು ಬಹಿರ್ದೆಸೆಗೆ ಹೋಗುವುದನ್ನು ತಪ್ಪಿಸಲಾಯಿತು. ಭೇಟಿ ಬಚಾವೋ ಬೇಟಿ ಪಡಾವೋ, ಮುದ್ರಾ ಯೋಜನೆಗಳಿಂದಾಗಿ ದುಡಿಯುವ ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಲು ಲಕ್ಷಾಂತರ ರೂ. ಸಾಲ ದೊರೆಯುತ್ತಿದೆ. ಕೇಂದ್ರ ಸರ್ಕಾರ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ಸೌಲಭ್ಯ ಕಲ್ಪಿಸಲು ಬದ್ಧವಾಗಿದೆ ಎಂದರು.



ಸಭೆಯನ್ನು ಮಾಜಿ ಶಾಸಕ ಬಿ.ಹರ್ಷವರ್ಧನ್ ಉದ್ಘಾಟಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಮಾತನಾಡಿ, ರಾಜ್ಯದಲ್ಲಿ ಕ್ಷೇತ್ರ ವಿಂಗಡನೆಯಿಂದಾಗಿ ವಿಧಾನಸಭೆ ಸ್ಥಾನಗಳು 224 ರಿಂದ 290ಕ್ಕೆ ಏರಿಕೆಯಾಗಲಿದ್ದು, ಮಹಿಳೆಯರಿಗೆ ಹೆಚ್ಚಿನ ಅವಕಾಶ ಲಭ್ಯವಾಗಲಿದೆ. ಮಹಿಳಾ ಮೋರ್ಚಾ ಮಹಿಳೆಯರಿಗಾಗಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಯೋಜನರಗಳ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮ ರೂಪಿಸಿ ಮಾರ್ಗದರ್ಶನ ನೀಡಬೇಕು. ಮುದ್ರಾ ಯೋಜನೆಯಲ್ಲಿ 1 ಲಕ್ಷದಿಂದ 1 ಕೋಟಿವರೆಗೆ ಸಾಲ ದೊರೆಯುತ್ತಿದೆ. ಕುರಿ, ಕೋಳಿ ಸಾಕಾಣಿಕೆ, ಹಪ್ಪಳ ತಯಾರಿಕೆ ಮುಂತಾದ ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ ಎಂದು ಹೇಳಿದರು.

ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ ಮಾತನಾಡಿದರು.

ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಡಾ.ಪ್ರಫುಲ್ಲಾ ಮಲ್ಲಾಡಿ, ಜಿಲ್ಲಾಧ್ಯಕ್ಷೆ ಅಧ್ಯಕ್ಷೆ ನಳಿನಿಗೌಡ, ಬಿಜೆಪಿ ಮಂಡಲ ಅಧ್ಯಕ್ಷ ಕೆಂಡಗಣ್ಣಪ್ಪ, ನಗರಾಧ್ಯಕ್ಷ ಸಿದ್ದರಾಜು, ನಿಕಟ ಪೂರ್ವ ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಬಾಲಕೃಷ್ಣ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಸಿದ್ದರಾಜು, ಮಲ್ಲಿಕಾರ್ಜುನ್, ಕೋಮಲ, ನಂದಿನಿ, ನಾಗೇಂದ್ರ, ಗಾಯಿತ್ರಿ, ನಗರಸಭೆ ಸದಸ್ಯರಾದ ಮಹದೇವಮ್ಮ, ಮಂಜುಳ, ಮಹದೇವಪ್ರಸಾದ್, ಚಂದ್ರಶೇಖರ್, ಪುಟ್ಟಸ್ವಾಮಿ, ಗೀತಾ, ಸಂದರ್ ರಾಜ್ ಉಪಸ್ಥಿತರಿದ್ದರು.

ಒಳ ಮೀಸಲಾತಿ ಜಾರಿಗೆ ಆಗ್ರಹ

ಹುಣಸೂರು, ಆ.18– ಒಳ ಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಮಂಗಳವಾರ (ಇಂದು) ನಡೆಯುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಯಥಾವತ್ತಾಗಿ ಜಾರಿಗೊಳಿಸುವಂತೆ ಪ್ರಗತಿಪರ ಚಿಂತಕ ಜೆ.ಮಹದೇವ್ ಆಗ್ರಹಿಸಿದರು.



ಸುದ್ದಿಗೋಷ್ಠಿಯಲ್ಲಿ ಜೆ.ಮಹದೇವ್ ಮಾತನಾಡಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಕಲ್ಪಿಸುವಂತೆ ಕಳೆದ 3 ದಶಕಗಳಿಂದ ಮಾದಿಗ ಸಮುದಾಯ ಹೋರಾಟ ನಡೆಸುತ್ತಿದೆ. ಒಳ ಮೀಸಲಾತಿ ಜಾರಿಗೊಳಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿದೆ ಎಂದು ಹೈಕೋರ್ಟ್ ತಿಳಿಸಿದೆ. ಹೀಗಾಗಿ ನಿವೃತ್ತ ನಾಯಮೂರ್ತಿ ಹೆಚ್.ಎನ್.ನಾಗಮೋಹನ್‌ದಾಸ್ ಏಕ ಸದಸ್ಯ ಆಯೋಗವು ಸರ್ಕಾರಕ್ಕೆ ನೀಡಿರುವ ವರದಿಯನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಮಾದಿಗ ಹೋರಾಟ ಸಮಿತಿ ಅಧ್ಯಕ್ಷ ಪರಶುರಾಮ, ಸಮುದಾಯದ ಮುಖಂಡ ರಾಯನಹಳ್ಳಿ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಬೆಳ್ತೂರು ವೆಂಕಟೇಶ್, ಸಹ ಕಾರ್ಯದರ್ಶಿ ಶಿವರಾಂ, ಯುವ ಮುಖಂಡ ರಾಹುಲ್, ಮಹದೇವಯ್ಯ ಇನ್ನಿತರರಿದ್ದರು.

ಒಳ ಮೀಸಲಾತಿ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ

ನ್ಯಾ.ನಾಗಮೋಹನ್ ದಾಸ್ ವರದಿ ಅನುಷ್ಠಾನಕ್ಕೆ ಒತ್ತಾಯ

ತಿ.ನರಸೀಪುರ, ಆ.18– ಒಳ ಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್ ಸರ್ಕಾರಕ್ಕೆ ಸಲ್ಲಿಸಿರುವ ವರದಿ ವೈಜ್ಞಾನಿಕವಾಗಿದ್ದು, ಮಂಗಳವಾರ(ನಾಳೆ) ನಡೆಯುವ ಸಚಿವ ಸಂಪುಟ ಸಭೆಯಲ್ಲಿ ವರದಿ ಅನುಷ್ಠಾನಗೊಳಿಸಬೇಕು ಎಂದು ಸಾಮಾಜಿಕ ನ್ಯಾಯಪರ ವೇದಿಕೆ ಮೈಸೂರು ಜಿಲ್ಲಾಧ್ಯಕ್ಷ ಮರಡೀಪುರ ಡಾ.ರವಿಕುಮಾರ್ ಒತ್ತಾಯಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಒಳ ಮೀಸಲಾತಿ ಜಾರಿ ಸಂಬಂಧ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅಧ್ಯಕ್ಷತೆಯಲ್ಲಿ 2025ರ ಜನವರಿಯಲ್ಲಿ ಆಯೋಗ ರಚನೆ ಮಾಡಿತ್ತು. ಅದರಂತೆ ಪ.ಜಾತಿ ಸಮೀಕ್ಷೆ ನಡೆಸಿದ ಆಯೋಗ 101 ಜಾತಿಗಳ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಬಗ್ಗೆ ಉಪ ಜಾತಿ ಮತ್ತು ಒಳ ಜಾತಿವಾರು ವಿಸ್ತೃತ ಹಾಗೂ ಅತ್ಯುತ್ತಮ ವೈಜ್ಞಾನಿಕ ವರದಿ ಮಂಡಿಸಿದ್ದು, ಕೂಡಲೇ ರಾಜ್ಯ ಸರ್ಕಾರ ಸಮೀಕ್ಷೆಯ ವರದಿಯನ್ನು ಅನುಷ್ಠಾನಕ್ಕೆ ತರಬೇಕು. ಆ ಮೂಲಕ ಎಡಗೈ ಸಮಾಜಕ್ಕೆ ನ್ಯಾಯ ದೊರಕಿಸಿಕೊಡಬೇಕೆಂದು ಒತ್ತಾಯಿಸಿದರು.



ಸುದ್ದಿಗೋಷ್ಠಿಯಲ್ಲಿ ಮರಡೀಪುರ ಡಾ.ರವಿಕುಮಾರ್ ಮಾತನಾಡಿದರು.

ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಅವರು ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯಿಂದ ಉನ್ನತ ತಂತ್ರಜ್ಞಾನ ಹಾಗೂ ವಿಧಾನಗಳನ್ನು ಅಳವಡಿಸಿಕೊಂಡು ಸಮೀಕ್ಷೆ ನಡೆಸಿ ನಿಖರ ಹಾಗೂ ಸ್ಪಷ್ಟ ಮಾಹಿತಿ ನೀಡಿದ್ದಾರೆ. ಈ ಹಿಂದೆ ನ್ಯಾಯಾಧೀಶರು ಪ.ಜಾತಿ/ ಪಂಗಡದ ಮೀಸಲಾತಿ ಹೆಚ್ಚಳದ ಆಯೋಗದ ಅಧ್ಯಕ್ಷರಾಗಿ ನೀಡಿದ ವರದಿಯಲ್ಲಿ ಪ.ಜಾತಿಗೆ ಶೇ.15 ರಿಂದ ಶೇ.17 ಹಾಗೂ ಪ.ಪಂಗಡಕ್ಕೆ ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಿದಾಗ ಪ.ಜಾತಿ ಮತ್ತು ಪ.ಪಂಗಡ ಒಕ್ಕೊರಲಿನಿಂದ ವರದಿ ಸ್ವಾಗತಿಸಿ ಮೀಸಲಾತಿ ಅನುಭವಿಸುತ್ತಿದ್ದರು. ಆದರೆ ಈಗ ಅದೇ ಆಯೋಗದ ಅಧ್ಯಕ್ಷರು ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಪ್ರಸ್ತುತ ನೀಡಿರುವ ವರದಿ ಬಗ್ಗೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅಪಸ್ವರ ಎತ್ತುತ್ತಿರುವುದು ಹಾಸ್ಯಾಸ್ಪದ. ಅಲ್ಲದೇ ಅತ್ಯಂತ ಹಿಂದುಳಿದ ಮಾದಿಗ ಸಮುದಾಯಕ್ಕೆ ಹೆಚ್ಚು ಮೀಸಲಾತಿ ದೊರೆಯುತ್ತದೆ ಎಂಬುದನ್ನು ಸಹಿಸದೆ ಸಂವಿಧಾನದ ಸಮಾನತೆಯ ತತ್ವಕ್ಕೆ, ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವುದು ದುರಂತ ಎಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಗೋಪಾಲಪುರ ಮಂಜುನಾಥ್, ಮಲಿಯೂರು ಶಿವಕುಮಾರ್, ಪ್ರಸಾದ್, ಸಿದ್ದನಹುಂಡಿ ಗೋಪಿ, ಹೊಸ ನೋಪುರ ಗುರುಸಿದ್ದಯ್ಯ, ಮೂಗೂರು ಮಹೇಶ್, ಚೇತನ್, ಸುನೀಲ್, ವಾಟಾಳು ಸಿದ್ದರಾಜು, ಹೊಸಹಳ್ಳಿ ಚಿನ್ನಸ್ವಾಮಿ, ಕೇತಹಳ್ಳಿ ವಿಶ್ವ, ವ್ಯಾಸರಾಜಪುರ ಬಿ.ಎಸ್. ಮಹದೇವಪ್ರಸಾದ್ ಹಾಜರಿದ್ದರು.

ಹೊಸೂರಲ್ಲಿ 79ನೇ ಸ್ವಾತಂತ್ರ್ಯ ದಿನಾಚರಣೆ



ಪತ್ರಕರ್ತ ಮಂಜು, ಎಸ್‌ಡಿಎಂಸಿ ಉಪಾಧ್ಯಕ್ಷ ರಫಿ ಅವರನ್ನು ಸನ್ಮಾನಿಸಲಾಯಿತು.

ಹೊಸೂರು, ಆ.18– ಸಾಲಿಗ್ರಾಮ ತಾಲೂಕಿನ ಹೊಸೂರು ಸರ್ಕಾರಿ ಪ್ರೌಢಶಾಲೆ ಹಾಗೂ ಕಾಲೇಜು ವತಿಯಿಂದ 79ನೇ ಸ್ವಾತಂತ್ರ್ಯ ದಿನಾಚರಣೆ ಆಚರಿಸಲಾಯಿತು.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಬಳಿಕ ದೇಶಭಕ್ತಿ ಗೀತೆ, ನೃತ್ಯ, ಕಿರುಚಿತ್ರ ಪ್ರದರ್ಶಿಸುವ ಮೂಲಕ ದೇಶಕ್ಕಾಗಿ ಹೋರಾಡಿದ ಹುತಾತ್ಮರನ್ನು ಸ್ಮರಿಸಿದರು.

ಉಪನ್ಯಾಸಕ ಉಮಾಶಂಕರ್ ಮಾತನಾಡಿ, ಸ್ವಾತಂತ್ರ್ಯ ದಿನಾಚರಣೆಯನ್ನು ಸರ್ಕಾರಿ ಕಚೇರಿಗಳು, ಶಾಲಾ–ಕಾಲೇಜು ಮಾತ್ರವಲ್ಲದೇ ತಮ್ಮ ಮನೆಯಲ್ಲಿ ಪ್ರತಿಯೊಬ್ಬರೂ ಆಚರಿಸಬೇಕು ಎಂದರು.

ಈ ವೇಳೆ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವರ್ಷಿಣಿ–539, ಆಸ್ಥಿಯಾ ತಸ್ಲಿಂ–513, ರೇವತಿ–484 ಅವರನ್ನು ಶಾಲೆ ವತಿಯಿಂದ ಸನ್ಮಾನಿಸಲಾಯಿತು. ಶಿಕ್ಷಕರಾದ ಗೋಪಾಲ್, ವಿಜಯಲಕ್ಷ್ಮಿ, ಸಣ್ಣಪುಟ್ಟಮ್ಮ ವೈಯಕ್ತಿಕ ಉಡುಗೊರೆ ನೀಡಿದರು.

ಪತ್ರಕರ್ತ ಮಂಜು ಹಾಗೂ ಎಸ್‌ಡಿಎಂಸಿ ಉಪಾಧ್ಯಕ್ಷ ರಫಿ ಅವರನ್ನು ಸನ್ಮಾನಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ದೀಪು, ಪ್ರೌಢಶಾಲಾ ಮುಖ್ಯ ಶಿಕ್ಷಕ ರಂಗಾಚಾರಿ, ಪ್ರಾಂಶುಪಾಲ ಮಂಜುನಾಥ್, ಶಿಕ್ಷಕರಾದ ಸಣ್ಣಪುಟ್ಟಮ್ಮ, ವಿಜಯಲಕ್ಷ್ಮಿ, ಮಹೇಶ್, ಗೋಪಾಲ್, ನಟರಾಜ್, ಸಲ್ಮಾ ಬೇಗಂ ಹಾಗೂ ಉಪನ್ಯಾಸಕರಾದ ಉಮಾಶಂಕರ್, ಸಂಧ್ಯಾ, ರಂಜಿತಾ, ರೇವಣ್ಣ, ಅಭಿಲಾಶ್, ದಿಲೀಪ್, ವಿದ್ಯಾರ್ಥಿ–ವಿದ್ಯಾರ್ಥಿನಿಯರು ಹಾಜರಿದ್ದರು.

ಕೋಟೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ತರಲು ಶ್ರಮಿಸೋಣ

ಕಾರ್ಯಕರ್ತರಿಗೆ ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಕರೆ





ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕರನ್ನು ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಅದ್ದೂರಿಯಾಗಿ ಬರಮಾಡಿಕೊಂಡರು. ಮತ್ತೊಂದು ಚಿತ್ರದಲ್ಲಿ ಕೃಷ್ಣನಾಯಕ ಅವರಿಗೆ ಪಕ್ಷದ ಬಾವುಟ ನೀಡಿ ಸ್ವಾಗತಿಸಲಾಯಿತು.

ಹೆಚ್.ಡಿ.ಕೋಟೆ, ಆ.18– ಕಳೆದ 10 ವರ್ಷಗಳಿಂದ ತಾಲೂಕಿನಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದನ್ನು ಎದುರು ನೋಡುತ್ತಿರುವ ಕಾರ್ಯಕರ್ತರ ಕನಸನ್ನು ನನಸು ಮಾಡಲು ಕ್ಷೇತ್ರದಲ್ಲಿ ಒಗ್ಗಟ್ಟಿನಿಂದ ಪಕ್ಷ ಸಂಘಟಿಸೋಣ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಸೋಮವಾರ ಪಟ್ಟಣದ ಜೆಡಿಎಸ್ ಕಚೇರಿಯಲ್ಲಿ ಕಾರ್ಯಕರ್ತರು ಹಾಗೂ ಮುಖಂಡರಿಂದ ಅದ್ದೂರಿ ಸ್ವಾಗತ ಸ್ವೀಕರಿಸಿ, ನಂತರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಪಕ್ಷದ ಕಾರ್ಯಕರ್ತರು ಅನುಭವಿಸುತ್ತಿರುವ ನೋವನ್ನು ಸವಾಲಾಗಿ ಸ್ವೀಕರಿಸಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಶಾಸಕರನ್ನು ಆಯ್ಕೆ ಮಾಡಲು ಶ್ರಮಿಸಬೇಕು ಎಂದರು.

> ಮುಂಬರುವ ದಿನಗಳಲ್ಲಿ ಕ್ಷೇತ್ರದ ಎಲ್ಲಾ ಮುಖಂಡರು, ಕಾರ್ಯ ಕರ್ತರನ್ನು ವಿಶ್ವಾಸಕ್ಕೆ ಪಡೆದು ಪಕ್ಷ ಸಂಘಟನೆಗೆ ದುಡಿಯುತ್ತೇನೆ. ಸೆಪ್ಟೆಂಬರ್ 2ನೇ ವಾರದಲ್ಲಿ ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕೋಟೆಗೆ ಆಗಮಿಸಲಿದ್ದು, ಸಾವಿರಾರು ಕಾರ್ಯಕರ್ತರ ಸಮ್ಮುಖದಲ್ಲಿ ಅದ್ದೂರಿ ಕಾರ್ಯಕ್ರಮ ನಡೆಸಲಾಗುವುದು. –ಕೆ.ಎಂ.ಕೃಷ್ಣನಾಯಕ, ಜೆಡಿಎಸ್ ಮುಖಂಡ.

ಮುಂದಿನ ಎರಡ್ಮೂರು ತಿಂಗಳಲ್ಲಿ ಜಿಲ್ಲಾ, ತಾಲೂಕು ಹಾಗೂ ಗ್ರಾಪಂ ಚುನಾವಣೆ ನಡೆಯಲಿದ್ದು, ಮುಖಂಡರು ಹಾಗೂ ಕಾರ್ಯಕರ್ತರು ತಮ್ಮಲ್ಲಿರುವ ಅಸಮಾಧಾನ ಮರೆತು ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸಬೇಕು ಎಂದ ಅವರು ಸ್ಥಳೀಯ ಸಂಸ್ಥೆ ಚುನಾವಣೆ ಫಲಿತಾಂಶ ಮುಂಬರುವ ವಿಧಾನಸಭೆ ಚುನಾವಣೆಗೆ ದಿಕ್ಸೂಚಿ ಎಂದರು.

ತಾಲೂಕು ಸೇರಿದಂತೆ ರಾಜ್ಯದಲ್ಲಿ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಭ್ರಷ್ಟಾಚಾರ, ದುರಾಡಳಿತ, ಹಗರಣಗಳಲ್ಲಿ ಸರ್ಕಾರ ನಿರತವಾಗಿದೆ. ರಾಜ್ಯದ ಅಭಿವೃದ್ಧಿಗೆ ಹಣಕಾಸಿನ ಕೊರತೆ ಎದುರಾಗಿದ್ದು, ಖಜಾನೆ ಖಾಲಿಯಾಗಿದೆ ಎಂದು ಆರೋಪಿಸಿದರು.

ಇದೇ ವೇಳೆ ಕೃಷ್ಣನಾಯಕ ಅವರ ಸಮ್ಮುಖದಲ್ಲಿ ನೂರಾರು ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಸೇರ್ಪಡೆಗೊಂಡರು. ಅಲ್ಲದೇ ಬೆಂಗಳೂರಿನ ಜೆ.ಪಿ.ಭವನದಲ್ಲಿ ಜೆಡಿಎಸ್‌ಗೆ ಸೇರ್ಪಡೆಗೊಂಡು ಪಟ್ಟಣಕ್ಕೆ ಆಗಮಿಸಿದ ಕೆ.ಎಂ.ಕೃಷ್ಣನಾಯಕ ಅವರು ಮೊದಲಿಗೆ ಜಿ.ಬಿ.ಸರಗೂರಿನ ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಕ್ಯಾತನಹಳ್ಳಿ, ಹಂಪಾಪುರ–ಹೊಮ್ಮರಗಳ್ಳಿ ಮಾರ್ಗವಾಗಿ ಹ್ಯಾಂಡ್ ಪೋಸ್ಟ್‌ಗೆ ತಲುಪಿ ಹ್ಯಾಂಡ್‌ಪೋಸ್ಟ್‌ನ ಗಣೇಶ ದೇವಸ್ಥಾನದಲ್ಲಿ ವಿಶೇಷ ಪೂಜೆ ನೆರವೇರಿಸಿದರು. ದಾರಿಯುದ್ದಕ್ಕೂ ಕೃಷ್ಣನಾಯಕರಿಗೆ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಹಾರ ತುರಾಯಿ ಹಾಕಿ ಅಭಿನಂದಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಮುಂಭಾಗದಿಂದ ಕೃಷ್ಣನಾಯಕ ಅವರು ಸಾವಿರಾರು ಕಾರ್ಯಕರ್ತರ ಜೊತೆ ಕಾಲ್ನಡಿಗೆಯಲ್ಲಿ ಜೆಡಿಎಸ್ ಕಚೇರಿಗೆ ತೆರಳಿ ಪೂಜೆ ಸಲ್ಲಿಸಿದರು. ಈ ವೇಳೆ ಕಾರ್ಯಕತರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು.

ಕೋಟೆ, ಸರಗೂರು ತಾಲೂಕಿನ ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಮಾಜಿ ಅಧ್ಯಕ್ಷರಾದ ಸಿ.ವಿ.ನಾಗರಾಜು, ನರಸಿಂಹೇಗೌಡ, ಲಿಂಗೇಗೌಡ, ಸಿಂಡೇನಹಳ್ಳಿ ಯತೀಶ್ ಕುಮಾರ್, ಶ್ಯಾಮ್ ಸುಂದರ್, ಮಳಲಿ ಶಾಂತಕುಮಾರ್, ಯೋಗ ನರಸಿಂಹ, ಡಿ.ಆರ್.ಮಹೇಶ್, ಎಂ.ಡಿ.ಮಂಚಯ್ಯ, ಹೋ.ಕೆ.ಮಹೇಂದ್ರ, ಗೆಂಡತ್ತೂರು ಪ್ರಕಾಶ್, ಸಿದ್ದೇಗೌಡ, ಸುದೀರ್, ಮಾಯಿಗೌಡ, ಶಶಿಧರ್, ಹೆಚ್.ಪಿ.ಪ್ರಕಾಶ್, ಎಂ.ಪಿ. ಶಂಕರ್, ಕೃಷ್ಣೇಗೌಡ, ಶಿವಶಂಕರ್, ಪ್ರಶಾಂತ್, ಪ್ರಸನ್ನ, ಶಿವಯ್ಯ, ಕಾಳಪ್ಪಾಜಿ, ಕೃಷ್ಣಪ್ಪ, ಸೋಮಲಿಂಗ, ಶಿವಪ್ಪಶೆಟ್ಟಿ, ನಾಗೇಂದ್ರ, ಸತೀಶ್, ನಾಗೇಗೌಡ, ಶಿವಕುಮಾರ್, ಜವರೇಗೌಡ, ಮಾಯಪ್ಪ ಇದ್ದರು.

ಮಹನೀಯರ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ



ಹೆಡಿಯಾಲದಲ್ಲಿ ಸ್ವಾತಂತ್ರ್ಯ ದಿನಾಚರಣೆ ನಡೆಯಿತು.

ಮಲ್ಕುಂಡಿ, ಆ.18– ಮಹನೀಯರ ಬಲಿದಾನ ಮತ್ತು ಹೋರಾಟದಿಂದಾಗಿ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ ಎಂದು ಕಮಲಮ್ಮ ಶಂಕರಪ್ಪ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ ತಿಳಿಸಿದರು.

ಹೆಡಿಯಾಲ ಗ್ರಾಮದ ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಯಲ್ಲಿ 79 ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು ದೇಶವು ಸ್ವಾತಂತ್ರ್ಯ ನಂತರ ಹಲವು ಅಭಿ ವೃದ್ಧಿಗಳನ್ನು ಕಂಡಿದೆ. ಭಾರತ ಜಾತ್ಯಾತೀತ ರಾಷ್ಟ್ರವಾಗಿದ್ದು, ಹಲವು ಜಾತಿ, ಧರ್ಮಗಳನ್ನು ಒಳಗೊಂಡಿದೆ ಎಂದರು. ಈ ವೇಳೆ ಗ್ರಾಪಂ ಅಧ್ಯಕ್ಷೆ ಪುಟ್ಟಿ, ಉಪಾಧ್ಯಕ್ಷ ನಾಗೇಶ್, ಮಾಜಿ ಅಧ್ಯಕ್ಷ ರೆಹಮತ್ ಉಲ್ಲಾಖಾನ್, ಆಶ್ರಫ್ ಆಲಿ ಸೇರಿದಂತೆ ಶಿಕ್ಷಕರಿದ್ದರು.

ಮೈಸೂರು ಬಂಡಿಪಾಳ್ಯದ ಎಪಿಎಂಸಿಯಲ್ಲಿ ಮತ್ತೆ ಸರಣಿ ಕಳ್ಳತನ

ಕಳೆದ 15 ದಿನಗಳ ಅವಧಿಯಲ್ಲಿ ಎರಡನೇ ಬಾರಿ ಕಳ್ಳರ ಕೈಚಳಕ

- ಹಾರೆಯಿಂದ ರೋಲಿಂಗ್ ಶಟರ್ ಮೀಟಿ ಕೃತ್ಯ
- ಸಿಸಿಟಿವಿ ಕ್ಯಾಮರಾ ಗೋಡೆಗೆ ತಿರುಗಿಸಿರುವ ಕಳ್ಳರು
- ಕಳ್ಳರಿಗೆ ಹೆದರಿ ಅಂಗಡಿಯಲ್ಲಿ ಹಣ ಇಡದ ವ್ಯಾಪಾರಸ್ಥರು
- ಎಪಿಎಂಸಿ ಆವರಣದ ಸಿಸಿಟಿವಿ ಕ್ಯಾಮರಾ ಕೆಟ್ಟು ವರ್ಷವಾಗಿದೆ

ಮೈಸೂರು, ಆ.18(ಬಿಎಲ್‌ಯು)– ಮೈಸೂರಿನ ನಂಜನಗೂಡು ರಸ್ತೆಯ ಬಂಡಿಪಾಳ್ಯ ಎಪಿಎಂಸಿಯಲ್ಲಿ ನಿನ್ನೆ ರಾತ್ರಿ ಸರಣಿ ಕಳ್ಳತನವಾಗಿದೆ. ಅಂಗಡಿಯ ರೋಲಿಂಗ್ ಶಟರ್ ಮೀಟಿರುವ ಮೂವರು ಕಳ್ಳರು, ಹಣ ದೋಚಿ ಪರಾರಿಯಾಗಿದ್ದಾರೆ.

ಎಪಿಎಂಸಿಯ ನಂಜುಂಡೇಶ್ವರ ಟ್ರೇಡಿಂಗ್ ಅಂಡ್ ಕೋ, ಸಿದ್ದಲಿಂಗೇಶ್ವರ ಟ್ರೇಡಿಂಗ್ ಅಂಡ್ ಕೋ, ವಿನಾಯಕ ಟ್ರೇಡರ್ಸ್ ಸೇರಿದಂತೆ ಇತರೆ ಅಂಗಡಿಗಳಲ್ಲಿ ಕಳ್ಳರು ತಮ್ಮ ಕೈಚಳಕ ತೋರಿಸಿದ್ದಾರೆ.

ಕಳ್ಳತನ ಕೃತ್ಯ ಎಸಗುವ ಮೊದಲು ಅಂಗಡಿಗಳ ಬಳಿ ಇದ್ದ ಸಿಸಿಟಿವಿ ಕ್ಯಾಮರಾಗಳನ್ನು ಗೋಡೆಗೆ ತಿರುಗಿಸಿದ್ದಾರೆ. ತಾವು ಎಸಗುವ ಕಳ್ಳತನ ಕೃತ್ಯ ಸಿಸಿಟಿವಿಯಲ್ಲಿ ರೆಕಾರ್ಡ್ ಆಗಬಾರದೆಂದು ಚಾಲಾಕಿ ಕಳ್ಳರು ಬುದ್ಧಿವಂತಿಕೆ ಪ್ರದರ್ಶಿಸಿದ್ದಾರೆ.

ಹಾರೆಯಿಂದ ಅಂಗಡಿಗಳ ರೋಲಿಂಗ್ ಶಟರ್ ಮೀಟಿ ಒಳಗೆ ಹೊಕ್ಕಿರುವ ಕಳ್ಳರು ಹಣಕ್ಕಾಗಿ ಕ್ಯಾಷ್ ಬಾಕ್ಸ್ ಸೇರಿದಂತೆ ಇತರೆಡೆ ಸ್ಥಳಗಳಲ್ಲಿ ಜಾಲಾಡಿದ್ದಾರೆ. ಆದರೆ ಒಂದು ಅಂಗಡಿಯಲ್ಲಿ ಸುಮಾರು 5 ಸಾವಿರ ರೂಪಾಯಿ ಮಾತ್ರ ಸಿಕ್ಕಿದೆ. ಅಂಗಡಿಯಲ್ಲಿ ಅಕ್ಕಿ, ಬೆಲ್ಲ ಸೇರಿದಂತೆ ಇತರೆ ದಿನಸಿ ಪದಾರ್ಥ ಇದ್ದರೂ ಅದನ್ನು ಕದ್ದೊಯ್ಯುವ ಸಾಹಸ ಮಾಡಿಲ್ಲ.


ಅಂಗಡಿಯ ರೋಲಿಂಗ್ ಶಟರ್ ಮೀಟಿರುವುದು

ಪೊಲೀಸರು ಬೀಟ್‌ಗೆ ಬರುತ್ತಿಲ್ಲ, ಎಪಿಎಂಸಿಯಲ್ಲಿ ಭದ್ರತೆ ಇಲ್ಲ

ಎಪಿಎಂಸಿಯಲ್ಲಿ ನೂರಾರು ಅಂಗಡಿಗಳಿದ್ದು, ಪೊಲೀಸರು ಬೀಟ್ ಬರದಿರುವ ಕಾರಣ ಖದೀಮರ ಹಾವಳಿ ವ್ಯಾಪಕವಾಗಿದೆ ಎಂದು ಈಗ ಕಳ್ಳತನವಾಗಿರುವ ನಂಜುಂಡೇಶ್ವರ ಟ್ರೇಡಿಂಗ್ ಅಂಡ್ ಕೋ ಮಾಲೀಕ ಪ್ರದೀಪ್ ಆರೋಪಿಸಿದ್ದಾರೆ. ಪೊಲೀಸರು ಬೀಟ್ ಬಂದರೆ ಕಳ್ಳರಿಗೆ ಹೆದರಿಕೆ ಇರುತ್ತದೆ. ಆದರೆ ಪೊಲೀಸರು ಇತ್ತ ತಿರುಗಿ ನೋಡುವುದಿಲ್ಲ. ಇದರಿಂದ ಕಳ್ಳತನ ನಡೆಯುತ್ತಿದೆ ಎಂದು ಆಪಾದಿಸಿದ್ದಾರೆ.

ಎಪಿಎಂಸಿಯಲ್ಲಿ ಪ್ರತಿ ದಿನ ಕೋಟ್ಯಾಂತರ ರೂಪಾಯಿ ವ್ಯವಹಾರ ನಡೆಯುತ್ತದೆ. ಜೊತೆಗೆ ಕೋಟ್ಯಾಂತರ ರೂಪಾಯಿ ಮೌಲ್ಯದ ವಸ್ತುಗಳು ಅಂಗಡಿಯಲ್ಲಿರುತ್ತದೆ. ಇಂತಹ ಸ್ಥಳದಲ್ಲಿ ಯಾವುದೇ ಭದ್ರತೆ ಇಲ್ಲ.

ಎಪಿಎಂಸಿಯ ಪ್ರವೇಶ ದ್ವಾರ ಸೇರಿದಂತೆ ನಾಲ್ಕು ದಿಕ್ಕಿನಲ್ಲೂ ಹೆಚ್‌ಡಿ ಗುಣಮಟ್ಟದ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿರಬೇಕು. ಆದರೆ ಈಗಿರುವ ಸಾಮಾನ್ಯ ಗುಣಮಟ್ಟದ ಸಿಸಿಟಿವಿ ಕ್ಯಾಮರಾಗಳೇ ಕೆಟ್ಟುಹೋಗಿ ವರ್ಷಗಳು ಕಳೆದಿವೆ. ಎಪಿಎಂಸಿ ಅಧಿಕಾರಿಗಳು ಸಿಸಿಟಿವಿ ರಿಪೇರಿ ಮಾಡಿಸದೆ ಬೇಜವಾಬ್ದಾರಿ ತೋರಿದ್ದಾರೆ.

ಹತ್ತಾರು ಎಕರೆಯ ಎಪಿಎಂಸಿಯಲ್ಲಿ ಇಬ್ಬರು ಸೆಕ್ಯೂರಿಟಿಗಳು ಮಾತ್ರ ಕರ್ತವ್ಯದಲ್ಲಿರುತ್ತಾರೆ. ಈ ಇಬ್ಬರು ಎಲ್ಲಾ ಸ್ಥಳಗಳಲ್ಲಿ ಹದ್ದಿನಕಣ್ಣಿಡಲು ಸಾಧ್ಯವಾಗುವುದಿಲ್ಲ. ನಿರ್ಜನ ಪ್ರದೇಶದಲ್ಲಿ ವಿದ್ಯುತ್ ದೀಪಗಳು ಕೆಟ್ಟಿದ್ದು ರಾತ್ರಿ ಎಲ್ಲಾ ಕಡೆ ಪಹರೆಗೆ ಸೆಕ್ಯೂರಿಟಿಗಳು ಹೆದರುತ್ತಾರೆ. ಈ ಎಲ್ಲಾ ಕಾರಣಗಳಿಂದ ಕಳ್ಳರು ಸುಲಭವಾಗಿ ತಮ್ಮ ಕೈಚಳಕ ತೋರಿಸುತ್ತಿದ್ದಾರೆ. ಈ ಮೊದಲು ವ್ಯಾಪಾರವಾಗುತ್ತಿದ್ದ ಹಣವನ್ನು ಅಂಗಡಿಯಲ್ಲೇ ಇಟ್ಟು ಹೋಗುತ್ತಿದ್ದರು. ಆದರೆ ಇತ್ತೀಚಿಗೆ ಸರಣಿ ಕಳ್ಳತನವಾಗುತ್ತಿರುವ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ಅಂಗಡಿಯಲ್ಲಿ ಹಣ ಇಟ್ಟು ಹೋಗುವುದನ್ನು ನಿಲ್ಲಿಸಿದ್ದಾರೆ.

ಎಪಿಎಂಸಿಯಲ್ಲಿ 600 ಕ್ಕೂ ಹೆಚ್ಚು ಅಂಗಡಿಗಳಿವೆ. ಆದರೆ ಇತ್ತೀಚಿಗೆ ಸರಣಿ ಕಳ್ಳತನ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ಭಯಭೀತರಾಗಿದ್ದಾರೆ. ನಮ್ಮ ಅಂಗಡಿಯಲ್ಲಿ ಹಣ ಇಟ್ಟರೆ ಕಳ್ಳರ ಪಾಲಾಗುತ್ತದೆ ಎಂದು ಹೆದರಿ ವ್ಯಾಪಾರಸ್ಥರು ಹಣ ಇಡುವುದಕ್ಕೆ ಅಂಜುತ್ತಾರೆ.

ಈ ವರ್ಷದ ಕಳೆದ 8 ತಿಂಗಳ ಅವಧಿಯಲ್ಲಿ ನಾಲ್ಕು ಸರಣಿ ಕಳ್ಳತನ ನಡೆದಿದೆ. ಕಳೆದ 15 ದಿನದ ಅವಧಿಯಲ್ಲಿ ಎರಡನೇ ಸರಣಿ ಕಳ್ಳತನ ಇದಾಗಿದೆ. ಕಳೆದ 15 ದಿನದ ಹಿಂದೆ ಹಣದ ಜೊತೆ ಅಕ್ಕಿ ಮೂಟೆಗಳನ್ನು ಕೂಡ ಹೊತ್ತೊಯ್ದಿದ್ದರು. ಆದರೆ ಈ ಬಾರಿ ಕಳ್ಳರು ದಿನಸಿ ಪದಾರ್ಥಗಳಿಗೆ ಕೈ ಹಾಕಿಲ್ಲ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕೂಲಿ (ಕ) + ಕೂಲಿ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ವಾರ್ –2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕೂಲಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಾರ್ –2 (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ವಾರ್–2 (ಹಿಂ)	5 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್–2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್–2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್–2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್–2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಶ್ರೀಕ್ಷೇತ್ರ ಧರ್ಮಸ್ಥಳ ವಿರುದ್ಧ ಆಪಾದನೆ ಸಹಿಸುವುದಿಲ್ಲ

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಎಚ್ಚರಿಕೆ



ಮೈಸೂರು, ಆ.18(ಎಂಕೆ)– ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆ ಸಮಾಜಕ್ಕೆ ಮಹತ್ವದ ಕೊಡುಗೆ ನೀಡಿದ್ದು, ಅಪಾರ ಭಕ್ತ ಸಮೂಹವನ್ನು ಹೊಂದಿದೆ. ಶ್ರೀ ಕ್ಷೇತ್ರದ ವಿರುದ್ಧ ವಿನಾಕಾರಣ ಆಪಾದನೆ ಮಾಡಿದರೆ ಇನ್ನು ಮುಂದೆ ಸಹಿಸುವುದಿಲ್ಲ ಎಂದು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಎಚ್ಚರಿಸಿದ್ದಾರೆ.

ಇಡೀ ದೇಶಕ್ಕೆ ಧರ್ಮಸ್ಥಳ ಸಂಸ್ಥೆ ನೀಡಿರುವ ಕೊಡುಗೆಗಳ ಕುರಿತು ಮಾಹಿತಿಯಿದೆ. ಆದರೆ, ಪ್ರಗತಿಪರರ ಸೋಗಿನಲ್ಲಿರುವವರು ವಿವಾದ ಸೃಷ್ಟಿ ಮಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯ ಹೆಸರನ್ನು ಹಾಳು ಮಾಡಲು ಮುಂದಾಗಿರುವುದು ನಾಚಿಕೆಗೇಡಿತನದ ಸಂಗತಿಯಾಗಿದೆ. ಅನಾಮಿಕ ಮುಸುಕುಧಾರಿ ವ್ಯಕ್ತಿಯೊಬ್ಬನ ಹೇಳಿಕೆಯಂತೆ ಪರಿಶೀಲನೆ ನಡೆಸಿದರೂ ಒಂದೇ ಒಂದು ಶವವೂ ಎಸ್‌ಐಟಿ ತಂಡಕ್ಕೆ ಸಿಕ್ಕಿಲ್ಲ. ಧರ್ಮಸ್ಥಳದಲ್ಲಿ ಇನ್ನೂ ಎಷ್ಟೇ ಅಗೆದರೂ ಯಾವುದೇ ಶವ ನಿಮಗೆ ಸಿಗುವುದಿಲ್ಲ. ರಾಜ್ಯ ಸರಕಾರ ಈ ವಿಚಾರದಲ್ಲಿ ಸಮರ್ಪಕವಾಗಿ ಪರಿಶೀಲಿಸದೇ ಎಸ್‌ಐಟಿ ರಚಿಸಿ, ಆತುರದ ನಿರ್ಧಾರ ತೆಗೆದುಕೊಂಡಿದೆ. ಮುಂದೆ ಈ ತರಹ ಸುಳ್ಳು ದೂರುಗಳಿಗೆ ಆಸ್ಪದ ನೀಡಬಾರದು ಎಂದು ಒತ್ತಾಯಿಸಿದ್ದಾರೆ.

ಕೆಲ ವೈಯಕ್ತಿಕ ಹಿತಾಸಕ್ತಿಗಳು ಶ್ರೀಕ್ಷೇತ್ರ ಧರ್ಮಸ್ಥಳದ ಬಗ್ಗೆ ಮಾತನಾಡಿದಾಗಲೇ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಾಗಿತ್ತು. ಧರ್ಮಸ್ಥಳ ಸಂಸ್ಥೆಯೊಂದಿಗೆ ಮೈಸೂರು ಹೋಟೆಲ್ ಮಾಲೀಕರ ಸಂಘ ನಿಲ್ಲಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬ್ಯಾಕ್ಟೀರಿಯೋಫೇಜ್ ಚಿಕಿತ್ಸೆ ಪರಿಣಾಮಕಾರಿ

ಹೈದರಾಬಾದ್‌ನ ಮಲ್ಲಾರೆಡ್ಡಿ ವಿವಿಯ ಪ್ರೊ–ಚಾನ್ಸಲರ್ ಪ್ರೊ.ಅನಿಲ್ ಕೌಲ್ ಅಭಿಮತ


5 ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಹೈದರಾಬಾದ್‌ನ ಮಲ್ಲಾರೆಡ್ಡಿ ವಿವಿಯ ಪ್ರೊ–ಚಾನ್ಸಲರ್ ಪ್ರೊ.ಅನಿಲ್ ಕೌಲ್ ಉದ್ಘಾಟಿಸಿದರು.

ಮೈಸೂರು, ಆ.18(ಎಂಕೆ)– ವಿಶ್ವದಾದ್ಯಂತ 1.27 ಕೋಟಿಗೂ ಹೆಚ್ಚು ಜನರ ಸಾವಿಗೆ ಕಾರಣವಾಗುತ್ತಿರುವ ಸೂಕ್ಷ್ಮಾಣು (ಬ್ಯಾಕ್ಟೀರಿಯಾ)ಗಳ ತಡೆಗಟ್ಟಲು ಬ್ಯಾಕ್ಟೀರಿಯೋಫೇಜ್ ಚಿಕಿತ್ಸೆ ಪರಿಣಾಮಕಾರಿಯಾಗಿದೆ ಎಂದು ಹೈದರಾಬಾದ್‌ನ ಮಲ್ಲಾರೆಡ್ಡಿ ವಿವಿಯ ಪ್ರೊ–ಚಾನ್ಸಲರ್ ಪ್ರೊ.ಅನಿಲ್ ಕೌಲ್ ಅಭಿಪ್ರಾಯಿಸಿದರು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಗೋಲ್ಡನ್ ಜ್ಯುಬಿಲಿ ಭವನದಲ್ಲಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ಹಾಗೂ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಸಂಯುಕ್ತಾಶ್ರಯದಲ್ಲಿ 'ಬ್ಯಾಕ್ಟೀರಿಯೋಫೇಜ್'ಗಳನ್ನು ಹಾಗೂ 'ಒನ್ ಹೆಲ್ತ್' ವಿಧಾನಗಳನ್ನು ಬಳಸಿ ಸೂಕ್ಷ್ಮಾಣು ಪ್ರತಿರೋಧವನ್ನು ಎದುರಿಸುವುದು' ಕುರಿತು ಹಮ್ಮಿಕೊಂಡಿರುವ 5 ದಿನಗಳ ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ನೈಸರ್ಗಿಕವಾಗಿ ದೊರೆಯುವ ಬ್ಯಾಕ್ಟೀರಿಯೋಫೇಜ್‌ಗಳ ಬಳಕೆಯಿಂದ ದೇಹಕ ದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾಗಲಿದೆ. ಅಲ್ಲದೆ 'ಒನ್ ಹೆಲ್ತ್' ದೇಹದ ಜೀವಾಣುಗಳಿಗೆ ಹಾನಿಯಾಗದಂತೆ ಚಿಕಿತ್ಸೆ ನೀಡಬಹುದಾಗಿದೆ. ಆ್ಯಂಟಿ ಬಯೋಟಿಕ್ ರೀತಿಯೇ ಬ್ಯಾಕ್ಟೀರಿಯೋಫೇಜ್ ಕೆಲಸ ಮಾಡಲಿದೆ ಎಂದರು.

ಬ್ಯಾಕ್ಟೀರಿಯೋಫೇಜ್ ಚಿಕಿತ್ಸೆಯಿಂದ ದೀರ್ಘಕಾಲದ ಗಾಯಗಳು, ಉಸಿರಾಟದ ಸಮಸ್ಯೆಗಳು, ಮೂತ್ರನಾಳದ ಸೋಂಕುಗಳು ಮತ್ತು ಸೆಪ್ಸಿಸ್ ಮುಂತಾದ ಬಹುಔಷಧ ಪ್ರತಿರೋಧಕ ಸೋಂಕುಗಳನ್ನು ಗುರಿಯಾಗಿಸಿ, ಹಿತಕರ ಜೀವಾಣುಗಳಿಗೆ ಹಾನಿಮಾಡದೆ ಗುಣಪಡಿಸಬಹುದಾಗಿದೆ ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ದೇಶದ ವಿವಿಧ ಭಾಗಗಳಿಂದ ಆಯ್ಕೆಯಾದ 50 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಕುಲಪತಿ ಡಾ.ಎ.ಎನ್.ಸಂತೋಷ್ ಅಧ್ಯಕ್ಷತೆ ವಹಿಸಿದ್ದರು. ಮಹಾವಿದ್ಯಾಲಯ ಶಿಕ್ಷಣ ಇಲಾಖೆ ಸಂಯುಕ್ತ ನಿರ್ದೇಶಕಿ ಡಾ.ಡಿ.ಎಸ್.ಪ್ರತಿಮಾ, ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್‌ನ ಪ್ರೊ–ಚಾನ್ಸಲರ್ ಡಾ.ಬಿ.ಸುರೇಶ್, ಜೆಎಸ್‌ಎಸ್‌ಎಸ್‌ಟಿಯು ಕುಲಸಚಿವ ಡಾ.ಎಸ್.ಎ.ಧನರಾಜ್, ಪ್ರಭಾರ ಪ್ರಾಂಶುಪಾಲ ಡಾ.ಸಿ.ನಟರಾಜ್, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಪ್ರಾಂಶುಪಾಲ ಅಬ್ದುಲ್ ರಹೀಮ್ ಮತ್ತಿತರರು ಉಪಸ್ಥಿತರಿದ್ದರು.

ಕೃಷಿಯಲ್ಲಿ ಉತ್ತಮ ಇಳುವರಿಗೆ ಒಂದು ದಿನದ ಕಾರ್ಯಾಗಾರ

ಮೈಸೂರು, ಆ.18(ಎಂಟಿವೈ)– ಮೈಸೂರು–ಗದ್ದಿಗೆ ಮುಖ್ಯ ರಸ್ತೆಯಲ್ಲಿರುವ ಬನವಾಸಿ ತೋಟದಲ್ಲಿ ಆ. 24 ರಂದು ಬೆಳಗ್ಗೆ 10 ರಿಂದ ಸಂಜೆ 5 ರವರೆಗೆ ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗಾಗಿ ಕಸಿ ಹಾಗೂ ಕುಡಿ ಚಿವುಟುವುದರಿಂದ ಕೃಷಿಯಲ್ಲಿ ಉತ್ತಮ ಇಳುವರಿ ಕಂಡುಕೊಳ್ಳುವ ವಿಧಾನ ಕುರಿತು ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಕೃಷಿಕ ಟಿ.ಜಿ.ಎಸ್. ಅವಿನಾಶ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮರ ಗಿಡಗಳಿಗೆ ಕಸಿ ಕಟ್ಟುವುದು ಒಂದು ಅದ್ಭುತ ಕಲೆ. ಇದನ್ನು ಅನುಸರಿಸಿದರೆ ಕೃಷಿಯಲ್ಲಿ ಲಾಭ ಗಳಿಸಬಹುದು. ಹೆಚ್ಚು ರುಚಿಯುಳ್ಳ ಮರವನ್ನು ಹೇಗೆ ಆಯ್ಕೆ ಮಾಡಿಕೊಳ್ಳಬೇಕು, ಗಿಡಗಳಲ್ಲಿ ಇದರ ವಿಧಾನ ಹೇಗೆ, ಕುಡಿ ಚಿವುಟುವುದರಿಂದ ಆಗುವ ಪ್ರಯೋಜನ ಸೇರಿದಂತೆ ಇನ್ನಿತರ ಮಹತ್ತರ ವಿಚಾರವನ್ನು ಕಾರ್ಯಾಗಾರದಲ್ಲಿ ತಿಳಿಸಿಕೊಡಲಾಗುತ್ತದೆ ಎಂದರು.

ಈ ಕಾರ್ಯಾಗಾರದಲ್ಲಿ ಕೃಷಿಕ ಸುರೇಶ್ ದೇಸಾಯಿ, ಲೇಖಕ ಕುಮಾರ್ ಮಾರುತಿ ಸೇರಿದಂತೆ ಇನ್ನಿತರ ಸಂಪನ್ಮೂಲ ವ್ಯಕ್ತಿಗಳು ಪಾಲ್ಗೊಳ್ಳಲಿದ್ದಾರೆ. ನೋಂದಣಿ ಮಾಡಿಕೊಂಡು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬಹುದಾಗಿದೆ ಯಾವುದೇ ಶುಲ್ಕವಿಲ್ಲ ಆದರೆ ಖರ್ಚು ವೆಚ್ಚಕ್ಕಾಗಿ ತಮಗೆ ತೋಚಿದಷ್ಟು ಹಣ ನೀಡಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 81978 56132 ಅನ್ನು ಸಂಪರ್ಕಿಸಬಹುದಾಗಿದೆ ಎಂದರು.

ಇಂದು ಛಾಯಾಚಿತ್ರ ಪ್ರದರ್ಶನ; ಸ್ಪರ್ಧೆ ಆಯೋಜನೆ

ಮೈಸೂರು, ಆ.18– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ವಿಶ್ವ ಛಾಯಾಗ್ರಹಣ ದಿನಾಚರಣೆ ಅಂಗವಾಗಿ ಮಂಗಳವಾರ(ಆ.19) ಬೆಳಗ್ಗೆ 10.30ಕ್ಕೆ ಪತ್ರಕರ್ತರ ಭವನದಲ್ಲಿ ಸುದ್ದಿ ಛಾಯಾಚಿತ್ರ ಪ್ರದರ್ಶನ ಮತ್ತು ಸ್ಪರ್ಧೆ ಆಯೋಜಿಸಲಾಗಿದೆ.

ವಿಶ್ವ ಛಾಯಾಗ್ರಹಣ ದಿನಾಚರಣೆ ಸಮಾರಂಭವನ್ನು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಉದ್ಘಾಟಿಸಲಿದ್ದು, ಡಿಸಿಪಿ ಕೆ.ಎಸ್.ಸುಂದರರಾಜ್ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ. ಇದೇ ವೇಳೆ ಹಿರಿಯ ಛಾಯಾಗ್ರಾಹಕರೂ ಆದ ಕೆಪಿಎನ್ ಸಂಪಾದಕ ಸಗ್ಗೆರೆ ರಾಮಸ್ವಾಮಿ ಅವರನ್ನು ಗೌರವಿಸಲಾಗುವುದು. ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ನರೆಡ್ಕೋ ಮೈಸೂರು ವಲಯದ ಅಧ್ಯಕ್ಷ ವಿ.ಸಿ.ರವಿಕುಮಾರ್, ಉದ್ಯಮಿ ಡಾ.ವಿ.ಕಾರ್ತಿಕ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ನ್ಯಾ. ನಾಗಮೋಹನ್ ದಾಸ್ ಆಯೋಗದ ವರದಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯ

ಪರಿಶೀಲಿಸಿದ ಬಳಿಕ ಒಳಮೀಸಲಾತಿ ಜಾರಿಗೆ ಭೀಮ'ಬಲ' ಒತ್ತಾಯ

ಮೈಸೂರು, ಆ.18(ಎಂಟಿವೈ)– ನ್ಯಾ. ನಾಗಮೋಹನದಾಸ್ ಆಯೋಗ ಸಲ್ಲಿಸಿರುವ ವರದಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ. ಈ ಹಿನ್ನೆಲೆಯಲ್ಲಿ ವರದಿಯನ್ನು ಪರಿಶೀಲಿಸಿ, ಪರಿಷ್ಕರಿಸಿ ನಂತರವೇ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದು ಭೀಮ 'ಬಲ' ಬಳಗದ ಸಂಚಾಲಕ ಎಂ.ಎಸ್.ಪರಮಾನಂದ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ.ನಾಗಮೋಹನ ದಾಸ್ ವರದಿ ತಿರಸ್ಕರಿಸುವಂತೆ ಬೆಂಗಳೂರಿನಲ್ಲಿ ಬಲಗೈ ಸಮುದಾಯ ನಡೆಸಿದ ಬೃಹತ್ ಪ್ರತಿಭಟನಾ ಸಭೆಗೆ ಭೀಮ ಬಲ ಬಳಗ ಬೆಂಬಲ ವ್ಯಕ್ತಪಡಿಸಿದೆ. ಬಲಗೈ ಸಮುದಾಯದಲ್ಲಿ ಒಂದು ಸ್ಪಷ್ಟತೆ ಇದೆ. ಒಳ ಮೀಸಲಾತಿಗೆ ನಮ್ಮ ವಿರೋಧವಿಲ್ಲ. ಆದರೆ, ಬಲಗೈ ಪಂಗಡಕ್ಕೆ ಅನ್ಯಾಯವಾಗಲು ಬಿಡುವುದಿಲ್ಲ. ಈಗ ಸಲ್ಲಿಕೆಯಾಗಿರುವ ವರದಿಯಲ್ಲಿ ಲೋಪವಿದೆ. ಆಯೋಗವು ಜಾತಿ ಜನಗಣತಿಯನ್ನು ಸಮರ್ಪಕವಾಗಿ ಮಾಡಿಲ್ಲ. ಬಲಗೈ ಸಮುದಾಯದ ಸಂಖ್ಯೆ ಹಾಗೂ ಉಪ ಜಾತಿಗಳನ್ನು ಸಮರ್ಪಕವಾಗಿ ಗುರುತಿಸುವಲ್ಲಿ ಗೊಂದಲಗಳಾಗಿವೆ. ಈ ಹಿನ್ನೆಲೆಯಲ್ಲಿ ವರದಿಯನ್ನು ಮತ್ತೆ ಸರಿಯಾಗಿ ಪರಿಶೀಲಿಸಿ, ಪರಿಷ್ಕರಿಸಿ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂಬುದೇ ನಮ್ಮ ನಿಲುವಾಗಿದೆ ಎಂದರು.

ಗಣತಿಯಲ್ಲಿ ನಮೂದಿಸಿರುವ ಎಕೆ, ಎಡಿ, ಎಎಗಳನ್ನು ರದ್ದು ಮಾಡಿ, ಆ ಪಂಗಡಗಳನ್ನು ಮೂಲ ಜಾತಿಗಳಿಂದಲೇ ಗುರುತಿಸಬೇಕು. ನ್ಯಾ. ನಾಗಮೋಹನ ದಾಸ್ ಅವರು ಈ ಜಾತಿಗಣತಿ ಪ್ರಕ್ರಿಯೆಯಲ್ಲಿ ಎ,ಬಿ.ಸಿ.ಡಿ.ಇ ಎಂದು 5 ಗುಂಪುಗಳಾಗಿ ವಿಂಗಡಿಸಿದ್ದಾರೆ. ಇದುವರೆಗೂ ಆಯೋಗಗಳು 4 ಗುಂಪುಗಳನ್ನು ರಚಿಸುತ್ತಿದ್ದವು. ಆದರೆ ಈಗ 5 ನೇ ಗುಂಪನ್ನು ರಚಿಸಿ ಮತ್ತಷ್ಟು ಗೊಂದಲ ಮಾಡಲಾಗಿದೆ. ಎಕೆ ಎಡಿ, ಎಎಗಳ ಮೂಲ ಜಾತಿ ಯಾವುದು ಎಂಬ ರಹಸ್ಯ ಹಾಗೇ ಉಳಿದಿದೆ. ಪ್ರವರ್ಗ ಬಿ ನಲ್ಲಿ ಮಾದಿಗರ ಗುಂಪಿಗೆ ಪರೆಯನ್, ಪರೆಯ ಜಾತಿಗಳನ್ನು ಸೇರಿಸಿ ಆ ಮೂಲಕ ಬಲಗೈ ಸಮುದಾಯಕ್ಕೆ ಸೇರಬೇಕಾಗಿದ್ದ 1,61,164 ಜನಸಂಖ್ಯೆಯನ್ನು ಕಡಿತಗೊಳಿಸಿದ್ದಾರೆ. ಇಂತಹ ಅಸಮಾನತೆಗಳನ್ನು ಗುರುತಿಸಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಎಲ್ಲ ಉಪ ಜಾತಿಗಳನ್ನು ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ಆರ್ಥಿಕ, ರಾಜಕೀಯ ಪ್ರಾತಿನಿಧ್ಯ ದೊರಕುವಂತೆ ನೋಡಿಕೊಳ್ಳಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಭೀಮ 'ಬಲ' ಬಳಗದ ಸದಸ್ಯರಾದ ವೇದಾವತಿ ಕಾರ್ತಿಕ್, ಅಶ್ವಿನಿ, ಶರತ್ ಗಾಂಧಿನಗರ, ಕಾರ್ತಿಕ್ ಮರಿಯಪ್ಪ ಸುರೇಶ್ ಹಾಗೂ ಇನ್ನಿತರರು ಇದ್ದರು.

ಮೈಸೂರು ವಿವಿ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಎಂಎಲ್‌ಸಿ ವಿವೇಕಾನಂದ ಮನವಿ



ಮೈಸೂರು, ಆ.18(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ ಬಾರದೇ ಪರದಾಡುತ್ತಿದ್ದು, ಕೂಡಲೇ ಗಮನಹರಿಸುವಂತೆ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರಿಗೆ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಪತ್ರ ಬರೆದು ಮನವಿ ಮಾಡಿದ್ದಾರೆ.

ಮೈಸೂರು ವಿವಿ ನಿವೃತ್ತ ನೌಕರರ ಹಿತ ಕಾಯುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಪಿಂಚಣಿ ಬಾರದೇ ಪರದಾಡುವಂತಾಗಿದೆ. ಔಷಧಿ, ಊಟೋಪಚಾರಕ್ಕೆ ಕಷ್ಟಪಡುವಂತಾಗಿದೆ ಹಾಗಾಗಿ ಕೂಡಲೇ ಪಿಂಚಣಿ ನೀಡುವತ್ತ ಗಮನ ಹರಿಸುವಂತೆ ಮನವಿ ಮಾಡಿದ್ದಾರೆ.


ಶೈಕ್ಷಣಿಕ, ಆರೋಗ್ಯ ಸೇವಾ ಯೋಜನೆಗಳಿಗೆ ಸಹಕರಿಸಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್.ರಘುನಾಥ್ ಸಮುದಾಯದ ಬಂಧುಗಳಿಗೆ ಕರೆ

ಮೈಸೂರು, ಆ.18– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ಎಕೆಬಿಎಂಎಸ್) ಶೈಕ್ಷಣಿಕ ಹಾಗೂ ಆರೋಗ್ಯ ಸೇವಾ ಯೋಜನೆಗಳಿಗೆ ಸಹಕರಿಸುವಂತೆ ಮಹಾಸಭೆಯ ಅಧ್ಯಕ್ಷ ಎಸ್.ರಘುನಾಥ್ ಸಮುದಾಯ ಬಂಧುಗಳಿಗೆ ಮನವಿ ಮಾಡಿದರು.

ಮೈಸೂರಿನ ಹೂಟಗಳ್ಳಿ ಕೆಹೆಚ್‌ಬಿ ಬಡಾವಣೆಯ ಅನಂತೇಶ್ವರ ಭವನದಲ್ಲಿ ನಡೆದ ಗಾಯತ್ರಿ ವಿಪ್ರ ಸಂಘದ 18ನೇ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಬ್ರಾಹ್ಮಣರ ಅಭಿವೃದ್ಧಿಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ದತ್ತಿನಿಧಿಗೆ ಉದಾರ ನೆರವು ನೀಡಿ ಸದೃಢಗೊಳಿಸುವ ಮೂಲಕ ಶೈಕ್ಷಣಿಕ ಹಾಗೂ ಆರೋಗ್ಯ ಯೋಜನೆಗಳ ಅನುಷ್ಠಾನಕ್ಕೆ ಕೈಜೋಡಿಸಬೇಕೆಂದು ಹೇಳಿದರು.

ನಾನು ಎಕೆಬಿಎಂಎಸ್ ಅಧ್ಯಕ್ಷನಾದ ಕೂಡಲೇ ಸಮುದಾಯದ ಬಡ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಚಿಂತನೆ ನಡೆಸಿದ್ದೇನೆ. ಈ ನಿಟ್ಟಿನಲ್ಲಿ 100 ಕೋಟಿ ರೂ. ಕಾರ್ಪಸ್ ಫಂಡ್ ಸ್ಥಾಪಿಸಲು ಗುರಿ ಹೊಂದಿದ್ದು, ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ಸಮುದಾಯದ 10 ಸಾವಿರ ಬ್ರಾಹ್ಮಣರು ತಲಾ ಒಂದು ಲಕ್ಷ ರೂ. ದೇಣಿಗೆ ನೀಡಿದರೆ ನಮ್ಮ ಗುರಿ ತಲುಪಬಹುದು ಎಂದರು.


ಮೈಸೂರಿನ ಹೂಟಗಳ್ಳಿಯ ಅನಂತೇಶ್ವರ ಭವನದಲ್ಲಿ ನಡೆದ ಗಾಯತ್ರಿ ವಿಪ್ರ ಸಂಘದ 18ನೇ ವಾರ್ಷಿಕೋತ್ಸವದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆ ಅಧ್ಯಕ್ಷ ಎಸ್.ರಘುನಾಥ್, ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಗಾಯತ್ರಿ ವಿಪ್ರ ಸಂಘದ ಗೌರವಾಧ್ಯಕ್ಷ ಬೈರಿ ನಾಗರಾಜ್, ಅಧ್ಯಕ್ಷ ಎಂ.ನಾರಾಯಣ ಭಟ್ ಮತ್ತಿತರರು ಉಪಸ್ಥಿತರಿದ್ದರು.

ಚುನಾವಣೆ ಮುಗಿದು ನಾಲ್ಕು ತಿಂಗಳು ಕಳೆದಿದೆ. ಇನ್ನು ಮುಂದೆ ನಮ್ಮ ಯಾವುದೇ ಅಭಿನಂದನೆಗಳನ್ನು ಸ್ವೀಕರಿಸದೆ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ತೀರ್ಮಾನಿಸಿದ್ದೇನೆ. ಇನ್ನು ಮುಂದೆ ರಾಜ್ಯದಲ್ಲಿ ಯಾರೂ ಅಭಿನಂದನಾ ಕಾರ್ಯಕ್ರಮವನ್ನು ಏರ್ಪಡಿಸಬಾರದು. ಆ ಕಾರ್ಯಕ್ರಮದ ಅಂದಾಜು ವೆಚ್ಚದ ಮೊತ್ತವನ್ನು ಎಕೆಬಿಎಂಎಸ್ ದತ್ತಿನಿಧಿಗೆ ದೇಣಿಗೆ ನೀಡಿದರೆ ಅದರಿಂದ ನಮ್ಮ ಸಮುದಾಯದ ಅಭಿವೃದ್ಧಿಗೆ ಸಹಾಯವಾಗುತ್ತದೆ. ಇದನ್ನು ಎಲ್ಲರೂ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಗಾಯತ್ರಿ ವಿಪ್ರ ಸಂಘದ ಗೌರವಾಧ್ಯಕ್ಷ ಬೈರಿ ನಾಗರಾಜ್ ಮಾತನಾಡಿ, ಎಕೆಬಿಎಂಎಸ್ ರಾಜ್ಯಾಧ್ಯಕ್ಷ ಎಸ್.ರಘುನಾಥ್ ಅವರ ಚಿಂತನೆ ಹಾಗೂ ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಹಾಸಭೆಯ ರಾಜ್ಯ ಉಪಾಧ್ಯಕ್ಷ ನಂ.ಶ್ರೀಕಂಠಕುಮಾರ್, ಗಾಯತ್ರಿ ವಿಪ್ರ ಸಂಘದ ಕಾರ್ಯಕ್ರಮಗಳನ್ನು ಶ್ಲಾಘಿಸಿದರು.

ಇದೇ ವೇಳೆ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು. ಶ್ರೀ ಗಣಪತಿ ಹೋಮ, ನವಗ್ರಹ ಹೋಮ, ಗಾಯತ್ರಿ ಹೋಮ ಇನ್ನಿತರ ಧಾರ್ಮಿಕ ಕಾರ್ಯಗಳನ್ನು ವೇದಬ್ರಹ್ಮ ಶ್ರೀ ಜಯರಾಮ ಶಾಸ್ತ್ರಿಗಳು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಗಾಯತ್ರಿ ವಿಪ್ರ ಸಂಘದ ಅಧ್ಯಕ್ಷ ಎಂ.ನಾರಾಯಣ ಭಟ್, ಉಪಾಧ್ಯಕ್ಷ ಜಗದೀಶ್ ಪ್ರಸಾದ್, ಪ್ರಧಾನ ಕಾರ್ಯದರ್ಶಿ ಆರ್.ಮಹೇಶ್ ಕುಮಾರ್, ಖಜಾಂಚಿ ರಘು, ಸಮಿತಿ ಸದಸ್ಯರಾದ ವಿದ್ಯಾಧರ, ವಿಶ್ವನಾಥ್, ಪದ್ಮ ಸೋಮಶೇಖರ್, ಪೂರ್ಣಿಮಾ ಗುರುರಾಜ್, ಗೀತಾ ವಾಸನ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಆ.18– ಆಗಸ್ಟ್ 20 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ನಿಮಿತ್ತ ಇನಾಂ ಉತ್ತನಹಳ್ಳಿ, ಎಂ.ಸಿ. ಹುಂಡಿ, ಕೀಳನಪುರ, ಸಿದ್ದರಾಮನ ಹುಂಡಿ, ಮೇಗಳಾಪುರ, ಮಾಧವಗೆರೆ, ಗುರುಕಾರಪುರ, ದುದ್ದಗೆರೆ, ಮಹದೇವಿ ಕಾಲೋನಿ, ಲಕ್ಷ್ಮಿಪುರ, ಪಿ.ಜಿ ಹುಂಡಿ, ಚಟ್ಟನಹಳ್ಳಿ, ಚಟ್ಟನಹಳ್ಳಿ ಪಾಳ್ಯ, ಹೊಸಹಳ್ಳಿ, ರಂಗನಾಥಪುರ, ಶ್ರೀನಿವಾಸಪುರ, ಯಡಕೊಳ, ಕಡವೆಕಟ್ಟೆಹುಂಡಿ, ಅಂಚೆಹುಂಡಿ, ದೇವೇಗೌಡನಹುಂಡಿ, ಮುದ್ದೇಗೌಡನಹುಂಡಿ, ಕುಪ್ಪೆಗಾಲ, ವರಕೋಡು ಪೇಪರ್ ಮಿಲ್, ಎಸ್.ಆರ್ ಇಂಡಸ್ಟ್ರೀಸ್, ಜಾಗ್ವಾರ್ ಸಿಮೆಂಟ್ ಇಂಡಸ್ಟ್ರೀಸ್, ರಾಜಶ್ರೀ ಇಂಡಸ್ಟ್ರೀಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು.

ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ಪ್ರದೇಶಗಳಾದ ದಟ್ಟಗಳ್ಳಿ 3ನೇ ಹಂತ, ತ್ರಿವೇಣಿ ಸೂಪರ್ ಮಾರ್ಕೆಟ್ ಏರಿಯಾ, ಕದಂಬ ಬೇಕರಿ ಏರಿಯಾ, ದಟ್ಟಗಳ್ಳಿ 'ಐ' ಬ್ಲಾಕ್, ಮುಡಾ ಎಂಪ್ಲಾಯಿಸ್ ಲೇಔಟ್, ಆಂದೋಲನ ವೃತ್ತ, ಸಬ್ ರಿಜಿಸ್ಟ್ರಾರ್ ಆಫೀಸ್, ಕನಕದಾಸನಗರ, ಆದಿತ್ಯ ಸರ್ಕಲ್, ಸೋಮನಾಥನಗರ, ಮಹಾಲಕ್ಷ್ಮೀ ಬಡಾವಣೆ, ಕೇರ್ಗಳ್ಳಿ, ಕಲ್ಕಿ ಬಡಾವಣೆ, ನಂದಿ ಸರ್ಕಲ್ ದಟ್ಟಗಳ್ಳಿ, ಜೋಡಿ ಬೇವಿನ ಮರ ದಟ್ಟಗಳ್ಳಿ, ರಾಮಕೃಷ್ಣನಗರ, ಆರ್.ಟಿ. ನಗರ, ಲಿಂಗಾಂಬುದಿಪಾಳ್ಯ, ಯೂನಿವರ್ಸಿಟಿ ಲೇಔಟ್, ವಾಸು ಲೇಔಟ್, ಕೆ ಬ್ಲಾಕ್ ಆರ್.ಕೆ ನಗರ, ಮೂಗನಹುಂಡಿ, ನಗರ್ತಹಳ್ಳಿ, ದೇವಗಳ್ಳಿ, ಬಲ್ಲಳ್ಳಿ ಅನಗಳ್ಳಿ, ತಿಬ್ಬಯ್ಯನಹುಂಡಿ, ಬೀರಿಹುಂಡಿ ಐ.ಪಿ ಲಿಮಿಟ್ಸ್ ಚಾವಿಸನಿನಿ ಮುಖ್ಯ ಇಂಜಿನಿಯರ್ ಕಚೇರಿ, ಹೆಲ್ತ್ ಸಿಟಿ, ಕಾರ್ತಿಕ ಬಡಾವಣೆ ಐ ಬ್ಲಾಕ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ನಂಜನಗೂಡು ಉಪವಿಭಾಗ–2ರ ತಗಡೂರು ಶಾಖೆಯ ತಾಯೂರು ವಿ.ವಿ. ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ನಿಮಿತ್ತ ಆಗಸ್ಟ್ 20 ರಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತಾಯೂರು, ಗೆಜ್ಜಗನಹಳ್ಳಿ, ವಡ್ಡರಹುಂಡಿ, ಈಶ್ವರಗೌಡನಹಳ್ಳಿ ಕೊಟ್ಟರಾಯನಹುಂಡಿ, ಬೀರಿಹುಂಡಿ, ಕಾಹಳ್ಳಿ, ಕಾಮಳ್ಳಿ, ಕಲ್ಲುಂದ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಹಾರಾಜ ಟ್ರೋಫಿ–2025

ಶಿಖರ್ ಶೆಟ್ಟಿ ಮಾರಕ ದಾಳಿ: ಮೈಸೂರಿಗೆ ಭರ್ಜರಿ ಜಯ



ಮೈಸೂರು ವಾರಿಯರ್ಸ್ ಆಟಗಾರರ ಗೆಲುವಿನ ಸಂಭ್ರಮ.

ಮೈಸೂರು, ಆ.18– ಮಳೆಬಾಧಿತ ಪಂದ್ಯದಲ್ಲಿ ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಮೈಸೂರು ವಾರಿಯರ್ಸ್ ಬೆಂಗಳೂರು ಬ್ಲಾಸ್ಟರ್ ವಿರುದ್ಧ 39 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಟೂರ್ನಿಯಲ್ಲಿ ಆಡಿರುವ 6 ಪಂದ್ಯಗಳಲ್ಲಿ ತಲಾ 2 ಗೆಲುವು, ಸೋಲು, ಡ್ರಾ ದೊಂದಿಗೆ 6 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 5ನೇ ಸ್ಥಾನದಲ್ಲಿದೆ.

ಮೈಸೂರಿನ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ಮಧ್ಯಾಹ್ನ ನಡೆದ ಪಂದ್ಯವನ್ನು ಮಳೆ ಹಿನ್ನೆಲೆಯಲ್ಲಿ 16 ಓವರ್‌ಗಳಿಗೆ ಸೀಮಿತಗೊಳಿಸಲಾಯಿತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ ಪರ ಯಶೋವರ್ಧನ್ ಪರಂತಪ್ 21 ಎಸೆತಗಳಲ್ಲಿ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 39 ರನ್ ಗಳಿಸಿ ತಂಡದ ಗೌರವಾನ್ವಿತ ಮೊತ್ತಕ್ಕೆ ಕಾರಣರಾದರು. ಉಳಿದಂತೆ ಎಸ್.ಯು.ಕಾರ್ತಿಕ್ 13, ಸಿ.ಎ. ಕಾರ್ತಿಕ್ 20, ಹರ್ಷಿಲ್ ಧರ್ಮನಿ 14, ಮನೀಶ್ ಪಾಂಡೆ 12, ಕೆ.ಎಸ್.ಲಂಕೇಶ್ 15, ಸುಮೀತ್ ಕುಮಾರ್ 12, ಕೆ.ಗೌತಮ್ 3 ರನ್ ಗಳಿಸಿದರು. ಅಂತಿಮವಾಗಿ ಮೈಸೂರು ವಾರಿಯರ್ಸ್ 16 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 136 ರನ್ ಗಳಿಸಿತು. ಬೆಂಗಳೂರು ಪರ ವಿದ್ಯಾಧರ್ ಪಾಟೀಲ್, ಮೊಹ್ಸಿನ್ ಖಾನ್ ತಲಾ 2, ಶುಭಾಂಗ್ ಹೆಗ್ಡೆ, ಎಂ.ಜಿ.ನವೀನ್ ತಲಾ ಒಂದೊಂದು ವಿಕೆಟ್ ಪಡೆದರು.

137 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬೆಂಗಳೂರು ಬ್ಲಾಸ್ಟರ್ಸ್ ಶಿಖರ್ ಶೆಟ್ಟಿ ಅವರ ಮಾರಕ ಬೌಲಿಂಗ್ ದಾಳಿಗೆ ತತ್ತರಿಸಿ 16 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 97 ರನ್ ಗಳಿಸಿ ಸೋಲು ಅನುಭವಿಸಿತು. ತಂಡದ ಪರ ಮಾಧವ್ ಪ್ರಕಾಶ್ ಬಜಾಜ್ 20 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಒಳಗೊಂಡ 34 ರನ್ ಗಳಿಸಿದರೇ, ವಿದ್ಯಾಧರ್ ಪಾಟೀಲ್ 12, ಶುಭಾಂಗ್ ಹೆಗ್ಡೆ 13, ರೋಹನ್ ಪಟೇಲ್ 10 ರನ್ ಗಳಿಸಿದರು. ಆದರೆ ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು.

ಮೈಸೂರು ಪರ ಶಿಖರ್ ಶೆಟ್ಟಿ 3, ಕೃಷ್ಣಪ್ಪ ಗೌತಮ್ 2, ಕೋದಂಡ ಅಜಿತ್ ಕಾರ್ತಿಕ್, ಗೌತಮ್ ಮಿಶ್ರಾ, ಎಲ್.ಆರ್.ಕುಮಾರ್ ತಲಾ ಒಂದೊಂದು ವಿಕೆಟ್ ಪಡೆದರು. ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ ಶಿಖರ್ ಶೆಟ್ಟಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್‌ಗೆ ಜಯ

ಮೈಸೂರು, ಆ.18– ಸ್ಮರಣ್ ರವಿಚಂದ್ರನ್ ಅವರ ಅರ್ಧಶತಕದ ನೆರವಿನಿಂದ ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಗುಲ್ಬರ್ಗಾ ಮಿಸ್ಟಿಕ್ಸ್ 4 ವಿಕೆಟ್‌ಗಳ ಜಯ ಗಳಿಸಿದೆ. ಮೈಸೂರಿನ ಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಸೋಮವಾರ ಸಂಜೆ ನಡೆದ ಮತ್ತೊಂದು ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ನೀಡಿದ 159 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಲ್ಬರ್ಗಾ 19.4 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು. ಗುರಿ ಬೆನ್ನತ್ತಿದ ಗುಲ್ಬರ್ಗಾ ತಂಡದ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 15 ರನ್ ಆಗುವಷ್ಟರಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. 4ನೇ ವಿಕೆಟ್‌ಗೆ ಜೊತೆಯಾದ ಸ್ಮರಣ್ ರವಿಚಂದ್ರನ್ ಹಾಗೂ ಪ್ರಜ್ವಲ್ ಪವನ್ 71 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು.

ಪ್ರವೀಣ್ 28 ಎಸೆತಗಳಲ್ಲಿ 3 ಸಿಕ್ಸರ್, 2 ಬೌಂಡರಿ ಒಳಗೊಂಡ 37 ರನ್ ಗಳಿಸಿದರೇ, ರವಿಚಂದ್ರನ್ 29 ಎಸೆತಗಳಲ್ಲಿ 3 ಸಿಕ್ಸರ್, 1 ಬೌಂಡರಿ ಒಳಗೊಂಡ 52 ರನ್ ಗಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಉಳಿದಂತೆ ಬೆಂಗಳೂರು ಮೋಹಿತ್ 26, ಪ್ರವೀಣ್ ದುಬೆ 19, ವಿಜಯ್ ಕುಮಾರ್ ವೈಶಾಕ್ 2 ರನ್ ಗಳಿಸಿದರು. ಹುಬ್ಬಳ್ಳಿ ಟೈಗರ್ಸ್ ಪರ ಕೆ.ಸಿ.ಕಾರಿಯಪ್ಪ, ಯಶ್‌ರಾಜ್ ಪುಂಜ ತಲಾ 2, ಸಮರ್ಥ ನಾಗರಾಜ್, ರಿತೇಶ್ ಭಟ್ಕಳ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ತಂಡದ ಪರ ಕೃಷ್ಣನ್ ಶ್ರೀಜಿತ್ 45 ಎಸೆತಗಳಲ್ಲಿ 2 ಸಿಕ್ಸರ್, 4 ಬೌಂಡರಿ ಒಳಗೊಂಡ 52 ರನ್ ಗಳಿಸಿದರು. ಉಳಿದಂತೆ ಶಿವಕುಮಾರ್ ರಕ್ಷಿತ್ 22 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್ ಒಳಗೊಂಡ 36, ತಾಹ 17, ಮನ್ವಂತ್ ಕುಮಾರ್ 10, ದೇವದತ್ತ ಪಡಿಕ್ಕಲ್ 7 ರನ್ ಗಳಿಸಿದರು. ಗುಲ್ಬರ್ಗಾ ಪರ ಲ್ಯಾವೀಶ್ ಕುಶಾಲ್, ಕೆ.ಶಶಿಕುಮಾರ್ ತಲಾ 2, ಪೃಥ್ವಿರಾಜ್ ಶೇಖಾವತ್, ಮೋನಿಶ್ ರೆಡ್ಡಿ 1 ವಿಕೆಟ್ ಉರುಳಿಸಿದರು. ಸ್ಮರಣ್ ರವಿಚಂದ್ರನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಒಳಮೀಸಲಾತಿ ಕುರಿತ ವರದಿ ಅವೈಜ್ಞಾನಿಕ

● ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ● ಬೆಂಗಳೂರಲ್ಲಿ ಬೃಹತ್ ಪ್ರತಿಭಟನೆ



ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯಲ್ಲಿ ಶ್ರೀ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮತ್ತಿತರರು ಪಾಲ್ಗೊಂಡಿದ್ದರು.

ಮೈಸೂರು,ಆ.18(ಪಿಎಂ)– ಒಳಮೀಸಲಾತಿ ಸಂಬಂಧ ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್. ನಾಗಮೋಹನ್ ದಾಸ್ ಆಯೋಗ ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಅವೈಜ್ಞಾನಿಕ ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಕುಲಶಾಸ್ತ್ರೀಯ ಅಧ್ಯಯನದ ಮೂಲಕ ದತ್ತಾಂಶ ಕ್ರೋಢೀಕರಿಸಿ ಜಾತಿ ಸಮೀಕ್ಷೆಯಿಂದ ಈ ವರದಿ ಸಿದ್ಧಗೊಂಡಿಲ್ಲ. ನಿವೃತ್ತ ನ್ಯಾಯಮೂರ್ತಿ ಹೆಚ್.ಎಸ್.ನಾಗಮೋಹನ್ ದಾಸ್ ಅವರು ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧವಾಗಿ ಜಾತಿ ಸಮೀಕ್ಷೆ ಮಾಡಿ ಸರ್ಕಾರಕ್ಕೆ ಅವೈಜ್ಞಾನಿಕ ವರದಿ ಸಲ್ಲಿಸಿದ್ದಾರೆ. ಈ ವರದಿಯು ಕೇವಲ ಒಂದು ವರ್ಗ ಓಲೈಸುವುದಕ್ಕಾಗಿ ಸಿದ್ಧಪಡಿಸಿದಂತಿದೆ. ಕೂಡಲೇ ಸರ್ಕಾರ ಈ ವರದಿಯನ್ನು ಪರಿಷ್ಕರಿಸಿ ನಂತರ ಜಾರಿ ಮಾಡಬೇಕೆಂದು ಆಗ್ರಹಿಸಿದರು. ಶ್ರೀ ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಆ.23, ಕೊಡವಾಮೆರ ಆರ ಬೇರ ಕಾರ್ಯಕ್ರಮ

ಮೈಸೂರು,ಆ.18(ಪಿಎಂ)– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕೊಡವ ಸಮಾಜ ಮೈಸೂರು ಸಂಯುಕ್ತಾಶ್ರಯದಲ್ಲಿ ಆ.23ರಂದು 'ಕೊಡವಾಮೆರ ಆರ ಬೇರ' ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರಿನ ಕೊಡವ ಸಮಾಜದ ಆವರಣದಲ್ಲಿ ಅಂದು ಬೆಳಗ್ಗೆ 9.30ಕ್ಕೆ ಕಾರ್ಯಕ್ರಮ ಉದ್ಘಾಟನೆಯಾಗಲಿದೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರರೂ ಆದ ಶಾಸಕ ಎ.ಎಸ್.ಪೊನ್ನಣ್ಣ, ಶಾಸಕರಾದ ಕೆ.ಹರೀಶ್‌ಗೌಡ, ಡಾ.ಮಂತರ್‌ಗೌಡ, ಟಿ.ಎಸ್.ಶ್ರೀವತ್ಸ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಕೆಪಿಸಿಸಿ ರಾಜ್ಯ ಪ್ರಚಾರ ಸಮಿತಿ ಉಪಾಧ್ಯಕ್ಷೆ ಶಾಂತೆಯಂಡ ವೀಣಾ ಅಚ್ಚಯ್ಯ, ಕೊಡಗು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಕೊಡವ ಸಮಾಜ ಮೈಸೂರು ಅಧ್ಯಕ್ಷ ಪೊಂಜಂಡ ಎ.ಗಣಪತಿ, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಮಾಳೇಟಿರ ಸುಬ್ಬಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಪಾಲ್ಗೊಳ್ಳಲಿ ದ್ದಾರೆ. ಮಂಗಳೂರಿನ ಬಲ್ಮಠ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಉಪನ್ಯಾಸಕರಾದ ಡಾ. ಬೋಡುಕುಟ್ಟಡ ರಾಧಿಕ ಕುಟ್ಟಪ್ಪ ವಿಷಯ ಮಂಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನಟ ದರ್ಶನ್ ಬಳ್ಳಾರಿ ಜೈಲಿಗೆ ಶಿಫ್ಟ್ ವಿಚಾರ: ಆ.23ಕ್ಕೆ ಮುಂದೂಡಿಕೆ



ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಎ2 ಆರೋಪಿ ನಟ ದರ್ಶನ್‌ರನ್ನು ಪರಪ್ಪನ ಅಗ್ರಹಾರದಿಂದ ಬಳ್ಳಾರಿ ಜೈಲಿಗೆ ಶಿಫ್ಟ್ ಮಾಡುವ ವಿಚಾರ ಸಂಬಂಧ ಸಿಸಿಎಚ್ 64ರಲ್ಲಿ ವಿಚಾರಣೆ ನಡೆಸಿ, ಆ.23ಕ್ಕೆ ವಿಚಾರಣೆಯನ್ನು ಮುಂದೂಡಿದೆ.

ವಿಚಾರಣೆ ನಡೆಸಿದ ನ್ಯಾಯಾಧೀಶರು, ದರ್ಶನ್ ಪರ ವಕೀಲರಿಗೆ ಅಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿ, ಆ.23ಕ್ಕೆ ವಿಚಾರಣೆಯನ್ನು ಮುಂದೂಡಿದರು.

ಇನ್ನು ಸರ್ಕಾರಿ ಪರ ವಕೀಲರು ಹಾಜರಾಗಿ, ಕೊಲೆ ಕೇಸ್‌ನಲ್ಲಿ ಜಾಮೀನು ಸಿಗುವ ಮುನ್ನ ದರ್ಶನ್ ಸೇರಿದಂತೆ ಇತರೆ ಆರೋಪಿಗಳು ಯಾವ್ಯಾವ ಜೈಲಿನಲ್ಲಿದ್ದರೋ ಅಲ್ಲಿಗೆ ಶಿಫ್ಟ್ ಮಾಡಬೇಕು ಎಂದು ಅರ್ಜಿ ಸಲ್ಲಿಸಿದ್ದರು.

ಆದರೆ ಜಾಮೀನು ರದ್ದಾದ ದಿನವೇ ದರ್ಶನ್ ಪರ ವಕೀಲರು ಒಂದು ವೇಳೆ ಬಳ್ಳಾರಿಗೆ ಶಿಫ್ಟ್ ಮಾಡುವುದಾದರೆ ನಮ್ಮ ವಾದವನ್ನು ಅಲಿಸಬೇಕು ಎಂದು ಮನವಿ ಮಾಡಿಕೊಂಡಿದ್ದರು.

ಮತಗಳ್ಳತನ: ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಮಹಾಭಿಯೋಗ ಪ್ರಸ್ತಾವನೆಗೆ ವಿಪಕ್ಷಗಳು ಚಿಂತನೆ

ನವದೆಹಲಿ, ಆ.18– ಮತ ಕಳ್ಳತನ ಆರೋಪದ ಮೇಲೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಸಂಸತ್ತಿನಲ್ಲಿ ಮಹಾಭಿಯೋಗ ಪ್ರಸ್ತಾವನೆ ಮಂಡಿಸಲು ವಿರೋಧ ಪಕ್ಷಗಳ ಇಂಡಿಯಾ ಮೈತ್ರಿಕೂಟ ಚಿಂತನೆ ನಡೆಸುತ್ತಿದೆ ಎಂದು ತಿಳಿದುಬಂದಿದೆ.

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಮತ್ತು ಮತ ಕಳ್ಳತನದ ವಿರುದ್ಧ ವಿರೋಧ ಪಕ್ಷಗಳು ಪ್ರತಿಭಟನೆಯನ್ನು ತೀವ್ರಗೊಳಿಸುತ್ತಿದೆ. ಈ ಮಧ್ಯೆ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ದೋಷಾರೋಪಣೆ ಮಾಡಲು ಇಂಡಿಯಾ ಮೈತ್ರಿಕೂಟ ನಿರ್ಧರಿಸಿದೆ ಎಂದು ತಿಳಿದುಬಂದಿದೆ.

ಎಐಸಿಸಿ ಅಧ್ಯಕ್ಷರೂ ಆದ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಅಧ್ಯಕ್ಷತೆಯಲ್ಲಿ ನಡೆದ ಇಂಡಿಯಾ ಮೈತ್ರಿಕೂಟದ ನಾಯಕರ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ವರದಿಗಳಿಂದ ತಿಳಿದುಬಂದಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ವಿರೋಧ ಪಕ್ಷದ ನಾಯಕರೊಬ್ಬರು ಇಂಡಿಯಾ ಮೈತ್ರಿಕೂಟದ ಎಲ್ಲಾ ಸದಸ್ಯರು ಈ ಪ್ರಸ್ತಾಪವನೆಗೆ ಒಪ್ಪಿಗೆ ಸೂಚಿಸಿದ್ದಾರೆ. ಕಾನೂನು ವಿಧಾನಗಳ ಕುರಿತು ಶೀಘ್ರದಲ್ಲೇ ಚರ್ಚೆ ನಡೆಯಲಿದೆ. ಈ ಪ್ರಕ್ರಿಯೆಯು ನ್ಯಾಯಾಧೀಶರ ಮಹಾಭಿಯೋಗದಂತೆಯೇ ಇರಲಿದೆ ಎಂದು ಹೇಳಿದ್ದಾರೆ.

ರಾಹುಲ್ ಗಾಂಧಿ ಅವರ ಮತ ಕಳವು ಆರೋಪದ ನಂತರ ಚುನಾವಣಾ ಆಯೋಗವು ಪತ್ರಿಕಾಗೋಷ್ಠಿ ನಡೆಸುವ ಮೂಲಕ ಪ್ರತಿಕ್ರಿಯಿಸಿತ್ತು. ಈ ಮೂಲಕ ವಿರೋಧ ಪಕ್ಷಗಳನ್ನು ತರಾಟೆಗೆ ತೆಗೆದುಕೊಂಡಿತ್ತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ 'ಮತ ಕಳವು' ಆರೋಪ ಮತ್ತು ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ವಿರೋಧ ಪಕ್ಷದ ನಿರಂತರ ಪ್ರತಿಭಟನೆಯ ನಡುವೆ ಚುನಾವಣಾ ಆಯೋಗ (ಇಸಿಐ) ಭಾನುವಾರ ಪತ್ರಿಕಾಗೋಷ್ಠಿ ನಡೆಸಿ ಪ್ರತಿಕ್ರಿಯೆಯನ್ನು ನೀಡಿತ್ತು. ಮತದಾರರ ಪಟ್ಟಿಯಲ್ಲಿ ಅಕ್ರಮಗಳ ಆರೋಪದ ಕುರಿತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಏಳು ದಿನಗಳಲ್ಲಿ ಅಫಿಡವಿಟ್ ಸಲ್ಲಿಸಬೇಕು. ಇಲ್ಲದಿದ್ದರೆ ಅವರ ಮತ ಕಳ್ಳತನದ ಆರೋಪಗಳನ್ನು ಆಧಾರರಹಿತ ಮತ್ತು ಅಮಾನ್ಯವೆಂದು ಪರಿಗಣಿಸಲಾಗುತ್ತದೆ ಎಂದು ಮುಖ್ಯ ಚುನಾವಣಾ ಆಯುಕ್ತರು ತಿಳಿಸಿದ್ದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ನಗರ, ವಿ.ವಿ ಮೊಹಲ್ಲಾ, 11ನೇ ಕ್ರಾಸ್, 7ನೇ ಮುಖ್ಯ ರಸ್ತೆ, ನಂಬರ್ 2852 ರ ವಾಸಿಯಾದ ಶ್ರೀಮತಿ ಸೇಜಲ್ ಯು. ಪಟೇಲ್ ಕೋಂ ಉಮೇಶ್ ಬಿ. ಪಟೇಲ್ ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿರ್ಬಂಧಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1 : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್. 43/1 ರಲ್ಲಿನ ಒಂದು ಎಕರೆ ಹದಿಮೂರು ಗುಂಟೆ (1.13.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 43/2 ; ಪಶ್ಚಿಮಕ್ಕೆ: ಸರ್ವೆ ನಂಬರ್ 44/1, 3 ; ಉತ್ತರಕ್ಕೆ: ಸರ್ವೆ ನಂಬರ್ 47 ; ದಕ್ಷಿಣಕ್ಕೆ: ಸರ್ವೆ ನಂಬರ್ 315.

ಐಟಂ–2 : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್. 43/2 ರಲ್ಲಿನ ಒಂದು ಎಕರೆ ಏಳು ಗುಂಟೆ (1.07.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 43/3 ; ಪಶ್ಚಿಮಕ್ಕೆ: ಸರ್ವೆ ನಂಬರ್ 43/1 ; ಉತ್ತರಕ್ಕೆ: ಸರ್ವೆ ನಂಬರ್ 47 ; ದಕ್ಷಿಣಕ್ಕೆ: ಸರ್ವೆ ನಂಬರ್ 315.

ಐಟಂ–3 : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್. 44/3 ರಲ್ಲಿನ ಎರಡು ಎಕರೆ ಎರಡು ಗುಂಟೆ (2.02.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 43/1 ; ಪಶ್ಚಿಮಕ್ಕೆ: ಸರ್ವೆ ನಂಬರ್ 45 ; ಉತ್ತರಕ್ಕೆ: ಸರ್ವೆ ನಂಬರ್ 47 ; ದಕ್ಷಿಣಕ್ಕೆ: ಸರ್ವೆ ನಂಬರ್ 315.

ಐಟಂ–4 : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್. 315/6 ರಲ್ಲಿನ ಹದಿನಾಲ್ಕು ಗುಂಟೆ (0.14.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂಬರ್ 315/5 ; ಪಶ್ಚಿಮಕ್ಕೆ: ಹಳ್ಳ ; ಉತ್ತರಕ್ಕೆ: ಸರ್ವೆ ನಂಬರ್ 44 ; ದಕ್ಷಿಣಕ್ಕೆ: ನಾಲ.

Sd/- M.N. Prakash Kalappa, KAR-1996-2000, Advocate & Legal Consultant, #67/7A, P.R.I. Complex, No. 2 & 3, 1st Floor, New Sayyaji Rao Road, Fort Mohalla, Mysuru-570 004. Mob: 9343112535

ಮೈಸೂರು: 14–08–2025